ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) :– ಮಾನ್ಯ ಅಧ್ಯಕ್ಷರೇ, ಇವತ್ತು ಕಾವೇರಿ ಜಲವಿವಾದದ ಒಂದು ಸಂದರ್ಭದಲ್ಲಿ ನಾವು ಒಂದು ಪ್ರಿವಿಲೇಜ್ ಮೋಷನ್‌ನ್ನು ಕಳುಹಿಸಿಕೊಟ್ಟಿದ್ದೇವೆ. ಅದರ ಬಗ್ಗೆ ಈಗ ಚರ್ಚೆ ಪ್ರಾರಂಭವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಅದೂ ಅಲ್ಲದೆ ನಾನು ತಮಗೆ ಕುಣಿಗಲ್‌ನಲ್ಲಿ ನಡೆದ ಘಟನೆಯ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ಎರಡನೆಯದಾಗಿ ಹೈಕೋರ್ಟ್ ಮುಂದೆ ಅಡ್ವೊಕೇಟ್ ಏನು ಸ್ಟ್ರೈಕ್ ಮಾಡುತ್ತಿದ್ದಾರೆ ಆ ಹಂಗರ್ ಸ್ಟ್ರೈಕ್ ನಿಲ್ಲಬೇಕು, ಅದರ ಬಗ್ಗೆ ಸರಕಾರ ಕ್ರಮ ತೆಗೆದುಕೊಳ್ಳಬೇಕೆಂದು ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ಈ ರೀತಿ ಪ್ರಮುಖವಾದ ಕೆಲವು ನೋಟೀಸುಗಳನ್ನು ನಾವು ಕಳುಹಿಸಿಕೊಟ್ಟಿದ್ದೇವೆ. ಇವುಗಳ ಬಗ್ಗೆ ಚರ್ಚೆಯಾಗುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಈ ಅಧಿವೇಶನ ಮುಂದುವರೆಯುವ ಸಂದರ್ಭ ಇಲ್ಲ ಎಂದು ಚರ್ಚೆಯಲ್ಲಿ ವ್ಯಕ್ತವಾಗಿರುವುದರಿಂದ, ರಾತ್ರಿ ಎಷ್ಟು ಹೊತ್ತಾದರೂ ನಾವು ಕುಳಿತುಕೊಳ್ಳುವುದಕ್ಕೆ ಸಿದ್ಧವಾಗಿದ್ದೇವೆ. ನಾವೇನು ಪ್ರಮುಖವಾದ ವಿಷಯಗಳನ್ನು ನೋಟೀಸ್ ಮೂಲಕ ಕಳುಹಿಸಿಕೊಟ್ಟಿದ್ದೇವೆ ಅದರ ಬಗ್ಗೆ ಚರ್ಚೆಗೆ ತಾವು ಅವಕಾಶ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ (ವೇಮಗಲ್) :– ಮಾನ್ಯ ಅಧ್ಯಕ್ಷರೇ, ಒಂದು ವಿಚಾರವನ್ನು ತಮ್ಮ ಗಮನಕ್ಕೆ ತಮ್ಮ ಕೊಠಡಿಯಲ್ಲೂ ತಂದಿದ್ದೇನೆ, ಈ ಸದನದಲ್ಲೂ ಪ್ರಸ್ತಾಪ ಮಾಡಿದ್ದೇನೆ. ವಿಷಯ ಏನೆಂದರೆ, ರೇಷ್ಮೆ ಗೂಡಿನ ಬೆಲೆ ಸುಮಾರು 200–220 ರೂಪಾಯಿ ಇದ್ದುದು ಈಗ 50–60 ರೂಪಾಯಿಗೆ ಇಳಿದಿದೆ. ರೇಷ್ಮೆ ಉತ್ಪಾದನೆ ಜಾಸ್ತಿಯಾಗಬೇಕು, ದೇಶಕ್ಕೆ ವಿದೇಶಿ ವಿನಿಮಯ ತರಬೇಕೆನ್ನತಕ್ಕಂಥಾದ್ದು ಒಂದು ಕಡೆ ಇದ್ದು, ಇನ್ನೊಂದು ಕಡೆ ನೋಡಿದರೆ ಹೊರದೇಶದಿಂದ ರೇಷ್ಮೆಯನ್ನು ತರಿಸುತ್ತಿರತಕ್ಕಂಥಾದ್ದು ಇದಕ್ಕೆ ಮೂಲ ಕಾರಣವಾಗಿದೆ. ಇದರ ಬಗ್ಗೆ ವಿಸ್ತಾರವಾಗಿ ಚರ್ಚೆ ಆಗಬೇಕಾಗಿದೆ. ನಾನು ಇದರ ಬಗ್ಗೆ ಒಂದು ಗಮನಸೆಳೆಯುವ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ತಾವು ಅದಕ್ಕೆ ಉತ್ತರ ಕೊಡಲು ಸರಕಾರಕ್ಕೆ ತಿಳಿಸಬೇಕೆಂದು ನನ್ನ ಮನವಿಯನ್ನು ತಮ್ಮ ಮುಂದೆ ಇಟ್ಟಿದ್ದೇನೆ.

ಹಕ್ಕುಚ್ಯುತಿ ಪ್ರಸ್ತಾವ

ವಿಷಯ : ಕಾವೇರಿ ಜಲವಿವಾದದಲ್ಲಿ ಇಡೀ ಸದನದ ಹಕ್ಕುಚ್ಯುತಿ ಆಗಿರುವ ಬಗ್ಗೆ

ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ನಿಯಮ 190ರ ಪ್ರಕಾರ ನಾನು ಒಂದು ಹಕ್ಕುಚ್ಯುತಿ ಪ್ರಸ್ತಾವನೆಯನ್ನು ಎತ್ತುವುದಕ್ಕೆ ತಮ್ಮ ಅನುಮತಿಯನ್ನು ಕೇಳುವುದಕ್ಕೆ ನಿಂತಿದ್ದೇನೆ. ಪೂರ್ವಭಾವಿಯಾಗಿ ನನ್ನ ವಾದ ಏನೆಂದರೆ ಇದರಲ್ಲಿ ಇಡೀ ಸದನದ ಹಕ್ಕುಚ್ಯುತಿ ಆಗಿದೆ ಎಂಬುದು, ಅದು ಕೇವಲ ಸದಸ್ಯರದ್ದಲ್ಲ. ಆದುದರಿಂದ ಈ ಸದನದ ಹಕ್ಕುಚ್ಯುತಿ ನಿರ್ಣಯಕ್ಕೆ ಪ್ರತಿಪಕ್ಷದ ಎಲ್ಲಾ ಮುಖಂಡರೂ ಸಹಿ ಹಾಕಿ ಒಟ್ಟಿಗೆ ಕಳುಹಿಸಿದ್ದೇವೆ. ಶ್ರೀಮಾನ್ ಚಂದ್ರೇಗೌಡರು, ಶ್ರೀಮಾನ್ ಯಡಿಯೂರಪ್ಪನವರು, ಬೈರೇಗೌಡರು, ವಾಟಾಳ್ ನಾಗರಾಜ್‌ರವರು, ಪಿ.ಸಿ. ಸಿದ್ದನಗೌಡರವರು ಹೀಗೆ ನಾವು ಅನೇಕ ಜನರು ಸಹಿ ಹಾಕಿ ಕಳುಹಿಸಿದ್ದೇವೆ.

ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್) : ಮಾನ್ಯ ಅಧ್ಯಕ್ಷರೇ, ಅದಕ್ಕೆ ನಾನು ರುಜು ಮಾಡಿಲ್ಲ. ರುಜು ಮಾಡದೇ ಹೋದರೂ ಮಾತನಾಡುವುದಕ್ಕೆ ಅವಕಾಶ ಇದೆ ಎಂದು ಭಾವಿಸಿಕೊಂಡಿದ್ದೇನೆ. ಈ ನಿರ್ಣಯದ ಬಗ್ಗೆ ಈ ಮನೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದಾದರೆ ನನಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : 190ನೇ ನಿಯಮದಂತೆ ಹಕ್ಕುಚ್ಯುತಿ ವಿಚಾರ ಎತ್ತುವುದಕ್ಕೆ ಮುನ್ನ 191ನೇ ನಿಯಮದಂತೆ ನಾನು ಸೂಚನಾ ಪತ್ರವನ್ನು ತಮಗೆ ಕಳುಹಿಸಿಕೊಡಬೇಕು. ಈ ಸೂಚನಾ ಪತ್ರಕ್ಕೆ ಸಂಬಂಧಪಟ್ಟಂತೆ ದಸ್ತಾವೇಜು ಏನಾದರೂ ಇದ್ದರೆ ಅದನ್ನೂ ನಾವು ಕೊಡಬೇಕು. ಈ ಸಂಬಂಧ ಒಂದು ದಸ್ತಾವೇಜನ್ನು ನಾವು ತಮಗೆ ಕಳುಹಿಸಿಕೊಟ್ಟಿದ್ದೇವೆ. ಈ ದಸ್ತಾವೇಜಿನ ಕಸ್ಟೋಡಿಯನ್ ತಾವೇ ಇದ್ದೀರಿ. ಆದುದರಿಂದ ಮೊದಲು ನಾವು 6–7–1991ರಂದು ಈ ಸದನದಲ್ಲಿ ಒಂದು ನಿರ್ಣಯ ಮಾಡಿದ್ದೆವು. ಈ ನಿರ್ಣಯ ಸರ್ವ ಸಮ್ಮತವಾದಂಥ ನಿರ್ಣಯ. ಇಂತಹ ನಿರ್ಣಯಗಳು ಹೊಸ ಸರಕಾರ ಬಂದಮೇಲೆ ಈ ವಿಚಾರದಲ್ಲಿ ಮೂರು ನಿರ್ಣಯಗಳು ಆಗಿದ್ದಾವೆ. ಮೊದಲಿನ ನಿರ್ಣಯ ಶ್ರೀಮಾನ್ ವೀರೇಂದ್ರಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ನಾವು ನಿರ್ಣಯ ಮಂಡನೆ ಮಾಡಿದ್ದೆವು. ಆ ನಿರ್ಣಯ 1990ನೇ ಇಸವಿ ಜೂನ್ 5ನೇ ತಾರೀಖು ಮಾಡಿದ್ದು. ಆ ನಿರ್ಣಯವನ್ನು ಮಂಡನೆ ಮಾಡುತ್ತಾ ಈ ಸರಕಾರದ ಮೇಲೆ ಪೂರ್ಣ ವಿಶ್ವಾಸ ಇಟ್ಟು ನಂಬಿಕೆ ವ್ಯಕ್ತ ಮಾಡಿ ರಾಜ್ಯದ ಕಾವೇರಿ ಜಲಾನಯನ ಪ್ರದೇಶದ ಹಿತರಕ್ಷಣೆ ಈ ಸರಕಾರದಿಂದ ಆಗುತ್ತದೆ ಎನ್ನತಕ್ಕಂಥ ವಿಶ್ವಾಸವನ್ನು ಆಗ ಅಭಿವ್ಯಕ್ತ ಮಾಡಿದ್ದೆವು.

ಆ ನಿರ್ಣಯ ಹೀಗೆ ಇತ್ತು. ಕಾವೇರಿ ನದಿ ವಿವಾದದಲ್ಲಿ ನಮ್ಮನ್ನು ನಮ್ಮ ರಾಜ್ಯದ ಹಿತಾಸಕ್ತಿಯನ್ನು ಕಾಪಾಡಲು ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳಲು ಸರ್ಕಾರಕ್ಕೆ ಒಮ್ಮತದ ಸಂಪೂರ್ಣವಾದ ಸಹಕಾರವನ್ನು ನೀಡಲು ಸರ್ವಾನುಮತದಿಂದ ನಿರ್ಣಯಿಸಲಾಯಿತು. ಅದಾದ ಮೇಲೆ ದಿನಾಂಕ 25–6–91ಕ್ಕೆ ಕಾವೇರಿ ನ್ಯಾಯಾಧೀಕರಣದವರು ಅನೇಕ ಪ್ರಕ್ರಿಯೆಗಳ ಮಧ್ಯೆ ಒಂದು ಮಧ್ಯೆಕಾಲೀನ ತೀರ್ಪು ಕೊಟ್ಟರು. ಆ ತೀರ್ಪು ರಾಜ್ಯದ ಜನರ ಹಿತಕ್ಕೆ ಮಾರಕವಾಗಿದೆ. ಜನರ ಹಿತವನ್ನು ಬಲಿ ಕೊಡಲಾಗಿದೆ. ಮತ್ತು ನಮ್ಮ ಹಕ್ಕನ್ನು ನಾವು ಅಲ್ಲಿ ಏನು ಪ್ರಸ್ತಾಪ ಮಾಡಿದ್ದೆವು ಆ ಹಕ್ಕಿಗೆ ಮುಂದೆ ಭಾದಕವಾಗುತ್ತದೆ ಎನ್ನತಕ್ಕಂಥ ನಮ್ಮ ಕಳಕಳಿಯನ್ನು ಅಭಿವ್ಯಕ್ತ ಮಾಡಿದಾಗ ದಿನಾಂಕ 6–7–91ರಲ್ಲಿ ಮತ್ತೊಂದು ನಿರ್ಣಯವನ್ನು ಈ ಶಾಸನ ಸಭೆ ಮಾಡಿತು. ಆ ನಿರ್ಣಯ ಹೀಗಿದೆ. ದಿನಾಂಕ : 25–6–1991ರಂದು ಕಾವೇರಿ ಜಲವಿವಾದದ ಬಗ್ಗೆ ಕಾವೇರಿ ನ್ಯಾಯಾಧೀಕರಣ ನೀಡಿರುವ ಮಧ್ಯಂತರ ಆಜ್ಞೆ ಕರ್ನಾಟಕ ರಾಜ್ಯದ ಹಿತಕ್ಕೆ ಮಾರಕವಾಗಿರುವುದರಿಂದ ಮತ್ತು ಟ್ರಿಬ್ಯುನಲ್ ಕಾರ್ಯವ್ಯಾಪ್ತಿಗೆ ಹೊರಗತಾಗಿದ್ದು ಕಾನೂನಿನ ವಾಸ್ತವಿಕತೆ ಹಾಗೂ ವ್ಯವಹಾರಿಕತೆಗೆ ಬಹಳ ದೂರವಾಗಿರುವುದರಿಂದ ಈ ಸಭೆಯು ಮಧ್ಯಂತರ ಆಜ್ಞೆಯನ್ನು ತಿರಸ್ಕರಿಸಬೇಕು ಎಂದು ಸರ್ವಾನುಮತದಿಂದ ಸರ್ಕಾರವನ್ನು ಒತ್ತಾಯಿಸುತ್ತದೆ. ಇದು ನಿರ್ಣಯ. ಎರಡನೆಯ ಭಾಗದಲ್ಲಿ ಕೇಂದ್ರ ಸರ್ಕಾರ ಏನು ಮಾಡಬೇಕು ಎನ್ನತಕ್ಕಂಥಾದ್ದು ಆ ನಿರ್ಣಯದಲ್ಲಿ ಪ್ರಸ್ತಾಪ ಮಾಡಿದ್ದೇವೆ. ಈ ಹಿನ್ನಲೆಯಲ್ಲಿ ರಾಷ್ಟ್ರದ ಜಲ ನೀತಿಯನ್ನು ರೂಪಿಸಿ ಅಂತರ್‌ರಾಜ್ಯಗಳ ಜಲವಿವಾದ 1056ನೇ ಶಾಸನಕ್ಕೆ ತಕ್ಕ ತಿದ್ದುಪಡಿ ಆಗುವವರೆಗೂ.......

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ, ಮಾನ್ಯ ಅಧ್ಯಕ್ಷರೇ ತಾವು ಅಪ್ಪಣೆ ಕೊಟ್ಟರೆ ಹಾಗೂ ಅವರು ಒಂದು ನಿಮಿಷ ಈಲ್ಡ್ ಆಗುವುದಾದರೆ ನಾವು ಕುಣಿಗಲ್ ಹಗರಣದ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇವೆ. ತಾವು ಕೂಡ ಅದಕ್ಕೆ ಪ್ರಮುಖವಾಗಿ ಸಹಿ ಮಾಡಿದ್ದೀರಿ. ನಮ್ಮ ಕಾರ್ಯಕಲಾಪಗಳ ಪದ್ಧತಿ ಪ್ರಕಾರ ಮೊದಲು ನಿಲುವಳಿ ಸೂಚನೆಯನ್ನು ಏನಾದರೂ ನಾವು ಕಳುಹಿಸಿ ಕೊಟ್ಟಾಗ ಅದರ ಬಗ್ಗೆ ಚರ್ಚೆ ಆಗಿ ಅದರ ಮಹತ್ವ ಏನಿದೆ ಯಾವ ಹಿನ್ನೆಲೆಯಲ್ಲಿ ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇವೆ, ಎಂಬುದನ್ನು ನೋಡಬೇಕು, ಏಕೆಂದರೆ ಸನ್ಮಾನ್ಯ ಅಧ್ಯಕ್ಷರೇ ತಾವು ಅದಕ್ಕೆ ಮೊದಲು ಅವಕಾಶ ಮಾಡಿಕೊಡಬೇಕು, ಮಾಡಿಕೊಟ್ಟು ತಾವು ಅದನ್ನು ಅಲೋ ಮಾಡುತ್ತೀರೋ ಅಥವಾ ಇಲ್ಲವೋ, ಅದರ ಬಗ್ಗೆ ನಾವು.....

ಶ್ರೀ ಡಿ.ಬಿ. ಚಂದ್ರೇಗೌಡ : ಪ್ರೈಯಾರಿಟಿಯಲ್ಲಿ ಮೊದಲು ಪ್ರಿವಿಲೇಜ್ ಮೋಷನ್ ಬರುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ ರೂಲ್ಸ್ ಪ್ರಕಾರ ನನಗೆ ಗೊತ್ತಿರುವ ಪ್ರಕಾರ ಪ್ರಿವಿಲೇಜ್‌ಗಿಂತ ನಿಲುವಳಿ ಸೂಚನೆಗೆ ಹೆಚ್ಚಿನ ಪ್ರಾಮುಖ್ಯತೆ ಕೊಡಬೇಕೆಂದು ನನ್ನ ವಿನಂತಿ. ಏಕೆಂದರೆ ಇದು ಅತಿ ಪ್ರಾಮುಖ್ಯವಾಗಿರತಕ್ಕಂಥ ವಿಚಾರ. ಇದುವರೆಗೂ ನಡೆದುಕೊಂಡು

ಬಂದಿರತಕ್ಕಂಥ ಕಾರ್ಯಕಲಾಪಗಳನ್ನು ನೋಡಿದಾಗ ಮೊದಲು.....

ಶ್ರೀ ಸಿ. ಬೈರೇಗೌಡ : ತಾವು ಸಹ ಹಿಂದೆ ಅಧ್ಯಕ್ಷರಾಗಿದ್ದವರು. ಅವರ ಅಭಿಪ್ರಾಯವನ್ನು ಅಧ್ಯಕ್ಷರು ಒಪ್ಪಿದರೆ ನಮ್ಮದೇನೂ ಅಡ್ಡಿ ಇಲ್ಲ.

ಶ್ರೀ ಡಿ ಬಿ ಚಂದ್ರೇಗೌಡ : ತಾವು ಅಪ್ಪಣೆ ಕೊಟ್ಟಂತೆ ನಾನು ನಡೆದುಕೊಳ್ಳುತ್ತೇನೆ. Privilege takes precedence.

SRI M. VEERAPPA MOILY : Privilege motion always takes precedence over the adjournment motion. Of course, the Hon'ble Speaker can always fix some other time also for the adjournment motion. It is left to the Speaker.

ಯಾವಾಗಲೂ ಅಷ್ಟೇ, ಇದುವರೆಗೂ ನಡೆದುಕೊಂಡು ಬಂದಿರತಕ್ಕಂಥ ಪದ್ಧತಿ.

ಯಾವಾಗಲೂ ಅಷ್ಟೇ, ಪ್ರಿವಿಲೇಜ್ ಮೋಷನ್ always takes precedence.

ಆದರೆ ಸನ್ಮಾನ್ಯ ಅಧ್ಯಕ್ಷರು ತಾವು ಏನಾದರೂ ಇದಕ್ಕೆ ಸಮಯ ಪ್ರತ್ಯೇಕವಾಗಿ ನಿಗದಿ ಮಾಡಲಿಕ್ಕೆ ಸಾಧ್ಯವಿದ್ದರೆ ಅದು ಸಭಾಧ್ಯಕ್ಷರಿಗೆ ಬಿಟ್ಟಿದ್ದು. ಆದರೆ ಪ್ರಿವಿಲೇಜ್ ಮೋಷನ್ ಯಾವಾಗಲೂ ಕೂಡ ನಿಲುವಳಿ ಸೂಚನೆಗಿಂತ.....

ಶ್ರೀ ಬಿ. ಎಸ್. ಯಡಿಯೂರಪ್ಪ :– ಪ್ರಿವಿಲೆಜ್ ಮೋಷನ್‌ನಲ್ಲಿ ನಿಲುವಳಿ ಸೂಚನೆ ಮುಚ್ಚಿ ಹೋಗುವುದಕ್ಕೆ ಅನುಕೂಲ ಆಗಬಾರದು ಎನ್ನುವ ದೃಷ್ಟಿಯಿಂದ ಆರಂಭದಿಂದಲೇ ಪ್ರಸ್ತಾಪ ಮಾಡಿದೆ ಅಷ್ಟೇ; ಇದು ಚರ್ಚೆಗೆ ಅನುಕೂಲವಾಗಬೇಕೆನ್ನುವ ದೃಷ್ಟಿಯಿಂದ ಹೇಳಿದೆ.

Sri D.B. CHANDRE GOWDA :- I fully agree with the Hon'ble Member . . ಆದರೆ ಇದು ಸಹ ಅಷ್ಟೇ ಬಹಳ ಮಹತ್ವವಾಗಿರತಕ್ಕಂಥ ವಿಚಾರ. ಮಾನ್ಯ ಅಧ್ಯಕ್ಷರೇ ಈ ಒಂದು ನಿರ್ಣಯದ ಎರಡನೇ ಭಾಗದಲ್ಲಿ ಕೇಂದ್ರ ಸರ್ಕಾರ ಏನು ಮಾಡಬೇಕು ಎನ್ನತಕ್ಕಂಥಾದ್ದು ಪ್ರಸ್ತಾಪ ಮಾಡಿದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರದ ಜಲ ನೀತಿ ರೂಪಿಸುವಾಗ ಅಂತರ ರಾಜ್ಯ ಜಲವಿವಾದದ 1956ನೇ ಶಾಸನಕ್ಕೆ ತಕ್ಕ ತಿದ್ದುಪಡಿ ಆಗುವವರೆಗೂ ಮತ್ತು ನ್ಯಾಯಾಧೀಕರಣಕ್ಕೆ ಸ್ಪಷ್ಟ ಮಾರ್ಗಸೂಚಿ ಒದಗಿಸುವವರೆಗೂ ಕಾವೇರಿ ಜಲವಿವಾದಕ್ಕೆ ಸಂಬಂಧಪಟ್ಟ ಹಾಗೆ ರಚಿತವಾಗಿರತಕ್ಕಂಥ ಕಾವೇರಿ ನ್ಯಾಯಾಧೀಕರಣಕ್ಕೆ ಹೊಂದಿರುವ ಎಲ್ಲಾ ಕಲಾಪಗಳನ್ನು ಸ್ಥಗಿತಗೊಳಿಸುವಂತ ಕೇಂದ್ರ ಸರ್ಕಾರವನ್ನು ಈ ಸಭೆ ಸರ್ವಾನುಮತದಿಂದ ಒತ್ತಾಯಿಸುತ್ತದೆ. ಇದರಲ್ಲಿ ಆ ಎರಡೂ ಕೆಲಸಗಳು ಆಗಿಲ್ಲ. ಈ ಒಂದು ನಿರ್ಣಯವನ್ನು ನಾವು ಮಂಡನೆ ಮಾಡಿದಾಗ ಮುಖ್ಯ ಮಂತ್ರಿಗಳು, ಹಾಗೂ ಈ ಸದನದ ನಾಯಕರು ಮಾತನಾಡಿರತಕ್ಕಂಥ ಶಬ್ದಗಳನ್ನು ತಮ್ಮ ಗಮನಕ್ಕೆ ಈ ಮೂಲಕ ತರುವುದಕ್ಕೆ ಬಯಸುತ್ತೇನೆ. 6–7–91ರಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ವ್ಯಕ್ತ ಮಾಡಿದ ಅಭಿಪ್ರಾಯ ಇದು. "ಈ ಸದನದ ಮುಂದೆ ಮಾನ್ಯ ವಿರೋಧ ಪಕ್ಷದ ನಾಯಕರು, ಉಪ ನಾಯಕರು ಹಾಗೂ ಬೇರೆ ಪಕ್ಷಗಳ ನಾಯಕರುಗಳು ನಮ್ಮ ಕಡೆ ಸದಸ್ಯರು, ಮತ್ತು ಆ ಕಡೆ ಸದಸ್ಯರು ಎಲ್ಲರೂ ಸೇರಿ ನಿರ್ಣಯವನ್ನು ಮಂಡನೆ ಮಾಡಿದ್ದಾರೆ. ಕರ್ನಾಟಕ ರಾಜ್ಯದ ಹಿತದ ದೃಷ್ಟಿಯಿಂದ , ಈ ನಿರ್ಣಯವನ್ನು ಒಟ್ಟಾರೆ ಎಲ್ಲಾರು ಸೇರಿ ಮಾಡತಕ್ಕ ಸಂದರ್ಭ ಈ ಸದನದ ಮುಂದೆ ಬಂದಿದೆ. ನಾನು ಸರ್ಕಾರದ ಪರವಾಗಿ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ. ಯಾವ ರೀತಿಯಾಗಿ ಈ ಸದನದ ಅಭಿಪ್ರಾಯ ಪಡೆಯುತ್ತದೆ? ಆ ರೀತಿಯಾಗಿ ನೆಡೆದುಕೊಳ್ಳುವುದಕ್ಕೆ ಸರ್ಕಾರ ಬದ್ಧವಾಗಿದೆ. ಯಾವ ರೀತಿಯಾಗಿ ಈ ಸದನ ನಿರ್ಣಯದ ಮುಖಾಂತರ ಸರ್ಕಾರ ನಡೆದುಕೊಳ್ಳಬೇಕೆಂದು ಆದೇಶ ಕೊಡುತ್ತದೆ ಆ ರೀತಿಯಾಗಿ ನಡೆದುಕೊಳ್ಳುವುದಕ್ಕೆ ನಮ್ಮ ಸರ್ಕಾರ ಸಿದ್ಧವಾಗಿದೆ. ಇದು ಎರಡನೇ ಸೆಂಟೆನ್ಸ್, ಆ ದೃಷ್ಟಿಯಿಂದ ಸರ್ಕಾರ ಅಂತಿಮ ತೀರ್ಮಾನವನ್ನು ಈ ಸದನಕ್ಕೇ ಬಿಡುತ್ತದೆ. ಈ ತೀರ್ಮಾನಕ್ಕೆ ಯಾವುದೇ ಸಂಬಂಧದಲ್ಲಿ ರಾಜ್ಯದ ರೈತರ ಹಿತವನ್ನು ಕಾಪಾಡತಕ್ಕ ಉದ್ದೇಶ

ಇರುವುದರಿಂದ ಸದನದ ತೀರ್ಪಿಗೆ ಸರ್ಕಾರ ಬದ್ಧವಾಗಿರುತ್ತದೆ, ಎಂದು ಮತ್ತೊಮ್ಮೆ ಹೇಳುತ್ತೇನೆ.'' ಇದು ಮುಖ್ಯ ಮಂತ್ರಿಗಳು ಆಡಿದಂಥ ಮಾತು. ಇದಾದ ಮೇಲೆ ನಡೆದಿರತಕ್ಕಂಥ ಪ್ರಕ್ರಿಯೆಗಳೇನು? ಇದು ಬಹಳ ಮುಖ್ಯವಾದುದು. ಇಷ್ಟು ತಮ್ಮ ಶಬ್ದ ಬಂಡಾರದಲ್ಲಿರತಕ್ಕಂಥ ಶಬ್ದಗಳನ್ನೆಲ್ಲಾ ಬಳಸಿ ಸದನಕ್ಕೆ ತಾನು ಹೇಳತಕ್ಕಂಥಾದ್ದು ಸರಿ ಎನ್ನುವ ಹಾಗೆ ನಂಬಿಸಿ ಆ ನಂಬಿಕೆಗೆ ತಕ್ಕಹಾಗೆ ಈ ಸದನದ ನಾಯಕರು ಮತ್ತು ಈ ಸರ್ಕಾರ ನಡೆದುಕೊಂಡಿದೆಯೇ? ಇದು ಪ್ರಶ್ನೆ. ಹಾಗೆ ನಡೆದುಕೊಳ್ಳದೇ ಇದ್ದರೆ ಇದು ಸದನದ ಹಕ್ಕುಚ್ಯುತಿಯಾಗುತ್ತದೆ.

ಶ್ರೀ ಎಂ. ವೀರಪ್ಪಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ಹಕ್ಕುಚ್ಯುತಿ ಬಗ್ಗೆ ಅವರು ಪ್ರಾಸ್ತಾವಿಕವಾಗಿ ಈ ಪ್ರಸ್ತಾವನೆ ಮಾಡುತ್ತಿದ್ದಾರೆ. ಇನ್ನೂ ಕೂಡಾ ಅದರ ಬಗ್ಗೆ ವಿವರಣೆ, ಸ್ಪಷ್ಟೀಕರಣೆ ಮತ್ತು ಅದನ್ನು ಸಂಪೂರ್ಣವಾಗಿ ಸಾಬೀತು ಮಾಡತಕ್ಕಂಥ ಅಂಶಗಳನ್ನು ಹೇಳಲಿಕ್ಕೆ ಅವರಿಗೆ ಅಧಿಕಾರ ಇದೆ. ಆದರೆ ನನ್ನ ಸೂಚನೆ ಏನೆಂದರೆ, ಈಗ ಇದು ಎಷ್ಟರ ಮಟ್ಟಿಗೆ ಹಕ್ಕುಚ್ಯುತಿಯಾಗುತ್ತಿದೆ? ಏಕೆಂದರೆ ಒಂದು ವಿಷಯ ಅದರಲ್ಲೂ, ಈ ವಿಚಾರ ಈ ಸದನದಲ್ಲಿ ಪ್ರಸ್ತಾಪಕ್ಕೆ ಬಂತು. ಆದರೆ ಸದನದ ಹೊರಗೆ ನಡೆದಂಥ ಕೆಲವು ವಿಚಾರಗಳನ್ನು ಅಥವಾ ಸಾಧಕ ಬಾಧಕಗಳ ಬಗ್ಗೆ ನಾವು ಪ್ರತ್ಯೇಕವಾಗಿ ಮಾತನಾಡಬಹುದು. ಆದರೆ ನನ್ನ ಸೂಚನೆ ಏನೆಂದರೆ ಇದರ ಬಗ್ಗೆ ವಿಶೇಷವಾದಂಥ ಚರ್ಚೆ, ಕಾವೇರಿ ಬಗ್ಗೆ ಮಾತನಾಡುವುದಾದರೆ ನಾನಂತೂ ಅಡ್ಡಬರುವುದಿಲ್ಲವೆಂದು ಸನ್ಮಾನ್ಯ ಮುಖ್ಯಮಂತ್ರಿಗಳೂ ಕೂಡಾ ಬಿಸ್‌ನೆಸ್ ಅಡ್ವೈಸರಿ ಕಮಿಟಿಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಏನೆಂದರೆ ಇದರ ಚರ್ಚೆಗೆ, ಇವತ್ತಾಗಲೀ, ಅಥವಾ ಸೋಮವಾರವಾಗಲೀ ಅವಕಾಶ ಮಾಡಿಕೊಡುವುದಕ್ಕೆ ಅಡ್ಡಬರುವುದಿಲ್ಲ ಎಂದು ಆದರೆ ಹಕ್ಕುಚ್ಯುತಿಗೆ ಸೀಮಿತವಾದಂತ ವಿಚಾರದಲ್ಲಿ for want of appreciation of certain real facts, something which we cannot talk over as a matter of strategy, in the best interest of the State, which the hon'ble Chief Minister or some of us will be in a position to sit across the table with the floor leaders and if they can appreciate, perhaps, the discussion will not arise. ಈಗ ಕಾವೇರಿ ಬಗ್ಗೆನೇ ಪ್ರತ್ಯೇಕವಾಗಿ ಚರ್ಚೆ ಮಾಡತಕ್ಕಂಥಾದ್ದು ಒಂದು ಭಾಗ. ಆದರೆ, ಇದಕ್ಕೆ ಸಂಬಂಧಪಟ್ಟಂಥಾದ್ದು ಹಕ್ಕುಚ್ಯುತಿ ಬಗ್ಗೆ ಚರ್ಚೆ ಮಾಡತಕ್ಕಂಥಾದ್ದು ಮತ್ತೊಂದು ಭಾಗ. ಹಕ್ಕುಚ್ಯುತಿ ಬಗ್ಗೆ ಮಾತನಾಡತಕ್ಕಂಥ ವಿಚಾರದಲ್ಲಿ ತಾವು ಬಹುಶಃ vis-a-vis Cauvery issue. ಅದರ ಬಗ್ಗೆ ಬೇಕಾದರೆ ತಮ್ಮ ಸಮಕ್ಷಮದಲ್ಲಿ ಚರ್ಚೆ ಆಗಲಿ. ಅಥವಾ ಸನ್ಮಾನ್ಯ ಮುಖ್ಯಮಂತ್ರಿಯವರು ಫ್ಲೋರ್ ಲೀಡರ್ ಜೊತೆಯಲ್ಲಿ ಮಾತನಾಡಲಿ. ಅದಕ್ಕೆ ತೃಪ್ತಿ ಬರದಿದ್ದರೆ ಈ ಫೋರಂ ಹೇಗೂ ಇದೆ. ಈ ವೇದಿಕೆ, ನಾನು ಹೇಳುವುದು, ಇದನ್ನು ಡೀ–ಲಿಂಕ್ ಮಾಡಿಕೊಂಡು ಅದರ ಬಗ್ಗೆ if they car appreciate certain things where the government has worked out some actions. ಇದು ಉದ್ಭವವಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ವಾದ ಏನಿದೆ? ಅದು ಖಾಜಿ ನ್ಯಾಯ ಇದ್ದಹಾಗೆ ಇದೆ. ಆ ತರಹ ಬೇಡ.

ಶ್ರೀ ಎಂ. ವೀರಪ್ಪಮೊಯ್ಲಿ : ರಾಜ್ಯದ ಹಿತಾಸಕ್ತಿಯ ದೃಷ್ಟಿಯಿಂದ ಕಾವೇರಿಯ ನೀರನ್ನು ನಾವು ನ್ಯಾಯಯುತವಾಗಿ ಉಪಯೋಗ ಮಾಡತಕ್ಕಂಥ ಒಂದು ಹಿತದೃಷ್ಟಿಯಿಂದ ಈ ಸೂಚನೆಯನ್ನು ನಾನು ಕೊಡುತ್ತಿದ್ದೇನೆ. ಮತ್ತೆ ತೃಪ್ತಿಕರವಾಗಿ ಅಲ್ಲಿ ಚರ್ಚೆಯಾಗದಿದ್ದರೆ ಇಲ್ಲಿ ಹೇಗೂ ತಾವು ಚರ್ಚೆ ಮಾಡುವುದಕ್ಕೆ ಈ ವೇದಿಕೆ ಇದೆ. ನಾವು ಚರ್ಚೆಯನ್ನು ಮುಂದುವರಿಸಬಹುದು.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೆ, ಇದು ಗಂಡ ಹೆಂಡತಿ ದಾಂಪತ್ಯ ವಿಷಯ ಆದರೆ in camera fistiong ನಡೆಯಬಹುದು. ಆದರೆ ಇದು ಇಡೀ ರಾಜ್ಯದ ವಿಷಯ ಇರುವುದರಿಂದ ಈ ಸದನದಲ್ಲಿ ಚರ್ಚೆ ಆಗಬೇಕಾಗಿದೆ. ಅದರಲ್ಲಿ ಯಾವುದೇ ಭಾಧಕ ಇಲ್ಲ. ಜನತೆಗೆ ವಿಷಯ ತಿಳಿಯಬೇಕಾಗಿದೆ. ಈ ಸಭೆಯಲ್ಲಿ ನಡೆಯತಕ್ಕ ವಿಷಯ ಜನತೆಗೂ ತಿಳಿಯಬೇಕು ಎನ್ನುವ ವಿಚಾರದಿಂದ ಈ ಸದನದಲ್ಲಿ ಹೇಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಎಲ್ಲ ವಿಷಯ ಗೊತ್ತಾಗಿಬಿಟ್ಟಿದೆ. ಏನೂ ಸೀಕ್ರೆಟ್ ಉಳಿದಿಲ್ಲ. There is no secret. Everything is known to everybody.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಅನೇಕ ಸಂದರ್ಭದಲ್ಲಿ ತಾವು ಕೊಟ್ಟ ಸಲಹೆಯನ್ನು ಒಪ್ಪಿದ್ದೇವೆ. ಇಲ್ಲಿ ಚರ್ಚೆ ಮಾಡುವಾಗ ಇತಿ ಮಿತಿ ನೋಡಿಕೊಂಡು ಹೆಚ್ಚು ಚರ್ಚೆ ಮಾಡಬಾರದು ಎಂದು ತಾವು ಹೇಳಿದಾಗ ಅದನ್ನು ಚರ್ಚೆ ಮಾಡಿಲ್ಲ. ಅನೇಕ ಸಂದರ್ಭದಲ್ಲಿ ಸರ್ಕಾರದಲ್ಲಿ ನಂಬಿಕೆ ಇಟ್ಟು ಅದನ್ನು ಚರ್ಚೆ ಮಾಡದೇ ಒಳಗಡೆ ಚರ್ಚೆ ಮಾಡಿದ್ದು ಉಂಟು. ಆದರೆ ಒಳಗಡ ಚರ್ಚ ಮಾಡಿದ ಪರಿಣಾಮ 'ಪಾಪಕ್ಕೆ ಪ್ರಾಯಶ್ಚಿತ್ತ'ವನ್ನು ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಮಾಡಿಕೊಳ್ಳಬೇಕಾಗಿದೆ. ಈ ಕಡೆ ಕುಳಿತಿರುವ ನಾವು ಸಮಯಕ್ಕೆ ಸರಿಯಾಗಿ ಸರ್ಕಾರ ರೈತ ವಿರೋಧಿ ನೀತಿಯನ್ನು ಅನುಸರಿಸಿ ಕಾವೇರಿ ಟ್ರಿಬ್ಯುನಲ್ ಮುಂದೆ ಸರಿಯಾಗಿ ಸರ್ಕಾರ ರೈತ ವಿರೋಧಿ ನೀತಿಯನ್ನು ಅನುಸರಿಸಿ ಕಾವೇರಿ ಟ್ರಿಬ್ಯುನಲ್ ಮುಂದೆ ಸರಿಯಾಗಿ ವಾದ ಮಾಡದೇ ಆ ಮಾತುಕತೆಗೆ ಹೋದಂತಹ ಸಂದರ್ಭದಲ್ಲಿ ಏನು ಅನ್ಯಾಯ ಆಗಿದೆ, ಇದನ್ನು ಆಪತ್ತೇ ಪ್ರಸ್ತಾಪ ಮಾಡಿದ್ದರೆ ಇವತ್ತು ನಮ್ಮ ರೈತ ಸಮೂಹದ ಮೇಲೆ ಕಲ್ಲು ಬೀಳುತ್ತಾ ಇರಲಿಲ್ಲ. ಈಗಾಗಲೇ ದೊಡ್ಡ ಅಪರಾಧ ಆಗಿದೆ, ತಪ್ಪು ಆಗಿದೆ, ಇಲ್ಲಿ ಚರ್ಚೆ ಮಾಡೋಣ. ಈಗಲಾದರೂ ಇದಕ್ಕೆ ಏನಾದರೂ ಪರಿಹಾರ ಹುಡುಕುವುದಕ್ಕೆ ಸರ್ಕಾರ ಮುಂದ ಬರಬೇಕಾಗಿದ. ಅದಕ್ಕೋಸ್ಕರವಾಗಿ ಈ ತರಹ ಸಲಹೆ ಕೊಟ್ಟು ಕೊಟ್ಟು ನಾಲ್ಕು ಕೋಟಿ ರೈತರು ಬೀದಿ ಪಾಲಾಗಿದ್ದಾರೆ. ಅವರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸುವುದಕ್ಕೆ ಆಗದೇ ಇರುವ ಮಟ್ಟಿಗೆ ಈಗಾಗಲೇ ತೀರ್ಪು ಬಂದಿದೆ. ಮರುಪರಿಶೀಲನಾ ಅರ್ಜಿ ಎಂದು ಏನು ಅರ್ಜಿ ಹಾಕಿದಾಗಲೂ ಸಹ ಅದರಿಂದ ಬಂದಿರುವ ತೀರ್ಪಿನಿಂದ ನಮಗೆ ಅನ್ಯಾಯ ಆಗಿದೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಂಸದೀಯ ವ್ಯವಹಾರಗಳ ಖಾತೆಯ ಸಚಿವರು ಒಂದು ಸಲಹೆಯನ್ನು ಇತ್ತಿದ್ದಾರೆ. ಏನೆಂದರೆ ತಮ್ಮ ಸಮ್ಮುಖದಲ್ಲಿ ತಮ್ಮ ಕೋಣೆಯಲ್ಲಿ ಮಾತುಕತೆ ಆಗಬಹುದು ಎಂದು. ತಾವು ಯಾವತ್ತು ಕರೆದರೂ ಕೂಡ ನಾವು ಬರುವುದಕ್ಕೆ ತಯಾರು ಇದ್ದೇವೆ. ಆದರೆ ತಮ್ಮನ್ನು ಬಿಟ್ಟು ಸರ್ಕಾರ ಏನಾದರೂ ಕೂಡ ಮಾತುಕತೆಗ ಕರಯುತ್ತೇವೆ ಮಾತನಾಡೋಣ ಎಂದರೆ ನಾವು ಸರ್ಕಾರ ಕರೆಯುತಕ್ಕಂಥ ಸಭೆಗಳಿಗೆ ಬಹಿಷ್ಕಾರ ಹಾಕುತ್ತೇವೆ. ಏತಕ್ಕ ಬಹಿಷ್ಕಾರ ಹಾಕಿದ್ದೇವ, ಕಾರಣ ಏನು ಎಂಬುದನ್ನು ಮಾನ್ಯ ಚಂದ್ರೇಗೌಡರು ಪ್ರಸ್ತಾವನೆ ಮಾಡುತ್ತಿದ್ದಾರೆ, ಆದ್ದರಿಂದ ಮುಂದ ಅವರು ಹೇಳುತ್ತಾರೆ. ಈ ಸದನದ ತೀರ್ಪನ್ನು ಮತ್ತು ನಾವೆಲ್ಲ ಕೊಟ್ಟ ಸಲಹೆಯನ್ನು ಕೂಡ ಸರ್ಕಾರ ಉಲ್ಲಂಘನೆ ಮಾಡಿದೆ. ಆದ್ದರಿಂದ ನೀವು ಎಲ್ಲಿ ಸಭೆ ಕರೆಯುತ್ತೀರಿ ಅಲ್ಲಿಗೆ ನಾವು ಬರುವುದಕ್ಕೆ ತಯಾರು ಇದ್ದೇವೆ, ಇದರ ಅರ್ಥ ಏನೆಂದರೆ, ಈ ಒಂದು ಮಾತಿಗ ಸರ್ಕಾರ ಒಪ್ಪಿಕೊಳ್ಳಲಿ. ಟ್ರಿಬ್ಯೂನಲ್ ಮುಂದೆ ನಡೆಯುತ್ತಾ ಇರತಕ್ಕ ಕಾರ್ಯಕಲಾಪಗಳಿಗೆ ಕರ್ನಾಟಕ ಸರ್ಕಾರ ಬಹಿಷ್ಕಾರ ಹಾಕಿದೆ ಎನ್ನತಕ್ಕ ಒಂದು ಮಾತು ಅದರ ಬಾಯಿಂದ ಬರಲಿ, ಆಗ ನೀವು ಎಲ್ಲಿ ಸಭೆ ಕರೆಯುತ್ತೀರೋ ಕರೆಯಿರಿ. ನಾವು ಬರುವುದಕ್ಕೆ ಸಿದ್ಧ ಇದ್ದೇವೆ. ಅದಿಲ್ಲದೆ ನಮ್ಮನ್ನು ನೀವು ಗಾಳ ಹಾಕಿ ಎಳೆಯಬೇಕು ಎನ್ನುವ ಪ್ರಯತ್ನ ನಮಗೆ ಗೊತ್ತಿಲ್ಲದೆ ಮಾಡುತ್ತಿದ್ದಾರೆ, ನಾವು ಆ ಗಾಳಕ್ಕೆ ಸಿಗತಕ್ಕ ಮೀನುಗಳಲ್ಲ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ಎರಡು ವಿಚಾರಗಳಿವೆ. ನಾವು ಈ ಸದನದಲ್ಲಿ ಹಕ್ಕುಚ್ಯುತಿ ಆಗಿದೆ ಎನ್ನುವ ಬಗ್ಗೆ ವಾದ ಮಾಡುತ್ತಿದ್ದೇವೆ. ಮಿಕ್ಕಿದ್ದು ಕಾವೇರಿ ಬಗ್ಗೆ ಸಮಗ್ರವಾಗಿ ಚರ್ಚೆ ನಡೆಯಬೇಕಾಗಿದೆ. ಚರ್ಚೆ ನಡೆಸೋಣ , ಅದು ಬೇರೆ ಸಂದರ್ಭ, ಚರ್ಚೆಗೆ ಅವಕಾಶ ಮಾಡಿಕೊಡಿ . ಈಗ ನಾವು ಇಷ್ಟಕ್ಕೆ ಸೀಮಿತ ಆಗುತ್ತೇವೆ. ಈ ಸದನದಲ್ಲಿ ಒಂದು ಸರ್ವಾನುಮತದ ತೀರ್ಮಾನ, ನಿರ್ಣಯ ಮಾಡಿದ್ದೇವೆ. ಈ ನಿರ್ಣಯಕ್ಕೆ ಧಕ್ಕೆ ಬಂದಿದೆ. ಧಕ್ಕೆ ಮಾಡಿರುವವರು ಯಾರು ? ಸರ್ಕಾರ. ಇಷ್ಟಕ್ಕೆ ಸೀಮಿತ ಆಗುತ್ತದೆ ವಿಷಯ, ಮಿಕ್ಕ ಪ್ರಶ್ನೆಗಳು ಬರುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಮಾನ್ಯ ಸಭಾ ನಾಯಕರು ಕೊಟ್ಟಂತಹ ಭರವಸೆ. ಮಾನ್ಯ ಮುಖ್ಯಮಂತ್ರಿಗಳು ನಮ್ಮನ್ನು ಸಭೆಗೆ ಕರೆದಾಗ ಒಂದು ಟಿಪ್ಪಣಿ

(ನೋಟನ್ನು) ಕೊಟ್ಟರು. ಪುಟ 2 (7) ರಲ್ಲಿ ಈ ರೀತಿ ಬರೆಯುತ್ತಾರೆ. ''06. 07. 1991 ರಂದು ಕರ್ನಾಟಕ ರಾಜ್ಯದ ಉಭಯ ಸದನಗಳು ನ್ಯಾಯಾಧಿಕರಣ ನೀಡಿರುವ ಮಧ್ಯಂತರ ಆಜ್ಞೆಯನ್ನು ಸರ್ಕಾರ ತಿರಸ್ಕರಿಸಬೇಕೆಂದು ಒಮ್ಮತದಿಂದ ನಿರ್ಣಯವನ್ನು ಕೈಗೊಂಡಿತು.'' ಈ ಸದನದಲ್ಲಿ ಹೇಳುವುದರ ಜೊತೆಗೆ ಸದನದ ಹೊರಗೆ ಕೂಡ ಪ್ರಸ್ತಾಪ ಮಾಡಿದರು. ಇದು ಆದ ಮೇಲೆ ಮಾನ್ಯ ಪ್ರಧಾನ ಮಂತ್ರಿಗಳು ದಿನಾಂಕ 13. 1. 91 ರಂದು ಸಂಸತ್ತಿನಲ್ಲಿ ಒಂದು ಹೇಳಿಕೆಯನ್ನು ಮಾಡಿದರು.

I quote,

"I am not participating in the debate or am I making any suomotto statement, but I thought at this moment I should share that it was my anguish and I am extremely dipressed about the turn of events in Karnataka during the past few days. I am sure I have the support of all Hon'ble Members in appealing, to the people and all the political parties in the State to see that the peace and normalcy are restored. In this connection I have decided to request the Chief Ministers of concerned States to come to Delhi for talks. We are getting in touch with them and once again I appeal to one and all to help bring about peaceful conditions in these States".

ಇದು ಮಾನ್ಯ ಪ್ರಧಾನ ಮಂತ್ರಿಗಳು ಮಾಡಿದ್ದು; ಇದರ ಮೇಲ್ಭಾಗದಲ್ಲಿ ಗಾಜ್ಯ ಸರಕಾರದವರು ಮಾಡತಕ್ಕಂಥ ನಿರ್ಣಯವನ್ನು ಕೆಳಭಾಗದಲ್ಲಿ, ಕೇಂದ್ರ ಸರಕಾರದವರು ಮಾಡಬಹುದಾದಂಥ ಎರಡು ವಿಚಾರಗಳನ್ನು ನಾವು ಪ್ರಸ್ತಾಪ ಮಾಡಿದ್ದೇವೆ. ಮೊಟ್ಟಮೊದಲನೆಯದಾಗಿ ಮುಖ್ಯಮಂತ್ರಿಗಳು ಈ ಸದನದಲ್ಲಿರತಕ್ಕಂಥ ಪ್ರತಿಯೊಬ್ಬ ಸದಸ್ಯರು ಹಾಗೂ ನಾವು ಕೂಡ ಸೇರಿಕೊಂಡು ಭಾಗಿಯಾಗುತ್ತೇವೆ. ಆದರೆ ಈಗ ನಡೆದಿರತಕ್ಕಂಥಾದ್ದು ಏನು? ಇದಾದಮೇಲೆ ಈ ಸದನದಲ್ಲಿ ಇಂಥ ಒಂದು ನಿರ್ಣಯವು ಮಂಡಣೆಯಾಗಿ ಸರ್ವಸಮ್ಮತವಾಗಿ ಮಂಜೂರು ಆದಮೇಲೆ ಸರಕಾರದವರು ಟ್ರಿಬ್ಯುನಲ್ ಮುಂದೆ Civil Miscellaneous Petition No. 15/91 ... ...
ದಾಕಿದರು. ಆದ್ದರಿಂದ ಇದು ಮೊದಲು ಸದನದ ಹಕ್ಕುಚ್ಯುತಿಯಾಗುತ್ತದೆ. ಇದರಿಂದ ಈ ಒಂದು ಮಧ್ಯಂತರ ಆಜ್ಞೆಯನ್ನು ತಿರಸ್ಕರಿಸಬೇಕು ಎನ್ನತಕ್ಕಂಥ ನಿರ್ಣಯ ಮಾಡಿದರೆ ಅದಕ್ಕೆ ತದ್‌ವಿರುದ್ಧವಾಗಿ ಸರಕಾರ before the Cauvery Waters Dispute Tribunal under Section (4) of the Interstate Waters Dispute Act, they filed Civil Miscellaneous Petition No. 15/91.
ಇದನ್ನು 25-11-1991 ರಲ್ಲಿ ದಾಖಲು ಮಾಡುತ್ತಾರೆ. ನಾವು ಇದಕ್ಕೆ ವಿರೋಧವನ್ನು ವ್ಯಕ್ತಮಾಡಿದ್ದೇವೆ. ಆದರೆ ಸರಕಾರ ಪುನಃ ಏನೋ ಮಾಡಿಬಿಡುತ್ತದೆ. ಮಾತುಕತೆಗೆ ಪ್ರಧಾನಿಯವರು ಕರೆದಿದ್ದಾರೆ ಎಂದು ಹೇಳಿ ಫೆಬ್ರವರಿ 17ನೇ ತಾರೀಖಿಗೆ ಮಾತುಕತೆಯು ಆಯಿತು. ಆ ದಿವಸ ಒಂದು ಅಗ್ರಿಮೆಂಟ್‌ಗೆ ರಾಜ್ಯದ ಮುಖ್ಯಮಂತ್ರಿಯವರು ಸಹಿ ಹಾಕಿದರು. ಮಿಸಲೇನಿಯಸ್ ಹಾಕಿದರು. ಮಿಸಲೇನಿಯಸ್ ಪೆಟಿಶನ್‌ನಲ್ಲಿ 3-4-92ರಂದು ಮರುಪರಿಶೀಲನೆಯು ರಾಜ್ಯದ ಆಜ್ಞೆಯು ಹೊರಗೆ ಬಿತ್ತು. ಬಹಳ ಮುಖ್ಯವಾಗಿ ಒಂದು ಕಡೆ ಟ್ರಿಬ್ಯುನಲ್ ಏನು ನಿಯಮವನ್ನು ಮಧ್ಯಂತರ ಆಜ್ಞೆಯಲ್ಲಿ ನಿಗದಿ ಮಾಡಿದ್ದಾರೆ. ವಾರ ವಾರಕ್ಕೆ ಇಷ್ಟು ನೀರು ಬಿಡಿ ಎನ್ನತಕ್ಕಂಥಾದ್ದನ್ನು ಅದರಲ್ಲಿ ಹೇಳಿದ್ದಾರೆ. ಹೀಗೆ ರಾಜ್ಯ ಸರಕಾರದವರು ಯಾರನ್ನೂ ನಂಬಿಕೆ ತೆಗೆದುಕೊಳ್ಳದೆ ಜನರ ಹಿತಕ್ಕೆ ಮಾರಕವಾಗಿ ಕಬಿನಿ ನದಿಯಿಂದ ನಾಲ್ಕೂವರೆ ಟಿ ಎಂ ಸಿ ನೀರನ್ನು ಬಿಟ್ಟಿದ್ದಾರೆ ಎಂಬುದು ನಮ್ಮ ಆಪಾದನೆ ಆದರೆ ಸರಕಾರದವರು ಸಾರ್ವತ್ರಿಕವಾಗಿ, ಸಾರ್ವಜನಿಕವಾಗಿ ಹಾಗೆ ನಾವು ನೀರು ಬಿಟ್ಟಿಲ್ಲ ಎಂಬ ಮಾತನ್ನು ಹೇಳುತ್ತಾ ಬಂದಿದ್ದಾರೆ. ಹಾಗಾದರೆ ಇದಕ್ಕೆ ಯಾರು ಸಾಕ್ಷಿ? ಬಿಟ್ಟಿದ್ದಾರೋ ಅಥವಾ ಬಿಟ್ಟಿಲ್ಲವೋ

ಎಂಬ ಬಗ್ಗೆ ಯಾರು ಸಾಕ್ಷಿ? ಆ ಪ್ರದೇಶಕ್ಕೆ ನಾನು ಹೋಗಿ ಬಂದಿದ್ದೇನೆ. ನೀರು ಹೋಗತಕ್ಕಂಥಾದ್ದನ್ನು ಕಣ್ಣಾರೆ ನೋಡಿದ್ದೇನೆ. ಒಂದು ವಿಷಯವನ್ನು ಮಾನ್ಯ ಸಭಾಧ್ಯಕ್ಷರ ಗಮನಕ್ಕೆ ತರುತ್ತಾ ಇದ್ದೇನೆ. ಮೇ 20ನೇ ತಾರೀಖು ಕಬಿನಿ ಜಲಾಶಯದಲ್ಲಿ ಇದ್ದಂಥ ನೀರಿನ ಪ್ರಮಾಣ ಎಷ್ಟು ಎನ್ನುವ ಬಗ್ಗೆ ಅಧಿಕೃತ ದಾಖಲೆಯನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಕರ್ನಾಟಕ ರಾಜ್ಯ ಸರಕಾರದವರು ಕಾವೇರಿ ಜಲವಿವಾದದ ಬಗ್ಗೆ ಒಂದು ಪುಸ್ತಕವನ್ನು ಹೊರತಂದಿದ್ದಾರೆ. "ನೀರಿಗಾಗಿ ಶತಮಾನದ ತೀರದ ಬವಣೆ"–ಎನ್ನತಕ್ಕಂಥ ಪುಸ್ತಕವನ್ನು ಪ್ರಕಟಣೆ ಮಾಡಿದ್ದಾರೆ. ಈ ಪುಸ್ತಕದ ಕೊನೆಯ ಪುಟದಲ್ಲಿ ಕಾಲ ಕಾಲಕ್ಕೆ ತಮಿಳುನಾಡಿಗೆ ಬಿಡುಗಡೆ ಮಾಡಿದ ಕಾವೇರಿ ನೀರಿನ ಪ್ರಮಾಣವನ್ನು ಅಧಿಕೃತವಾಗಿ ದಾಖಲಿಸಿದ್ದಾರೆ. ಈ ದಾಖಲೆಯನ್ನು ತಮ್ಮ ಗಮನಕ್ಕೆ ತರುತ್ತಾ ಇರುವ ಕಾರಣ ಅಂದರೆ, ಒಟ್ಟು 1976ನೇ ಇಸವಿಯವರೆಗೆ ಆಗಸ್ಟ್, ಸಪ್ಟೆಂಬರ್–ಜೂಲೈ, ಫೆಬ್ರವರಿ, ಆಗಸ್ಟ್–ಜನವರಿ ಫೆಬ್ರವರಿ, ಆಗಸ್ಟ್, ಸಪ್ಟೆಂಬರ್, ಡಿಸೆಂಬರ್, ಫೆಬ್ರವರಿ,–ಜನವರಿ, ಫೆಬ್ರವರಿ, ಮಾರ್ಚ್ ಹಾಗೆ ನೀರನ್ನು ಬಿಡುತ್ತಾ ಬಂದಿದ್ದಾರೆ. ಹೀಗೆ ಕಳೆದ 15 ವರ್ಷಗಳ ದಾಖಲೆಯನ್ನು ತೆಗೆದು ನೋಡಿದರೆ ಮೇ ತಿಂಗಳಲ್ಲಿ, ಜೂನ್ ತಿಂಗಳಲ್ಲಿ ನೀರು ಬಿಟ್ಟ ದಾಖಲೆಗಳು ಇಲ್ಲ. ವಿಶೇಷವಾಗಿ ಒತ್ತುಕೊಟ್ಟು ಇದನ್ನು ಹೇಳುತ್ತೇನೆ, 1976ನೇ ಇಸವಿಯಿಂದ 1992ನೇ ಇಸವಿಯವರೆಗೆ ಮೇ ಮತ್ತು ಜೂನ್ ತಿಂಗಳಲ್ಲಿ ನೀರು ಬಿಟ್ಟಿರುವ ದಾಖಲೆಗಳಿಲ್ಲ. ಆದರೆ 1992ನೇ ಮೇ ತಿಂಗಳಿನಲ್ಲಿ ಮಾತ್ರ ನೀರನ್ನು ಬಿಡುತ್ತಾರೆ. ನೀರು ಹೀಗೆ ಬಿಟ್ಟಿದ್ದಾರೆಂದು ನಮ್ಮ ಆಪಾದನೆ. ಯಾವುದೋ ಪ್ರಕೃತಿ ನಿಮಗೆ ವರ ಕೊಟ್ಟುಬಿಟ್ಟಿದ್ದಾಳೆ. ಅದರಿಂದಾಗಿ ನೀವು ಹೀಗೆ ಬಿಟ್ಟ ನೀರನ್ನು ಮುಚ್ಚುವುದಕ್ಕೆ ಪ್ರಯತ್ನ ಮಾಡಿ, ನಾವು ನೀರು ಬಿಟ್ಟಿಲ್ಲ ಅಂತ ವಾದ ಮಾಡುತ್ತಿದ್ದೀರಿ. ರಾಜ್ಯದ ನೀರಾವರಿಯ ಮುಖ್ಯ ಅಭಿಯಂತರರು ಹಾಸನ ಜಿಲ್ಲೆಯ ಎಕ್ಸಿಕ್ಯುಟಿವ್ ಇಂಜಿನಿಯರ್‌ರವರಿಗೆ ಒಂದು ಪತ್ರ ಬರೆದಿದ್ದಾರೆ. ದಯಮಾಡಿ ಆ ಪತ್ರವನ್ನು ಈ ಟೇಬಲ್ ಮೇಲಿಡಿ, ನಾನಿಡುವುದಿಲ್ಲ. ನೀವು ಇಡದೇ ಇದ್ದರೆ ಆಮೇಲೆ ನಾನು ಇಡುತ್ತೇನೆ. ಆ ಪತ್ರದಲ್ಲೇನಿದೆ.......

ಪ್ರೊ : ಎಂ. ಡಿ. ನಂಜುಂಡಸ್ವಾಮಿ:– ಸರ್ಕಾರದ ಹತ್ತಿರ ಇಲ್ಲದಿದ್ದರೆ ನೀವು ಇಡುತ್ತೇನೆಂದು ಹೇಳುತ್ತಿದ್ದೀರಿ, ಅವರ ಹತ್ತಿರ ಯಾಕೆ ಇರೋಲ್ಲ, ಅವರ ಹತ್ತಿರ ಇಲ್ಲದೆ ನಿಮ್ಮ ಹತ್ತಿರ ಇದ್ದರೆ ಅದು ಸರ್ಕಾರಾನೇ ಅಲ್ಲ; ಅವರ ಹತ್ತಿರ ಆ ಪತ್ರ ಇದೆ.

ಶ್ರೀ ಡಿ. ಬಿ. ಚಂದ್ರೇಗೌಡ:– ಅಂದರೆ ನೀವು ಸರ್ಕಾರ ಇದೆ ಅಂತ ಅಂದ್ಕೊಂಡಿದ್ದೀರಾ?

ಪ್ರೊ : ಎಂ. ಡಿ. ನಂಜುಂಡಸ್ವಾಮಿ:– ನಾನು ಬಹಳ ದಿನದಿಂದ ಅಂದ್ಕೊಂಡಿಲ್ಲ, ಈಗ ನೀವು ಮಾತಾಡೋದು ನೋಡಿದ್ರೆ ಹಾಗೆನ್ನಿಸುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ :– ಈಗ ನೀವು ಹಕ್ಕುಚ್ಯುತಿಯಾಗಿದೆ ಅನ್ನೋದನ್ನು ಸಮರ್ಥನೆ ಮಾಡಿ ಹೇಳ್ತಾ ಇದ್ದೀರಿ. ಅದ್ಯಾವುದೋ ಪತ್ರ ಇದೆಯೆಂದು ಹೇಳುತ್ತಿದ್ದೀರಿ. ನೀವು ಸಮರ್ಥನೆ ಮಾಡುವಾಗಿದ್ದರೆ ಹಾಗೂ ನಿಮ್ಮ ಹತ್ತಿರ ಇರುವ ಎಲ್ಲಾ ದಾಖಲೆ ಪತ್ರಗಳನ್ನೂ ಈ ಸದನದ ಮುಂದೆ ಇಡಬೇಕಾಗುತ್ತದೆ.. ನಿಮ್ಮ ಹಕ್ಕುಚ್ಯುತಿಯಾಗಿದ್ದರೆ ನಮ್ಮ ಹಕ್ಕುಚ್ಯುತಿಯಾಗಿರುತ್ತದೆ. ಆದ್ದರಿಂದ ನೀವು ಹೇಳೋ ಪ್ರಕಾರ ಆ ದಾಖಲೆ ಇದೆ ಅಂತ ಏನು ಹೇಳ್ತೀರಿ ಅದರಂತೆ ಅದನ್ನು ಇಟ್ಟುಬಿಡಿ, ಮುಂದೆ ನೋಡಿಕೊಳ್ಳೋಣ. ಸರ್ಕಾರಕ್ಕೆ ಕೆಲವೊಂದು ಅಧಿಕಾರಗಳಿವೆ. ಅದರಂತೆ ಇಡಬಹುದು ಅಥವಾ ಬಿಡಬಹುದು, ಆದರೆ ನಿಮಗೆ ಆ ಪ್ರಿವಿಲೇಜಿಲ್ಲ.

Sri D.B Chandre Gowda.:- You are bound to place it on the table of the House. This House is entitled to it.

(INTERRUPTIONS)

Sri Kagodu Thimmappa:-- This is the priivilege involviing every member of this House not only Mr. Chandre Gowda who is consistently

admitting that there is a document. If so, what prevents him to place it on the table of the House?

Mr. Speaker:- You are placing your arguments partly on the basis of a letter written by the Chief Engineer to the Executive Engineer of Hassan. If you are in the possession of the letter, which would further strengthen your arguments, then what makes or what prevents you to place it before the House and share it with the other members of the House?

Sri. D.B. Chandre Gowda:- I will do that. I need sometime. It will take sometime. ... . 1992ನೇ ಇಸವಿ ಮೇ ತಿಂಗಳ 20ನೇ ತಾರೀಖು ಅಧಿಕೃತವಾಗಿ ನಮ್ಮ ಜಲಾನಯನ ಪ್ರದೇಶದ ರಿಸರ್ವಾಯರ್‌ಗಳಲ್ಲಿ ಇದ್ದ ನೀರೆಷ್ಟು? ಇದು ಬಹಳ ಮುಖ್ಯ ದಾಖಲೆ. ಕೆ ಆರ್ ಎಸ್ ನಲ್ಲಿ 80 ಅಡಿ ನೀರಿತ್ತು, 2.41 ಫ್ಲೋ ಇತ್ತು, 2143 ಕ್ಯೂಸೆಕ್ಸ್ ಒಳಗಡೆ ನೀರು ಬರುತ್ತಿತ್ತು: 519 ಕ್ಯೂಸೆಕ್ಸ್ ಹೊರಗೆ ಹೋಗುತ್ತಿತ್ತು ಇದು ದಿನಾಂಕ 3–6–92 ರ ಮಾಹಿತಿ. ಪ್ರಾಮುಖ್ಯವಾಗಿ ಕಬಿನಿಯಲ್ಲಿ live capacity in TMC inflow in cusecs 400, outflow 400. This is as on 3-6-92. ಆದುದರಿಂದ ಮೇ ತಿಂಗಳ 20ನೇ ತಾರೀಖು ಕಬಿನಿ ಜಲಾಶಯದಲ್ಲಿ ಇದ್ದಂಥ ನೀರಿನ ಒಟ್ಟು ಪ್ರಮಾಣ ನನಗೆ ಬೇಕಾಗಿರತಕ್ಕಂಥದ್ದು. ಜೂನ್ 3ನೇ ತಾರೀಖಿಗೆ ಮಳೆ ಪ್ರಾರಂಭವಾಯಿತು. ಮಳೆ ಅಂದರೆ ನಾನು ಮಲೆನಾಡಿನಿಂದ ಬರತಕ್ಕಂಥ ನನಗೇನೆ ಸುಮಾರು 15–20 ಗಳ ಅನುಭವದಲ್ಲಿ ಜೂನ್ ತಿಂಗಳಲ್ಲಿ ಇಂಥ ಮಳೆ ಬಂದಂಥ ದಿನಗಳನ್ನು ನಾನು ನೋಡಿರಲಿಲ್ಲ. -ವರ್ಷಗಳ ನನ್ನ ಅನುಭವದಲ್ಲಿ ಹೇಳುತ್ತಿದ್ದೇನೆ. ಬೇರೆ ಏನೂ ಅಲ್ಲ. ಆದುದರಿಂದ ಪುನ: ಕಬಿನಿಗೆ ನೀರು ಸಿಕ್ಕಿತು. ಇವತ್ತು ಕಬಿನಿ ಜಲಾಶಯ ಹೆಚ್ಚುಕಡಿಮೆ ತುಂಬಿದೆ. ನಾನು ಆ ವಿಚಾರದಲ್ಲಿ ಚರ್ಚೆಗೆ ಹೋಗುವುದಿಲ್ಲ. ನನ್ನ ವಿಚಾರ ಇಷ್ಟೆ: ನಿಮ್ಮ ಮಾಹಿತಿಯಂತೆ ಯಾವ ಕಾಲಕ್ಕೂ ಮೇ ತಿಂಗಳಲ್ಲಿ ಒಂದು ಹನಿ ನೀರನ್ನು ಬಿಟ್ಟಂಥ ದಾಖಲೆಯನ್ನು ನಿಮ್ಮ ಪುಸ್ತಕದಲ್ಲಿ ನೀವು ಕೊಡುವುದಿಲ್ಲ. ಈ ವರ್ಷದ ಮೇ ತಿಂಗಳಲ್ಲಿ ಮಾತ್ರ ನೀರನ್ನು ಏತಕ್ಕೆ ಬಿಟ್ರಿ ? ನೀರು ಏತಕ್ಕೆ ಬಿಟ್ರಿ ಎಂದರೆ ಟ್ರಿಬ್ಯೂನಲ್‌ನ ಮಧ್ಯಂತರ ಆಜ್ಞೆಯನ್ನು ಜಾರಿ ಕೊಡತಕ್ಕಂಥ ಕೆಲಸ ಮಾಡಿದಿರಿ, ಟ್ರಿಬ್ಯೂನಲ್ ಮಧ್ಯಂತರ ಆಜ್ಞೆಯನ್ನು ತಿರಸ್ಕರಿಸಿ ಎಂದು ನಾವು ಹೇಳಿದರೆ ನೀವು ಪುರಸ್ಕಾರ ಮಾಡಿದಿರಿ. ಇದು ನನ್ನ ಆಪಾದನೆ. ಪುರಸ್ಕಾರ ಮಾಡಿದಿರಿ. ನನಗೆ ತಿಳಿದಿರತಕ್ಕಂಥ ಮಾಹಿತಿಗಳ ಪ್ರಕಾರ ಸಾಧಾರಣವಾಗಿ ತಮಿಳುನಾಡಿನಲ್ಲಿ 'ಕುರುವೈ' ಬೆಳೆಗೆ ಜೂನ್ 12ನೇ ತಾರೀಖಿನ ಮೇಲೆ ನೀರನ್ನು ಬಿಡತಕ್ಕಂಥದ್ದು ಪದ್ಧತಿ. ಈ ಸಾರಿ ಮೇ 23ನೇ ತಾರೀಖಿಗೆ ನೀರನ್ನು ಕೊಟ್ಟಿದ್ದಾರೆ. ಜೂನ್ 12ನೇ ತಾರೀಖಿಗೆ 'ಕುರುವೈ' ಬೆಳೆಗೆ ಬಿಡತಕ್ಕಂಥ ನೀರನ್ನು ತಮಿಳುನಾಡು ಸರ್ಕಾರ ಮೆಟ್ಟೂರು ಜಲಾಶಯದಿಂದ ಮೇ 23ನೇ ತಾರೀಖಿಗೆ ನೀರನ್ನು ಕೊಟ್ಟಿದ್ದಾರೆ. ಮೇ 23ನೇ ತಾರೀಖಿಗೆ ನೀರನ್ನು ಬಿಡಬೇಕಾದರೆ ಆ ನೀರು ಎಲ್ಲಿತ್ತು? ನೀವು ಈ ಮಧ್ಯಂತರ ಆಜ್ಞೆಯನ್ನು ಜಾರಿ ಕೊಟ್ಟಂಥ ನೀರು ಅವರಿಗೆ ಲಭ್ಯವಾಯಿತು ಅದು ನನ್ನ ಆಪಾದನೆ ನಾವು ನೀರು ಬಿಟ್ಟೇ ಇಲ್ಲ ಎಂಬುದು ಇವರ ವಾದ. ಅದಕ್ಕೆ ಅಧಿಕೃತ ದಾಖಲೆಗಳು ಇದೆಯೇ? ಇದನ್ನು ಯಾರು ಹೇಳಬೇಕು? ರಾಜ್ಯ ಸರ್ಕಾರದ ಕಾರಣಗಳನ್ನು ನಾನು ಈಗ ವಿಮರ್ಶೆ ಮಾಡುವುದಿಲ್ಲ. ಆದರೆ ಕೇಂದ್ರದ ಮಂತ್ರಿ ಶ್ರೀಮಾನ್ ವಿ. ಸಿ. ಶುಕ್ಲಾ ಅವರು ಮದ್ರಾಸಿಗೆ ಜೂನ್ 6ನೇ ತಾರೀಖು ಪ್ರವಾಸಕ್ಕೆ ಬರುತ್ತಾರೆ. ಬಂದಾಗ ಅವರು ಹೇಳಿದ್ದು ಎಲ್ಲಾ ಪತ್ರಿಕೆಗಳಲ್ಲೂ ಪ್ರಸಿದ್ಧಿಯಾಗಿದೆ. 8ನೇ ತಾರೀಖಿನ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಇದನ್ನು ಪ್ರಸಿದ್ಧಿಪಡಿಸುತ್ತದೆ. ''ರಾಜ್ಯದಿಂದ ತಮಿಳುನಾಡಿಗೆ ಈಗಾಗಲೇ ಕಾವೇರಿ ನೀರು'' ಕಾವೇರಿ ನ್ಯಾಯ ಮಂಡಳಿ ಮಧ್ಯಂತರ ತೀರ್ಪನ್ನು ಕರ್ನಾಟಕ ಜಾರಿಗೊಳಿಸಿದೆ.

ತಮಿಳುನಾಡಿಗೆ ಕರ್ನಾಟಕ ಸರ್ಕಾರ ಕಾವೇರಿ ನೀರನ್ನು ಈಗಾಗಲೇ ಹರಿಯಬಿಟ್ಟಿದೆ. ಇದು ಪಾಸಿಟೀವ್ ಸ್ಟೇಟಿಮೆಂಟ್ ಎಂದು ಕೇಂದ್ರದ ಜನ ಸಂಪನ್ಮೂಲ ಸಚಿವ ವಿ. ಸಿ. ಶುಕ್ಲಾ ಅವರು ಇಂದು ಇಲ್ಲಿ ಸ್ಪಷ್ಟಪಡಿಸಿದರು. I would like to ask a simple question. Can there be a better document than this to prove my case. I would ask Mr. Thimmappa.

SHRII KAGODU THIMMAPPA:- You should have been in Parliament.

SHRI D.B. CHANDRE GOWDA : So far as I am concerned, ಕನ್ನಡ ಪ್ರಭ ಪತ್ರಿಕೆಯ ಮುಖಪುಟದಲ್ಲಿ ಹೀಗಿದೆ:- ಕಾವೇರಿ ನ್ಯಾಯ ಮಂಡಳಿ ಆದೇಶ ಜಾರಿಗೆ ಕರ್ನಾಟಕದ ಸಹಕಾರ, ಕರ್ನಾಟಕ ರಾಜ್ಯದ ಸಹಕಾರ. ನಾನು ಮತ್ತೊಂದು ಸಾರಿ ಕೋಟ್ ಮಾಡುತ್ತೇನೆ. ಕಾವೇರಿ ನ್ಯಾಯ ಮಂಡಳಿಯ ಮಧ್ಯಂತರ ಆದೇಶದ ಯಥಾವತ್ ಜಾರಿ ಉಸ್ತುವಾರಿಯನ್ನು ರಾಷ್ಟ್ರೀಯ ಜಲ ಆಯೋಗ ವಹಿಸುತ್ತಿತ್ತು. This is the third affirmation. ಫಸ್ಟ್ ಕರ್ನಾಟಕ ಜಾರಿಗೊಳಿಸಿದೆ. ತಮಿಳುನಾಡಿಗೆ ಕರ್ನಾಟಕ ಸರ್ಕಾರ ನೀರು ಬಿಟ್ಟಿದೆ. ಮೂರನೆಯದು ಮಧ್ಯಂತರ ಆದೇಶದ ಯಥಾವತ್ ಜಾರಿ ಉಸ್ತುವಾರಿಯನ್ನು ರಾಷ್ಟ್ರೀಯ ಜಲ ಆಯೋಗ ವಹಿಸಿತ್ತು. ಉಭಯ ರಾಜ್ಯಗಳು ಈ ಕಾರ್ಯದಲ್ಲಿ ಸಹಕರಿಸಿದ್ದವು. ಇದು ಕನ್ನಡ ಪ್ರಭ ಪತ್ರಿಕೆಯ ವರದಿ. ಈ ಪ್ರಕ್ರಿಯೆಗಳನ್ನು ನೋಡಿದರೆ ಇವರು ಇದನ್ನು ಜಾರಿಗೆ ಕೊಡತಕ್ಕ ಕಾರ್ಯದಲ್ಲಿ ಮುಂದಾಗಿದ್ದಾರೆ ಎಂದು ಹೇಳಬಹುದು. ಇದಕ್ಕೆ ಬೇರೆ ಸಾಕ್ಷಿಗಳ ಅಗತ್ಯ ಇಲ್ಲ ಎಂದು ನಾನು ಭಾವನೆ ಮಾಡುತ್ತೇನೆ. ನಾನು ಶಾಸನಗಳ ವಿವರಣೆ ಹೋಗುವುದಿಲ್ಲ. ಆದರೆ ಒಂದು ಮಾತನ್ನು ಹೇಳುತ್ತೇನೆ. ಈ ಕಾವೇರಿ ನ್ಯಾಯ ಮಂಡಳಿಗೆ ಏಕೆ ಬಹಿಷ್ಕಾರ ಹಾಕಬೇಕು, ಇದರ ಬಗ್ಗೆ ಬಹಳಷ್ಟು ಜನ ಮಾತನಾಡಿದ್ದಾರೆ. ಈ ಬಗ್ಗೆ ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ನಾನು ಹೇಳಿದ ಉದ್ದೇಶವಾದರೂ ಏನಂದರೆ ನೀವೇಕೆ ಈ ರಾಜ್ಯದ ಜನರನ್ನು ನಂಬಿಕೆಗೆ ತೆಗೆದುಕೊಳ್ಳುತ್ತಿಲ್ಲ. ಏಕೆ ಜನಕ್ಕೆ ಮೋಸ ಮಾಡುತ್ತಿದ್ದೀರಿ? ಇದರ ಉದ್ದೇಶ ಏನು? ನಿಮ್ಮ ಸರ್ಕಾರವನ್ನು ಉಳಿಸಿಕೊಳ್ಳಬೇಕಾದರೆ ಈ ಕಾವೇರಿ ಜಲವಿವಾದವನ್ನು ಒಂದು ಅಸ್ತ್ರವನ್ನಾಗಿ ಬಳಸುತ್ತಿದ್ದಿರೋ, ಕೇಂದ್ರ ಸರ್ಕಾರವನ್ನು ಮನವೊಲಿಸುವುದಕ್ಕಾಗಲಿ ಅಥವಾ ಕೇಂದ್ರ ಸರ್ಕಾರಕ್ಕೆ ತಮಿಳುನಾಡಿನ ಒಟ್ಟಾರೆ ಮತಬೇಕೆಂದು ಮುಂದೆ ಸೋಮವಾರ ನಡೆಯತಕ್ಕ ರಾಷ್ಟ್ರಪತಿ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ನೀವು ಕರ್ನಾಟಕ ಜನರ ವಿರುದ್ಧ ಏನಾದರೂ ಮಸಲತ್ತನ್ನು ನಡೆಸಿದ್ದಿರಾ? ಈ ಪ್ರಶ್ನೆಗಳನ್ನು ನಾನು ಬಹಳ ನೊಂದ ಮನಸ್ಸಿನಿಂದ ಕೇಳುತ್ತೇನೆ. ಬೆಳಿಗ್ಗೆ ಮಾನ್ಯ ವಾಟಾಳ್ ನಾಗರಾಜ್‌ರವರು ಮಧ್ಯಂತರ ಆಜ್ಞೆಗೆ ಬೆಂಕಿ ಹಚ್ಚುವುದಕ್ಕೆ ಹೊರಟರು. ಏಕೆ ಹೊರಟರು ಅಂದರೆ ಈ ತೀರ್ಪು ಬಂದ ಮೇಲೆ ಸರ್ಕಾರ ಏನನ್ನು ಮಾಡಬೇಕಾಗಿತ್ತು, ಏನನ್ನು ಮಾಡಬಾರದಾಗಿತ್ತೋ ಇದು ಬಹಳ ಮುಖ್ಯವಾದಂತಹ ಪ್ರಶ್ನೆಯಾಗಿದೆ. ರಾಜ್ಯದ ಹಿರಿಯ ನಾಯಕರು ಹಾಗೂ ಸಂಸದೀಯ ಸದಸ್ಯರಾದಂತಹ ಮಾನ್ಯ ಹೆಚ್.ಡಿ. ದೇವೇಗೌಡರು ಹೈಕೋರ್ಟ್ ಆಫ್ ಕರ್ನಾಟಕದಲ್ಲಿ ಒಂದು ಒರಿಜಿನಲ್ ಜ್ಯೂರಿಸ್‌ಡಿಕ್ಷನನ್ನು ಹಾಕಿ ರಿಟ್ ಪಿಟಿಷನ್ ನಂ : 17190: 1992 ರಲ್ಲಿ ಒಂದು ದಾವೆಯನ್ನು ದಾಖಲು ಮಾಡುತ್ತಾರೆ. ಆ ದಾವೆಯ ಒಂದೆರಡು ಪ್ಯಾರಾವನ್ನು ಓದಿ ತಮ್ಮ ಗಮನಕ್ಕೆ ತರುತ್ತೇನೆ.

"That the visit of the Members, particularly after entering the borders of Tamail Nadu, was anything but the visit of a Judicial body on the official mission. The petitioner was told that while the second respondent, the Chairman was accompanied only by his staff, the other two members of the Tribunal and the Assesser took their wives also with them, that the members of the Tribunal participated in public and civil receptions held at Karaikal, Tanjore, Aduthurai, Thiruvannur, Pathukettai etd., in specially erected platforms and that they were all treated to partisan public speeches in support of the claims of Tamil Nadu by Parliticians and men

in public life; that special visit were arranged for the members by the state Government, its officials and public men, to temples, mosques, churches and places of worship in the State where apart from offerings of Puja, Prayers and Prasadam, special gifts were offered to the members and their wives present which were willingly accepted;" ಸಂಸದೀಯ ಸದಸ್ಯರಾದ ಮಾನ್ಯ ದೇವೇಗೌಡರು ಈ ಒಂದು ದಾವಾವನ್ನು ಹಾಕಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಕಾಗೋಡು ತಿಮ್ಮಪ್ಪನವರ ಪರಿಸ್ಥಿತಿನೇ ಹೀಗಾಗ ಬೇಕಾದರೆ ಮಿಕ್ಕವರ ಗತಿ ಏನು ?

ಶ್ರೀ ಕಾಗೋಡು ತಿಮ್ಮಪ್ಪ :– ಮಾನ್ಯ ಚಂದ್ರೇಗೌಡರು ದೇವೇಗೌಡರ ಸ್ಥಿತಿಗೆ ....

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ತಿಮ್ಮಪ್ಪನವರು ಸರ್ಕಾರದ ಪರವಾಗಿ ಈ ರೀತಿ ಒತ್ತಡ ತೆಗೆದುಕೊಂಡು ಬಂದು ಸರ್ಕಾರಕ್ಕೆ ಬೆಂಬಲ ಕೊಡುವ ಮಟ್ಟಕ್ಕೆ ಬಿದ್ದುಬಿದ್ದು ಬರಬೇಕಾದರೆ ಏನು ಕಾರಣ? ಇಲ್ಲಿ ಯಾವಾಗಲೂ ನಿಂತುನಿಂತು ಸರ್ಕಾರವನ್ನು ಟೀಕೆ ಮಾಡುತ್ತಿದ್ದಂತಹ ಮಾನ್ಯ ಕಾಗೋಡು ತಿಮ್ಮಪ್ಪನವರ ಪರಿಸ್ಥಿತಿ ಏಕೆ ಹೀಗಾಯಿತಂದು ನನಗೆ ಮರುಕ ಬರುತ್ತಿದೆ.

ಶ್ರೀ ಬಿ. ಹಚ್. ಬನ್ನಿಕೋಡ್ :– ರಾಜ್ಯದ ರೈತರ ಪರವಾಗಿ ಇದನ್ನೆಲ್ಲಾ ಮಾಡಬೇಕಾಗುತ್ತದೆ. ನಿಮ್ಮ ಹಾಗೆ ಕೇಂದ್ರ ಸರ್ಕಾರವನ್ನು ಒಲಿಸಲಿಕ್ಕೆ ನಾವು ಕೆಲಸವನ್ನು ಮಾಡುತ್ತಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ:– ನಾನು ನಮ್ಮಗೋಸ್ಕರ ಹೇಳುತ್ತಿದ್ದೇನೆ. ದಯಮಾಡಿ ಗಂಭೀರವಾಗಿ ಕೇಳಿ.

ಶ್ರೀ ಎಲ್.ಆರ್ ಶಿವರಾಮೇಗೌಡ:– ದೇಶದ ಜನರಿಗೆ ಮುಚ್ಚುಮರೆ ಮಾಡುತ್ತಿಲ್ಲ. ಸರ್ಕಾರ ಮಾಡುತ್ತಿರುವುದು ಎಲ್ಲರಿಗೂ ಗೊತ್ತಿದೆ.

ಶ್ರೀ ಸಿ. ಬೈರೇಗೌಡ :– ಮಾನ್ಯ ಶಿವರಾಮೇಗೌಡರು ಏತಕ್ಕೆ ಹೀಗೆ ಒದ್ದಾಡುತ್ತಿದ್ದಾರೆಂಬುದು ಚೆನ್ನಾಗಿ ಗೊತ್ತಿದೆ.

ಶ್ರೀ ಎಲ್ .ಆರ್. ಶಿವರಾಮೇಗೌಡ:– ನೀವು ಸಹಿತ ಸರ್ಕಾರ ಮಾಡುತ್ತಿಗತಕ್ಕಂಥ ಕ್ರಮವನ್ನು ಮುಕ್ತಕಂಠದಿಂದ ಕಾವೇರಿಯ ವಿಚಾರದಲ್ಲಿ ಹೊಗಳುತ್ತಿದ್ದೀರಿ. ಇವತ್ತು ಏನಾದರೂ ಹೇಳಿದರೆ ಒಪ್ಪಿಬಿಡುತ್ತೀರಾ?

SHRI D.B. CHANDREGOWDA : Sir, on 26-3-91 Morning, place Saveena - for the....of the chief Minister ಹೇಳುತ್ತಿದ್ದೇನೆ. Grand of Honour was presented to the Members by the State Police. A public meeting was held around 10.3 a.m. with the wives also on the dias. The Members are taken to the local temple where, after Puja and Aarathi, The priests present the turbans, taken of special honour and around . . . Later at Sundar Perumal Koil, meeting is also held. . ." so on and so forth. "On 26.3.91 the Members leave the hotel after a guard of honour is presented by the State police. On the way a couple of farmers' meetings were arranged. The Members were taken to the Darga at Melanagore where prayers were offered. Later, the Members were taken to the Church at Wellanthani, a public meeting in Thiruvayuru. A petition was presented to the Tribunal. One of the speakers, Dr. Saraswathi, in support of the farmers of Tamil Nadu farmers, makes a

forvant appeal to human sympathy and mercy and the result is the order before us. The gift poisons." ಈ ಮಧ್ಯಂತರ ಆಜ್ಞೆಯನ್ನು ಏತಕ್ಕೆ ನಾವು ತಿರಸ್ಕರಿಸಬೇಕೆಂದು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳೇ, ಸಕಾರಣಗಳಿಲ್ಲದೆ ನಾನು ಹೇಳಲಿಲ್ಲ. ಇಂತಹ ಕಾರಣಕ್ಕಾಗಿ . . . . .

ಶ್ರೀ ಸಿ. ಬೈರೇಗೌಡ:– ಬೆಲೆ ಬಾಳುವ ಸೀರೆಗಳನ್ನು ಹಾಗೂ ದಂತದ ನೆನಪಿನ ಕಾಣಿಕೆಯನ್ನು ಕೊಟ್ಟಿರತಕ್ಕಂಥಾದ್ದರ ಬಗ್ಗೆಯೂ ಹೇಳಿ.

SRI D.B. CHANDRE GOWDA : Page 24. "The willing acceptance by the Members glaringly suggestive Red Carpet reception accorded to them within the state of Tamil Nadu, brushing aside all norms of judicial propriety and strict judicial conduct expected of a high judicial body as an Inter State Water Disputes Tribunal . . . ." I don't want to go into the murky deal of this sort. ಇದು ಒಂದು ರೀತಿಯ ರಾಜ್ಯಾಂಗದ ರಕ್ಷಣೆಗೆ ಜವಾಬ್ದಾರಿಯನ್ನು ಹೊತ್ತಂಥ ದೇವತೆಗಳಿಂದು ನಾವೇನು ಭಾವಿಸಿಕಕೊಂಡಿದ್ದೇವ ಅವರಿಂದ ಆಗತಕ್ಕಂಥ ಅಪಚಾರವೆ. ಇದು ನ್ಯಾಯ ನಿರ್ಣಯ ಮಾಡಲು ಜವಾಬ್ದಾರಿಯನ್ನು ಕೊಟ್ಟಂಥ ಜನರೇ ಈ ರೀತಿ ನಡೆದುಕೊಂಡಿರತಕ್ಕಂಥಾದ್ದು. ಬಹುಶಃ ಜಗತ್ತಿನ ಇತಿಹಾಸದಲ್ಲಿ ಬೇರೆ ಎಲ್ಲಿಯೂ ಇಲ್ಲ. ಭಾರತದ ಇತಿಹಾಸದಲ್ಲಿ ನನಗಂತೂ ಗೊತ್ತಿಲ್ಲ. ಅದರ ಬಗ್ಗೆ ಹೆಚ್ಚು ವಿಸ್ತಾರವಾಗಿ ನಾನು ಪ್ರಸ್ತಾಪ ಮಾಡುವುದಿಲ್ಲ. ಇಂತಹ ಪರಿಸ್ಥಿತಿ ಉಂಟಾಗಬಹುದು. ಆ ಕಾರಣಕ್ಕಾಗಿ ಟ್ರಿಬ್ಯೂನಲ್ ಕೊಟ್ಟಿರತಕ್ಕಂಥ ಮಧ್ಯಂತರ ಆಜ್ಞೆಯನ್ನು ಬಹಿಷ್ಕರಿಸಿ ಎಂದು ಹೇಳಿದರೆ, ಈ ಸರ್ಕಾರ ಅದಕ್ಕೆ ಬದಲಾಗಿ ಅದನ್ನು ಪುರಸ್ಕರಿಸಿ Misscellaneous 15 CPM ಅನ್ನು ಹಾಕಿ ಅವರು ಬರೆಯತಕ್ಕಂಥ ಆರ್ಡರ್ ಏನು? I don't want to go into the details of it. ಇಬು ಪ್ರಿವಿಲೇಜ್ ಆಗುತ್ತದೆ. ನೀವು ಒಂದು ಮರು ಪರಿಶೀಲನಾ ಅರ್ಜಿಯನ್ನು ತೆಗೆದುಕೊಂಡು ಹೋಗಿ ಈ ರಾಜ್ಯಕ್ಕೆ ಏನು ಅಪಚಾರ ಮಾಡಿದ್ದೀರಿ, ಈ ಒಂದು ಶಾಸಕಾಂಗ ಸಭೆ ಮಾಡಿದಂತ ತೀರ್ಪಿನ ವಿರುದ್ಧ ನೀವು ಹೋಗಿ ಈ ರಾಜ್ಯಕ್ಕೆ ಏನು ಅನ್ಯಾಯ ಮಾಡಿದ್ದೀರೆಂಬುದನ್ನು ಹೇಳಬೇಕಾಗಿದೆ. ಇಲ್ಲದಿದ್ದರೆ, ಇದು ಪ್ರಿವಿಲೇಜ್ ಹೇಗಾಗುತ್ತದೆ.? ಏನು ಅನ್ಯಾಯವನ್ನು ನೀವು ಮಾಡಿದ್ದೀರಿ? ಒಂದು ನೀವು ನಿರ್ಣಯದ ವಿರುದ್ಧ ಮರು ಪರಿಶೀಲನಾ ಅರ್ಜಿಯನ್ನು ಹಾಕಿದಿರಿ. ಎರಡು, ಆಜ್ಞೆಯನ್ನು ಪುರಸ್ಕರಿಸಿ ನೀರನ್ನು ಬಿಟ್ಟಿರಿ . ಇದಾದ ನಂತರ ಕೇಂದ್ರದ ಮಂತ್ರಿಗಳು ನಿಮಗೆ ಒಂದು ಪತ್ರವನ್ನು ಬರೆದರು. ಆ ಪತ್ರವನ್ನಾದರೂ ಈ ಸದನದ ಮುಂದಿಡುತ್ತೀರಾ? ಸಚಿವರಿಗೆ ಆ ಪತ್ರದ ವಿಷಯವೇನೆಂದು ಕೇಳಿದೆವು.ಅದೇನೆಂದರೆ ಕೆಳಗಡೆ ಇರತಕ್ಕ ಪಾಂಡಿಚೇರಿಯ ಮುಖ್ಯ ಅಭಿಯಂತರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚನೆ ಮಾಡುವುದಕ್ಕಾಗಿ ನಿಮ್ಮ ಅಭಿಪ್ರಾಯವನ್ನು ಕೇಳಿದ್ದರು. ನಿಮಗೆ ನಿಜವಾಗಿಯೂ ಶಾಸನಸಭೆಯ ನಿರ್ಣಯದ ಬಗ್ಗೆ ಕಾಳಜಿ ಇದಿದ್ದರೆ ಆ ತಕ್ಷಣವೇ ಆ ಪತ್ರವನ್ನು ಹರಿದು ಕಸದಬುಟ್ಟಿಗೆ ಬಿಸಾಕಬೇಕಾಗಿತ್ತು. ಆದರೆ ನೀವು ಏನು ಮಾಡಿದಿರಿ? ಆ ಪತ್ರವನ್ನು ಓದಲು ಸರ್ಕಾರವು ಒಂದು ಕ್ಯಾಬಿನೆಟ್ ಸಬ್ ಕಮಿಟಿಯನ್ನು ನೇಮಕ ಮಾಡುತ್ತದೆ. ಅದರ ಬಗ್ಗೆ ಕ್ಯಾಬಿನಟ್ ಸಬ್ ಕಮಿಟಿಯ ತೀರ್ಮಾನವನ್ನು ಕೊಡುತ್ತದೆ. ಆ ಕಮಿಟಿಯ ತೀರ್ಮಾನವನ್ನಾದರೂ ಸದನದಲ್ಲಿ ಕ್ಯಾಬಿನೇಟ್ ಸಬ್ ಕಮಿಟಿಯು ನೀರನ್ನು ಬಿಡಬೇಡಿ ಎಂದು ಹೇಳಿದೆ ಎಂದು ನಾನು ಕೇಳಿದ್ದೇನೆ. ಆದರೆ ಅದಕ್ಕೆ ವಿರುದ್ಧವಾಗಿ ನೀರನ್ನು ಬಿಟ್ಟಿದ್ದೀರಿ. ಹಾಗಾದರೆ ನೀರನ್ನು ಬಿಟ್ಟವರಾರು? ಯಾರು ಅಪರಾಧಿ, ಯಾರ್ಯಾರು ಅಪರಾಧವನ್ನು ಮಾಡಿದ್ದಾರೆ? ನನಗೆ ಬೇಕಾಗಿರತಕ್ಕದ್ದು ಅದು. ಆ ಸಮಿತಿಯು ರಚನೆ ಆದಮೇಲೆ ಏನು ಪತ್ರವನ್ನು ಅವರಿಗೆ ಬರೆದಿರೆಂಬುದು ನನಗೆ ಗೊತ್ತಿಲ್ಲ. The whole House and the entire Members of the Opposition are kept in dark so far as the correspondence is concerned. ಅದನ್ನು ಸದನದ ಮುಂದಿಡಿ.

ಮಾನ್ಯ ಅಧ್ಯಕ್ಷರೆ, ಮೊದಲನೆಯ ಆಜ್ಞೆಯೊಳಗೆ ಕರ್ನಾಟಕ ರಾಜ್ಯಕ್ಕೆ ಒಟ್ಟು ಕಾವೇರಿ ಜಲಾಶಯದಿಂದ ಬರಬೇಕಾದ ಒಟ್ಟು ನೀರಿನ ಪ್ರಮಾಣ: 560 ಟಿ.ಎಂ.ಸಿ ಎಫ್. ಟಿ ನೀರು. ಇದರಲ್ಲಿ ಕರ್ನಾಟಕದಿಂದ ಮೆಟ್ಟೂರಿಗೆ ಬಿಡಬೇಕಾದ ತಕ್ಕ ನೀರಿನ ಪಾಲು 205 ಟಿ.ಎಂ.ಸಿ. ಎಫ್.ಟಿ. ನೀರು. ಮಧ್ಯಂತರ ಆಜ್ಞೆಯಂತೆ 500 ಟಿ.ಎಂ.ಸಿ.ಎಫ್.ಟಿ. ನೀರಿನಲ್ಲಿ ಮೆಟ್ಟೂರು ಜಲಾಶಯಕ್ಕೆ 205 ಟಿ.ಎಂ.ಸಿ. ಎಫ್.ಟಿ ನೀರು ಹೋದರೆ ನಮಗೆ 295 ಟಿ.ಎಂ.ಸಿ. ಎಫ್.ಟಿ ನೀರು ಉಳಿಯುತ್ತದೆ ಎಂದು ನಾವು ಅಂದುಕೊಂಡೆವು. ಆ ರೀತಿ ನಾವು ಮಾಡಿದೆವು. ಎರಡನೆಯದಾಗಿ 11 ಲಕ್ಷದ 20 ಸಾವಿರ ಎಕರೆಯ ಬಳಕೆಗೆ 312 ಟಿ.ಎಂ.ಸಿ.ಎಫ್.ಟಿ. ನೀರು ನಮಗೆ ಬೇಕು. ಅದನ್ನು ಅವರು ಮಾನ್ಯ ಮಾಡಿದ್ದಾರೆ ಎನ್ನತಕ್ಕ ಒಂದು ನಿರ್ಣಯವೆಂದು ನಾವು ಅಂದುಕೊಂಡೆವು. ಮೂರನೆಯದಾಗಿ 11 ಲಕ್ಷದ 20 ಸಾವಿರ ಭೂ ಪ್ರದೇಶದಲ್ಲಿ ನಾವು 1974 ನೇ ಇಸವಿಯಿಂದ ಅಭಿವೃದ್ಧಿ ಮಾಡಿದಂಥ ಅಚ್ಚುಕಟ್ಟು ಪ್ರದೇಶ ಸುಮಾರು 5 ಲಕ್ಷ ಎಕರೆಗಳು. 1974ರಿಂದ ಹಿಂದೆ ಇದ್ದಂಥ ಅಚ್ಚುಕಟ್ಟು ಪ್ರದೇಶ ಸುಮಾರು 6 ಲಕ್ಷ ಎಕರೆಗಳು. ಈ 11 ಲಕ್ಷದ 20 ಸಾವಿರ ಎಕರೆ ಪ್ರದೇಶದ ನೀರಾವರಿ ಭೂಮಿಗೆ ಬೇಕಾಗಿರತಕ್ಕ 312 ಟಿ ಎಂ ಸಿ ಎಫ್ ಟಿ ನೀರನ್ನು ಕೊಡಲು ಅವರು ಒಪ್ಪಿಕೊಂಡಿದ್ದಾರೆಂದು ನಾವು ಅರ್ಥಮಾಡಿಕೊಂಡೆವು. ಆದರೆ ಮರುಪರಿಶೀಲನಾ ವರದಿಯಲ್ಲಿ ಅವರು ಏನು ಹೇಳಿದರು ನಿಮಗೆ ಬಹಳ ದೊಡ್ಡ ಉಪಕಾರವನ್ನು ನಾವು ಮಾಡಿದ್ದೇವೆ 'ಬಿಳಿಗೊಂಡ್ಲು' ಎನ್ನತಕ್ಕ Central water commission ಇರತಕ್ಕ ಜಾಗದಲ್ಲಿ 227 ಟಿ.ಎಂ.ಸಿ. ಯಷ್ಟು ನೀರು ಪ್ರತಿ ವರ್ಷವು ಹರಿದುಹೋಗುತ್ತದೆ. "ಬಿಳಿಗೊಂಡ್ಲು" ವಿನಿಂದ ಮೆಟ್ಟೂರಿನಲ್ಲಿ ಶೇಖರಣೆಯಾಗತಕ್ಕ ನೀರಿನ ಪ್ರಮಾಣ 25 ಟಿ.ಎಂ.ಸಿ. ಇದರಿಂದಾಗಿ ಒಟ್ಟು 252 ಟಿ.ಎಂ.ಸಿ. ನೀರು ಪ್ರತಿ ವರ್ಷವು ಮೆಟ್ಟೂರು ಜಲಾಶಯಕ್ಕೆ ಹೋಗುತ್ತದೆ. ಆದರೆ ಅವರು ನಿಮಗೆ ವಿನಾಯಿತಿಯನ್ನು ಕೊಟ್ಟು 205 ಟಿ.ಎಂ.ಸಿ. ನೀರನ್ನು ಬಿಡಿ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಅಂದರೆ ಮಧ್ಯಂತರ ಆಜ್ಞೆಯಿಂದ ನಾವು ನಿರೀಕ್ಷೆ ಮಾಡಿದಂಥ, ನಮಗೆ ಸಿಗಬಹುದಾದಂಥ 295 ಟಿ.ಎಂ.ಸಿ. ನೀರು ಇಲ್ಲ. ನೀವು 248 ಟಿ.ಎಂ.ಸಿ. ನೀರಿಗೆ ಮಾತ್ರ ಅರ್ಹರು ಎನ್ನತಕ್ಕಂಥದನ್ನು ಅವರು ಸ್ಪಷ್ಟೀಕರಣ ಮಾಡಿದರು. ಎರಡನೆಯದಾಗಿ 3–4–1992ರ ಆದೇಶದಲ್ಲಿ 11ಲಕ್ಷದ 20 ಸಾವಿರ ಎಕರೆಗೆ ಏನು ಹೇಳುತ್ತಾರೆಂದರೆ: ಅದನ್ನು ಇಲ್ಲಿ ಕೋಟ್ ಮಾಡುತ್ತಿದ್ದೇನೆ. ಅದರ ಎರಡನೆಯ ಭಾಗಕ್ಕೆ ಹೋಗುವುದಕ್ಕೆ ಮೊದಲು ಒಂದು ಫಿಗರನ್ನು ತಮ್ಮ ಗಮನಕ್ಕೆ ತರುತ್ತೇನೆ. ಎಂಥ ಒಂದು ಸಾಮಾನ್ಯ ಪಂಚಾಯಿತಿಯೂ ಕೂಡಾ ಇಂಥ ಅಪರಾಧವನ್ನು ಮಾಡುವುದಿಲ್ಲ. ಕರ್ನಾಟಕ ಮತ್ತು ತಮಿಳುನಾಡಿನ ಗಡಿ ಭಾಗದಲ್ಲಿರತಕ್ಕ 'ಬಿಳಿಗೊಂಡ್ಲು'' ಹಳ್ಳಿಯಲ್ಲಿ ಸೆಂಟ್ರಲ್ ವಾಟರ್ ಕಮೀಷನ್‌ರವರು ನೀರನ್ನು ಗೇಜ್ ಮಾಡಲು ಒಂದು ಗೇಜ್ ಸೆಂಟರ್‌ನ್ನು ಇಟ್ಟಿದ್ದಾರೆ. ಇದನ್ನು ತಾವು ಸ್ವಲ್ಪ ಕಷ್ಟಪಟ್ಟು ಕೇಳಿ. ಏಕೆಂದರೆ ಇದು ಒಂದು ಕೋಟಿ ಜನರ ಜೀವನಮರಣದ ಪ್ರಶ್ನೆ. ಹಾಗೆಯೇ ನಿಮ್ಮ ಮರುಪರಿಶೀಲನಾ ಅರ್ಜಿ. ನಮಗೆ ಎಂಥ ದ್ರೋಹವನ್ನು ಮಾಡಿತು, ಅದರಿಂದ ಈ ರಾಜ್ಯದ ಜನಕ್ಕೆ ಎಂಥ ದ್ರೋಹವಾಯಿತು ಏಕೆ ನೀವು ಈ ಮರುಪರಿಶೀಲನಾ ಅರ್ಜಿಯನ್ನು ತೆಗೆದುಕೊಂಡು ಹೋಗಿ ನಮಗೆ ವಿಷವನ್ನು ಉಣ್ಣಿಸಿದಿರಿ ಎಂದು ಕೇಳುತ್ತಿದ್ದೇನೆ ?

ಇಲ್ಲಿ ಅವರೇಜ್ ಆಗಿ 6 ವರ್ಷಗಳಲ್ಲಿ ಟ್ರಿಬ್ಯುನಲ್ ಪ್ರಕಾರ ಬಿಳಿಗೊಂಡ್ಲುವಿನಲ್ಲಿ ಹೋಗಿರತಕ್ಕ ನೀರು 27 ಟಿ.ಎಂ.ಸಿ.ಎಫ್.ಟಿ. ಅಲ್ಲಿಂದ ಕೆಳಗಡೆ ಮೆಟ್ಟೂರು ಜಲಾಶಯಕ್ಕೆ ಹೋಗಿರತಕ್ಕ ನೀರು 205 ಟಿ.ಎಂ.ಸಿ.ಎಫ್.ಟಿ. ಅಂದರೆ 227 ಟಿ.ಎಂ.ಸಿ.ಎಫ್.ಟಿ ನೀರು ಮೇಲು ಭಾಗಗಳಲ್ಲಿ ಇರತಕ್ಕದ್ದು ಕೆಳಕ್ಕೆ ಬರುವ ಹೊತ್ತಿಗೆ 205 ಟಿ.ಎಂ.ಸಿ.ಎಫ್.ಟಿ ಆಗುತ್ತದೆ. ನದಿಯ ಮೇಲ್ಗಡೆ ಕೃಷ್ಣರಾಜಸಾಗರದಲ್ಲಿ 25 ಅಡಿ ನೀರು ಇದ್ದರೆ ಅದ ಕೆಳಗಡೆ ಬರುಬರುತ್ತಾ ಜಾಸ್ತಿಯಾಗುತ್ತದೆಯೇ ಹೊರತು ಕಡಿಮೆಯಾಗುವುದಿಲ್ಲ. ಆದರೆ ಇಲ್ಲಿ ತಿರುಗುಮುರುಗು ಆಗಿದ. 227 ಟಿ.ಎಂ.ಸಿ.ಎಫ್.ಟಿ ನೀರು ಬಿಳಿಗೊಂಡ್ಲುವಿನಲ್ಲಿದ್ದರೆ ಇದೇ ನೀರು ಸುಮಾರು 64 ಕಿ.ಮೀ. ಕೆಳಗಡೆ ಇರತಕ್ಕ ಮೆಟ್ಟೂರು ಜಲಾಶಯದಲ್ಲಿ 205 ಟಿ.ಎಂ.ಸಿ.ಎಫ್.ಟಿ. ಆಗುತ್ತದೆ.

ಇನ್ನು ಎರಡನೆಯ ವಿಚಾರವನ್ನು ನಾನು ಪ್ರಸ್ತಾಪ ಮಾಡುವುದಾದರೆ 11.20 ಲಕ್ಷ ಎಕರೆಗೆ ಸ್ವಲ್ಪ

ಹೆಚ್ಚೂ ಕಡಿಮೆ ನಮಗೆ ಇಷ್ಟನ್ನಾದರೂ ಅವರು ಒಪ್ಪಿಕೊಂಡಿದ್ದಾರೆ. 2ನೇ ಆಜ್ಞೆಯಲ್ಲಿ ಅತ್ಯಂತ ಆಘಾತಕಾರಿಯಾದಂಥ ಒಂದು ಬೆಳವಣಿಗೆಯನ್ನು ನಾವು ಇಲ್ಲಿ ಕಾಣುತ್ತೇವೆ. ಅದೇನೆಂದರೆ, 1974ನೇ ಇಸವಿಯಿಂದ ಮುಂದೆ ನೀವು ಏನು ನೀರಾವರಿ ಪ್ರದೇಶವನ್ನು ಅಭಿವೃದ್ಧಿ ಮಾಡಿದ್ದೀರಿ ಅದನ್ನು ಟ್ರಿಬ್ಯುನಲ್‌ನವರು ಮಾನ್ಯ ಮಾಡುವುದಿಲ್ಲ. ಅದನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಇದು ನಮ್ಮ ಲೆಕ್ಕದಲ್ಲಿ ಇಲ್ಲ ಎಂದು ಅವರು ಹೇಳುತ್ತಾರೆ. ಇದನ್ನು ಹೇಳುವಾಗ ರಾಜ್ಯ ಸರ್ಕಾರ ನಡೆದುಕೊಂಡಿರತಕ್ಕ ರೀತಿಯನ್ನು ಇಲ್ಲಿ ಪ್ರಸ್ತಾಪ ಮಾಡುತ್ತಾರೆ.

Page 16 of the printed Book readsd : "Thus the State of Karnataka has failed to make out any case for modification of our order dated 25th June 1991, on the ground that there has been a change in the circumstances after passing our stay order."

Page 17 :

"It is mis-conceived to urge that by our order dated 25th June 1991 the Tribunal had accepted Karnataka's figure of 312 TMC as its requirement for irrigating 111.2 lakh acres." I don't want to go through the details of it.

At page 21, I quote again :

"After maintaining the flow of 205 TMCFT at Mettur dam, Karnataka would be able to appropriate the residual water of the river. It was therefore thought proper at the interim stage in public interest, to restrict the area irrigatedd by Cauvery waters in Karnataka to avoid future possible difficulties which might arised by fixation in the allocation of water in the final Award."

Mr. Speaker, I will read one paragraph from page 26:

"We had done this because in the years we had selected for fixing the monthly releases, there had been no intervention by way of construction of the new storages." They recognise your development of irrigation potential after 1974. No intervention by way of construction of new storages and impounding of water within Karnataka during the period. It would not have been appropriate to fix the monthly flows according to the regulations of release of waters imposed by the State of Karnataka after construction of new dams in the tributaries of the Cauvery within the said State.

ಇನ್ನು ನೀವು 1974ರಿಂದ ಏನು ಮಾಡಿದ್ದೀರಿ ಅದನ್ನು ನಾವು ಮಾನ್ಯ ಮಾಡುವುದಕ್ಕೆ ಸಿದ್ಧವಿಲ್ಲವೆಂದು ಹೇಳಿದ್ದಾರೆ.

ನೀವು ಮಧ್ಯಂತರ ಆಜ್ಞೆಗೆ ಮರು ಪರಿಶೀಲನಾ ಅರ್ಜಿ ಹಾಕಿ ಕರ್ನಾಟಕ ಜನರಿಗೆ ಕೊಟ್ಟಂತಹ ಬಳುವಳಿ ಇದು. ಇಂತಹ ಬಳುವಳಿಯನ್ನು ಕೊಟ್ಟು ಈ ಸದನದಲ್ಲಿ ನಿರ್ಣಯ ಮಂಡನೆ ಮಾಡುವುದು ಸರ್ವಾನುಮತದಿಂದ ಅಂಗೀಕಾರ ಮಾಡುವುದು. ಆದರೆ ಈ ನಿರ್ಣಯಕ್ಕೆ ತದ್‌ವಿರುದ್ಧವಾಗಿ ಒಂದು ಕಡೆ ಅರ್ಜಿ ಹಾಕುವುದು, ಇನ್ನೊಂದು ಕಡೆ ನೀರು ಬಿಡುವುದು.. ಮೂರನೆಯದಾಗಿ ಕೇಂದ್ರ ಸರಕಾರದ ಉಸ್ತುವಾರಿಯಲ್ಲಿ ನೀರು ಬಿಡತಕ್ಕಂಥ ವ್ಯವಸ್ಥೆಯನ್ನು ಸೂಪರ್‌ವೈಸ್ ಮಾಡುವುದಕ್ಕೆ ಕೇಂದ್ರ ಸರಕಾರ ಹೇಳಿದ ಹಾಗೆ ಬರೆದು ಹಾಕಿ ಹಣೆಯೋದು. ಅಂತಿಮವಾಗಿ ಪಾಂಡಿಚೆರಿ ಮುಖ್ಯ ಇಂಜಿನಿಯರ್‌ರವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚನೆ ಮಾಡುವುದು ಅವರು ಬಂದು ನಾವು ಕೊಡಿಟ್ಟಂಥ ನೀರನ್ನು ಬಿಡಿಸಿಕೊಳ್ಳುತ್ತಾ ಹೋಗುವುದು. ನೀರು ಬಿಟ್ಟಿರುವುದಕ್ಕೆ ಸಾಕ್ಷಿ ನಮ್ಮಲ್ಲಿರತಕ್ಕಂತಹ ದಾಖಲೆಗಳ ಜೊತೆಗೆ ಕೇಂದ್ರ ಸರಕಾರದ ಮಂತ್ರಿಗಳು

ಕೊಡತಕ್ಕಂಥ ಹೇಳಿಕೆ ಕೂಡ ಒದು ದಾಖಲೆ ಆಗಿದೆ. ಆದ್ದರಿಂದ ಈ ಶಾಸನ ಸಭೆ ಮಾಡಿದಂತಹ ನಿರ್ಣಯದ ಗತಿ ಏನಾಯಿತು? ನಿರ್ಣಯವನ್ನು ಏತಕ್ಕೆ ಮಾಡಿಸಿದಿರಿ? ಈ ನಿರ್ಣಯವನ್ನು ಕೈಯ್ಯಲ್ಲಿಟ್ಟುಕೊಂಡು ಈ ಸದನಕ್ಕೆ ಹಕ್ಕುಚ್ಯುತಿಯನ್ನುಮಾಡಿದ್ದೀರಿ. ಇಡೀ ಶಾಸನ ಸಭೆ ಸದಸ್ಯರ ಹಕ್ಕುಚ್ಯುತಿಯಾಗಿದೆ. ಈ ಹಕ್ಕುಚ್ಯುತಿಯನ್ನು ಮಾಡಿದಂತಹ ಸಂಪೂರ್ಣ ಜವಾಬ್ದಾರಿ ಈ ಸರಕಾರದ್ದು ಮತ್ತು ಈ ಸರಕಾರದ ನೇತೃತ್ವವನ್ನು ಹೊಂದಿರತಕ್ಕಂತಹ ಮುಖ್ಯಮಂತ್ರಿಗಳಾದ ಶ್ರೀ ಬಂಗಾರಪ್ಪನವರದ್ದು, ಶಾಸನ ಸಭೆಯ ನಾಯಕರಾಗಿರತಕ್ಕಂತಹ ಶ್ರೀಮಾನ್ ಬಂಗಾರಪ್ಪನವರು ಹಕ್ಕುಚ್ಯುತಿಯನ್ನು ಮಾಡಿದ್ದಾರೆ, ಇಲ್ಲಿ ಹಕ್ಕುಚ್ಯುತಿಯಾಗಿದೆ ಎನ್ನತಕ್ಕಂಥಾದ್ದನ್ನು ಮತ್ತು ಪರಿಶೀಲನೆ ಮಾಡುವ ಅಗತ್ಯವಿಲ್ಲ. ನೀವು ಏನು ನಿರ್ಣಯವನ್ನು ಕೊಡುತ್ತೀರೋ ಆ ನಿರ್ಣಯವನ್ನು ಹೊತ್ತುಕೊಳ್ಳುವುದಕ್ಕೆ ನಾವು ತಯಾರಾಗಿದ್ದೇವೆ. ದಯಮಾಡಿ ಇಂತಹ ಹಕ್ಕುಚ್ಯುತಿಯಾಗಿರತಕ್ಕಂಥಾದ್ದಕ್ಕೆ ಆಗಬೇಕಾದಂತಹ ಶಿಕ್ಷೆ ಏನು ಮಾಡಬೇಕೆಂದು ಇದೆಯೋ ಆ ಶಿಕ್ಷೆಯನ್ನು ವಿಧಿಸತಕ್ಕಂತಹ ಸಂಪೂರ್ಣ ಜವಾಬ್ದಾರಿಯನ್ನು ತಮಗೇ ಬಿಡುತ್ತೇನೆ. ಇಲ್ಲಿ ಹಕ್ಕುಚ್ಯುತಿಯಾಗಿದೆ ಎನ್ನುವುದನ್ನು ನಾನು ಪೂರ್ಣವಾಗಿ ತಮಗೆ ಬಿಡಿಸಿಟ್ಟಿದ್ದೇನೆ. ಇದನ್ನು ತಾವೇ ಇಲ್ಲಿ ನಿರ್ಣಯಿಸಬೇಕೆಂದು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಸನ್ಮಾನ್ಯ ಅಧ್ಯಕ್ಷರೇ, ಅತ್ಯಂತ ಪ್ರಮುಖವಾದ ವಿಷಯದ ಬಗ್ಗೆ ಕರ್ನಾಟಕದ 4 ಕೋಟಿ ಜನರಿಗೆ ಸಂಬಂಧಪಟ್ಟಂತಹ ವಿಚಾರದ ಬಗ್ಗೆ ಈ ಸರಕಾರ ಈ ಶಾಸನಸಭೆಯ ಸರ್ವಾನುಮತ ನಿರ್ಣಯಕ್ಕೆ ವಿರುದ್ಧವಾಗಿ ನಡೆದುಕೊಂಡು ಬೇಜವಾಬ್ದಾರಿತನದಿಂದ ನಡೆದುಕೊಂಡು ದೊಡ್ಡ ಅಪರಾಧ ಮಾಡಿದೆ. ಬಹುಶಃ ಇದರ ಬಗ್ಗೆ ಮೇಲುನೋಟಕ್ಕೆ ಇರುವಂತಹ ದಾಖಲೆಗಳನ್ನು ಪರಿಶೀಲನೆ ಮಾಡಿದಾಗ ಒಂದು ಕ್ಷಣ ಸಹ ತಡಮಾಡದೆ ಇದನ್ನು ಪ್ರಿವಿಲೇಜ್ ಕಮಿಟಿಗೆ ಕಳಿಸಿಕೊಡಬೇಕಾಗುತ್ತದೆ ಎಂದು ತಾವು ನಿಶ್ಚಯ ಮಾಡಿರಬಹುದು ಅದಾದ ನಂತರ ಈ ನಾಡಿನ ಜನರ ಹಿತದೃಷ್ಟಿಯಿಂದ ಅಪರಾಧ ಮಾಡಿರುವಂತಹ ಈ ಸರಕಾರಕ್ಕೆ ಏನಾದರೂ ಸ್ವಲ್ಪ ಜವಾಬ್ದಾರಿ ಇದ್ದರೆ ಅವರ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೋಗುವಂತಹ ಒಂದು ವಿಶೇಷವಾದ ಪ್ರಸಂಗ ಇದಾಗಿದೆ. ಇದನ್ನು ನೇರವಾಗಿ ಪ್ರಿವಿಲೇಜ್ ಕಮಿಟಿಗೆ ಕಳಿಸಿಕೊಡಿ ಎಂದು ಏತಕ್ಕೆ ಮಾತನ್ನಾಡುತ್ತಿದ್ದೇನೆಂದರೆ ಸನ್ಮಾನ್ಯ ಮುಖ್ಯ ಮಂತ್ರಿಗಳೇ ಹೇಳಿರುವಂತಹ ಮಾತು ದಾಖಲೆಗಳಲ್ಲಿ ಇದೆ. ನಾವು ನಿರ್ಣಯವನ್ನು ಏನು ತೆಗೆದುಕೊಂಡೆವು. "ದಿನಾಂಕ 25–6–91 ರಂದು, ಕಾವೇರಿ ಜಲವಿವಾದದ ಬಗ್ಗೆ ಕಾವೇರಿ ನ್ಯಾಯಾಧೀಕರಣ ನೀಡಿರುವ ಮಧ್ಯಂತರ ಆಜ್ಞೆಯು ಕರ್ನಾಟಕದ ಹಿತಕ್ಕೆ ಮಾರಕವಾಗಿರುವುದರಿಂದ ಮತ್ತು ಟ್ರಿಬ್ಯುನಲ್ ಕಾರ್ಯವ್ಯಾಪ್ತಿಗೆ ಹೊರತಾಗಿದ್ದು ಕಾನೂನು ವಾಸ್ತವತೆಗೆ ದೂರವಾಗಿರುವುದರಿಂದ ಇದನ್ನು ತಿರಸ್ಕರಿಸಬೇಕೆಂದು ಸರ್ವಾನುಮತದಿಂದ ಸರಕಾರವನ್ನು ಒತ್ತಾಯಿಸುತ್ತದೆ. ಈ ಹಿನ್ನಲೆಯಲ್ಲಿ ರಾಷ್ಟ್ರ ಜಲ ನೀತಿಯನ್ನು ರೂಪಿಸಿ ಅಂತರರಾಜ್ಯ ಜಲ ವಿವಾದ 56ರ ಶಾಸನಕ್ಕೆ ತಕ್ಕ ತಿದ್ದುಪಡಿಯು ಆಗುವವರೆಗೆ ಮತ್ತು ನ್ಯಾಯಾಧೀಕರಣ ಇದಕ್ಕೆ ಸ್ಪಷ್ಟವಾದ ಮಾರ್ಗಸೂಚಿ ಒದಗಿಸುವವರೆಗೆ ಕಾವೇರಿ ಜಲ ವಿವಾದಕ್ಕೆ ಸಂಬಂಧಪಟ್ಟ ಹಾಗೆ ರಚಿತವಾಗಿರುವ ಕಾವೇರಿ ನ್ಯಾಯಾಧೀಕರಣದ ಮುಂದಿರುವ ಎಲ್ಲಾ ಕಲಾಪಗಳನ್ನು ಸ್ಥಗಿತಗೊಳಿಸುವಂತೆ ಕೇಂದ್ರ ಸರಕಾರವನ್ನು ಈ ಸಭೆಯು ಸರ್ವಾನುಮತದಿಂದ ಒತ್ತಾಯಿಸುತ್ತದೆ." ಎಂದು ಇದೆ. ಈ ಒಂದು ನಿರ್ಣಯವನ್ನು ಮಂಡನೆ ಮಾಡಿದಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಂಗಾರಪ್ಪನವರು ಹೇಳಿರುವಂತಹ ಮಾತುಗಳು ದಾಖಲೆಗಳಲ್ಲಿ ಇದೆ. ಏನೆಂದರೆ ! "ನಾನು ಸರಕಾರದ ಪರವಾಗಿ ಒಂದೇ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದೇನೆ. ಯಾವ ರೀತಿಯಾಗಿ ಈ ಸದನ ಅಭಿಪ್ರಾಯಪಡುತ್ತದೋ ಆ ರೀತಿ ನಡೆದುಕೊಳ್ಳುವುದಕ್ಕೆ ಸರಕಾರ ಬದ್ಧವಾಗಿದೆ. ಯಾವ ರೀತಿಯಾಗಿ ಸದನ ನಿರ್ಣಯದ ಮುಖಾಂತರ ಸರಕಾರ ನಡೆದುಕೊಳ್ಳಬೇಕೆಂದು ಆದೇಶ ಕೊಡುತ್ತೀರೋ ಆ ರೀತಿಯಾಗಿ ನಡೆದುಕೊಳ್ಳುವುದಕ್ಕೆ ಸರಕಾರ ಸಿದ್ಧವಾಗಿದೆ. ಈ ದೃಷ್ಟಿಯಿಂದ ಸರಕಾರ ಅಂತಿಮ ತೀರ್ಮಾನವನ್ನು ಸದನಕ್ಕೇ ಬಿಡುತ್ತದೆ.

ಈ ತೀರ್ಮಾನಕ್ಕೆ ಯಾವುದೇ ಸಂದರ್ಭದಲ್ಲಿ ರಾಜ್ಯದ ರಕ್ಷಣೆಯ ಹಿತವನ್ನು ಕಾಪಾಡತಕ್ಕ

ಉದ್ದೇಶ ಇರುವುದರಿಂದ ಸದನದ ತೀರ್ಪಿಗೆ ಸರಕಾರ ಬದ್ಧವಾಗಿರುತ್ತದೆಂದು ಮತ್ತೊಮ್ಮೆ ಹೇಳುತ್ತೇನೆ.'' ಎಂದು ಹೇಳಿದ್ದಾರೆ. ಇದಾದ ಮೇಲೆ ಮಾನ್ಯ ಉಪಾಧ್ಯಕ್ಷಣೆಯವರು ಈ ನಿರ್ಣಯವನ್ನು ಮಂಡನೆ ಮಾಡಿದರು ನಂತರ ಅದು ಸರ್ವಾನುಮತದ ನಿರ್ಣಯ ಆಯಿತು. ಈ ಸರ್ವಾನುಮತದ ನಿರ್ಣಯವಾದ ಮೇಲೆ ಮರುಪರಿಶೀಲನಾ ಅರ್ಜಿಯನ್ನು ಹಾಕಿರುವುದಕ್ಕೆ ಮತ್ತು ಯಾವುದೇ ದಾಖಲೆಗಳು ಅಗತ್ಯ ಇಲ್ಲ. ನಮ್ಮ ಅಡ್ವೊಕೇಟ್ಸ್ ಅಪಿಯರ್ ಆಗಿದ್ದಾರೆ. ಮರುಪರಿಶೀಲನಾ ಅರ್ಜಿಯನ್ನು ಈಗಾಗಲೇ ಕೊಟ್ಟಾಗಿದೆ.

4.00 ಪಿ.ಎಂ.

ಈ ಒಂದು ಸದನದಲ್ಲಿ ಸರ್ವಾನುಮತದಿಂದ ತೆಗೆದುಕೊಂಡ ನಿರ್ಣಯದ ಬಗ್ಗೆ ವ್ಯತಿರಿಕ್ತವಾಗಿ ವಿರುದ್ಧವಾಗಿ ಈ ನಾಡಿನ ನಾಲ್ಕು ಕೋಟಿ ಜನರ ಹಿತಕ್ಕೆ ಬರುವಂಥ ರೀತಿಯಲ್ಲಿ ಕೇವಲ ಈ ಸರ್ಕಾರ ತಾವು ಅಧಿಕಾರದಲ್ಲಿ ಮುಂದುವರಿಯುವ ಒಂದೇ ಒಂದು ಕಾರಣಕ್ಕೋಸ್ಕರ ಈ ರಾಜ್ಯದ ಜನಕ್ಕೆ ದ್ರೋಹ ಮಾಡಿದ್ದಾರೆಂದು ಈ ಒಂದು ಸಂದರ್ಭದಲ್ಲಿ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ, ಈ ಸರ್ಕಾರಕ್ಕೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ, ಏನೆಂದರೆ, ಈ ನಿರ್ಣಯ ಸರ್ವಾನುಮತದ ನಿರ್ಣಯವಾದ ಮೇಲೆ, ಈ ಸದನದಲ್ಲಿ ತಾವೇನಾದರೂ ಮರುಪರಿಶೀಲನೆ ಅರ್ಜಿಯನ್ನು ಹಾಕುವ ಬಗ್ಗೆ ಈ ಸದನದಲ್ಲಿ ಚರ್ಚೆ ಆಯಿತೇ? ಈ ಸದನ ತಮಗೆ ಒಪ್ಪಿಗೆಯನ್ನು ಯಾವುದಾದರೂ ಸಂದರ್ಭದಲ್ಲಿ ಕೊಟ್ಟಿತ್ತೆ? ಈ ರೀತಿ ನಿರ್ಣಯವಾದ ಮೇಲೆ ಯಾವುದೇ ಒಂದು ಒಪ್ಪಿಗೆಯನ್ನು ಸದನಕ್ಕೆ ಕೊಡದೆ ಇರುವಂಥ ಸಂದರ್ಭದಲ್ಲಿ ಇಡೀ ಸದನಕ್ಕೆ ನಮ್ಮ ಹಕ್ಕಿಗೆ ಚ್ಯುತಿ ಮಾಡುವಂಥ ಅಕ್ಷಮ್ಯ ಅಪರಾಧ ಈ ಸರ್ಕಾರ ಮಾಡಿದೆ ಹಾಗೂ ಉದ್ದೇಶಪೂರ್ವಕವಾಗಿ ಮಾಡಿದೆ. ಸನ್ಮಾನ್ಯ ಅಧ್ಯಕ್ಷರೇ ನಾನು ನೇರವಾಗಿ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ, ಇವತ್ತು ಮಂಡ್ಯ ಕಾವೇರಿ ಸಮನ್ವಯ ಸಮಿತಿಯಲ್ಲಿ ನಾವು ಒಂದು ನಿರ್ಣಯವನ್ನು ತೆಗೆದುಕೊಂಡಿರುತ್ತೇವೆ. ಅದಾದಮೇಲೆ ಈ ಟ್ರಿಬ್ಯುನಲ್‌ನಿಂದ ಯಾವುದೇ ಕಾರಣಕ್ಕೆ ನಮಗೆ ನ್ಯಾಯ ಸಿಕ್ಕಲಿಕ್ಕೆ ಸಾಧ್ಯವಿಲ್ಲ. ಮತ್ತೆ ಒಂದು ರಾಷ್ಟ್ರೀಯ ಜಲನೀತಿಯನ್ನು ರೂಪಿಸದೆ ಇರುವುದರಿಂದ, ಯಾವ ಆಧಾರದ ಮೇಲೆ ಈ ಟ್ರಿಬ್ಯುನಲ್ ಈ ಒಂದು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ? ಆದ್ದರಿಂದ ಪ್ರಧಾನಿಯವರು ಸಂಬಂಧಪಟ್ಟ ಮುಖ್ಯಮಂತ್ರಿಗಳ ಸಭೆಯನ್ನು ಕರೆದು ಮಾತುಕತೆಯ ಮೂಲಕ ಸಮಸ್ಯೆಯನ್ನು ಬಗೆಹರಿಸಬೇಕೆಂದು ಸರ್ವಾನುಮತದ ನಿರ್ಣಯವನ್ನು ಮಾಡಿದ್ದಾಯಿತು. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದರು, ಎಲ್ಲ ಪಕ್ಷದ ಮುಖಂಡರು ಬಂದಿದ್ದರು, ಮಂಡ್ಯದಲ್ಲಿ ಸೇರಿದ್ದಂಥ ಕಾವೇರಿ ಜಲ ವಿವಾದದ ಸಮನ್ವಯ ಸಮಿತಿಯಲ್ಲಿ ಕೇಂದ್ರ ಸರ್ಕಾರಕ್ಕೆ ಒತ್ತಾಯವನ್ನು ತಂದರು. ಇಲ್ಲಿ ಸರ್ಕಾರದ ಪಾಲು ಏನೂ ಇಲ್ಲ. ಏತಕ್ಕೆಂದರೆ ಇವತ್ತು ಮಾನ್ಯ ಮುಖ್ಯಮಂತ್ರಿಗಳು ಮಂಡ್ಯದಲ್ಲಿ ತೆಗೆದುಕೊಂಡ ನಿರ್ಣಯದ ಬಗ್ಗೆ ಹಗುರವಾಗಿ ಮಾತನಾಡಿ ಅದರ ಮಹತ್ವವನ್ನು ಹಾಳುಮಾಡುವಂಥ ಪ್ರಯತ್ನ ಮಾಡಿದರು. ಆದರೆ ನಾವು ರಾಜೀನಾಮೆ ಕೊಡುತ್ತೇವೆನ್ನುವ ಒತ್ತಾಯ ಬಂದಾಗ ಅನಿವಾರ್ಯವಾಗಿ ಪ್ರಧಾನಿಯವರು ಸಂಬಂಧಪಟ್ಟ ಮುಖ್ಯಮಂತ್ರಿಗಳ ಸಭೆಯನ್ನು ಕರೆದು ಮಾತುಕತೆಯ ಮೂಲಕ ಸಮಸ್ಯೆಯನ್ನು ಬಗೆಹರಿಸಬೇಕೆಂದು ಸರ್ವಾನುಮತದ ನಿರ್ಣಯವನ್ನು ಮಾಡಿದ್ದಾಯಿತು. ಅದಕ್ಕೆ ಮಾಆನ್ಯ ಮುಖ್ಯಮಂತ್ರಿಗಳು ಬಂದಿದ್ದರು, ಎಲ್ಲ ಪಕ್ಷದ ಮುಖಂಡರು ಬಂದಿದ್ದರು, ಮಂಡ್ಯದಲ್ಲಿ ಸೇರಿದ್ದಂಥ ಕಾವೇರಿ ಜಲ ವಿವಾದದ ಸಮನ್ವಯ ಸಮಿತಿಯಲ್ಲಿ ಕೇಂದ್ರ ಸರ್ಕಾರಕ್ಕ ಒತ್ತಾಯವನ್ನು ತಂದರು. ಇಲ್ಲಿ ಸರ್ಕಾರದ ಪಾಲು ಏನೂ ಇಲ್ಲ. ಏತಕ್ಕೆಂದರೆ ಇವತ್ತು ಮಾನ್ಯ ಮುಖ್ಯಮಂತ್ರಿಗಳು ಮಂಡ್ಯದಲ್ಲಿ ತೆಗೆದುಕೊಂಡ ನಿರ್ಣಯದ ಬಗ್ಗೆ ಹಗುರವಾಗಿ ಮಾತನಾಡಿ ಅದರ ಮಹತ್ವವನ್ನು ಹಾಳುಮಾಡುವಂಥ ಪ್ರಯತ್ನ ಮಾಡಿದರು. ಆದರೆ ನಾವು ರಾಜೀನಾಮೆ ಕೊಡುತ್ತೇವೆನ್ನುವ ಒತ್ತಾಯ ಬಂದಾಗ ಅನಿವಾರ್ಯವಾಗಿ ಪ್ರಧಾನಿಯವರು ಸಂಬಂಧಪಟ್ಟ ಮುಖ್ಯಮಂತ್ರಿಗಳ ಸಭೆಯನ್ನು ಕರೆದರು. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಸದನದಲ್ಲಿ ಕುಳಿತಿದ್ದಾರೆ. ನಾನು ನೇರವಾಗಿ ಅವರನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ, ಪ್ರಧಾನಿಯವರು ಸಂಬಂಧಪಟ್ಟ ಮಾನ್ಯ ಮುಖ್ಯಮಂತ್ರಿಗಳ ಸಭೆಯನ್ನು ಕರೆದಾಗ ತಾವು ನಮ್ಮ

ವಿರೋಧ ಪಕ್ಷದ ನಾಯಕರ ಸಭೆಯನ್ನು ಕರೆದು ನಮ್ಮ ಅಭಿಪ್ರಾಯವನ್ನು ಕೇಳಿದಾಗ ಯಾವ ಕಾರಣಕ್ಕೂ ಸಹ ಟ್ರಿಬ್ಯುನಲ್ ಮುಂದೆ ಈ ಒಂದು ವಿಚಾರ ಹೋಗಬಾರದು. ಮಾತುಕತೆ ಮೂಲಕ ಇದನ್ನು ಬಗೆಹರಿಸಬೇಕೆಂದು ತಾವು ಒತ್ತಾಯ ತರಬೇಕೆಂದು ಹೇಳಿ ನಿಮ್ಮನ್ನು ಕಳುಹಿಸಿಕೊಟ್ಟೆವು. ಆದರೆ ತಾವು ಏನು ಮಾಡಿದಿರಿ? ತಾವೇ ಕೊಟ್ಟಿರತಕ್ಕಂಥ ಪ್ರತಿ ನನ್ನಲ್ಲಿ ಇದೆ. ನಮ್ಮ ವಿರೋಧ ಪಕ್ಷದ ನಾಯಕರ ಸಭೆಯನ್ನು ಕೃಷ್ಣಾದಲ್ಲಿ ತಾವು ಕರೆದಾಗ ಪ್ರಧಾನಿಯವರ ಜೊತೆಗೆ ಸಂಬಂಧಪಟ್ಟ ಮಾನ್ಯ ಮುಖ್ಯಮಂತ್ರಿಗಳ ಮಾತುಕತೆಗಳು ಮುಗಿದ ಮೇಲೆ ಫೆಬ್ರವರಿ 17, 1992ರಲ್ಲಿ ನಿರ್ಣಯ ಮಾಡಿ ಟ್ರಿಬ್ಯುನಲ್‌ಗೆ ಬಹಿಷ್ಕಾರ ಹಾಕಬೇಕು, ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಬೇಕೆಂದು ನಿರ್ಣಯ ಮಾಡಿತೋ ಆ ಒಂದು ನಿರ್ಣಯಕ್ಕೆ ವಿರುದ್ಧವಾಗಿ ತಾವು ಲಿಖಿತ ಮೂಲಕ ಅಲ್ಲಿ ತೆಗೆದುಕೊಂಡ ಒಂದು ನಿರ್ಣಯಕ್ಕೆ ಸಹಿ ಮಾಡಿ ಬಂದಿರಿ. ತಮಿಳುನಾಡಿನ ಮುಖ್ಯಮಂತ್ರಿಗಳೂ ಸಹಿ ಮಾಡಿದ್ದಾರೆ. ತಾವೂ ಸಹ ಸಹಿ ಮಾಡಿದಿರಿ. ಯಾವ ಟ್ರಿಬ್ಯುನಲ್ ತನ್ನ ಕಾರ್ಯಕಲಾಪಗಳನ್ನು ನಡೆಸಬಾರದೆಂದು ಸರ್ವಾನುಮತದಿಂದ ನಾವು ಇಲ್ಲಿ ನಿರ್ಣಯವನ್ನು ಮಾಡಿದೆವೋ ಅದಕ್ಕೆ ತದ್ವಿರುದ್ಧವಾಗಿ ಟ್ರಿಬ್ಯುನಲ್ ಆದಷ್ಟು ಬೇಗ ಪ್ರೊಸೀಡಿಂಗ್ಸ್‌ನ್ನು ಮುಂದುವರಿಸಬೇಕು ಹಾಗೂ ತೀರ್ಪನ್ನು ಕೊಡಬೇಕೆನ್ನುವುದೇಕೆ ತಾವು ಸಹಿ ಮಾಡಿ ಬಂದಿರುತ್ತೀರಿ. ಅದಕ್ಕಿಂತ ಅಕ್ಷಮ್ಯ ಅಪರಾಧ, ದಾಖಲೆ ತಮಗೆ ಏನು ಬೇಕು ಹೇಳಿ? ಇಲ್ಲದಿದ್ದರೆ ಯಡಿಯೂರಪ್ಪನವರೇ, ನಾವು ಕೃಷ್ಣಾದಲ್ಲಿ ವಿರೋಧ ಪಕ್ಷದ ನಾಯಕರ ಸಭೆಯಲ್ಲಿ ಆ ಒಂದು ನಿರ್ಣಯವನ್ನು ತೆಗೆದುಕೊಂಡಿಲ್ಲ, ಅದು ಸರಿಯಲ್ಲವೆಂದು ಹೇಳುತ್ತೀರಾ? ಈ ಬಜೆಟ್ ಅಧಿವೇಶನದ ನಂತರ ಚರ್ಚೆ ಆದಂಥ ಸಂದರ್ಭದಲ್ಲಿ ಹಿರಿಯ ಸದಸ್ಯರಾದಂಥ ಮಾನ್ಯ ರಂಗನಾಥ್‌ರವರು ಇಲ್ಲಿ ಉಪಸ್ಥಿತರಿದ್ದಾರೆ. ಬಹುಶಃ ತಾವು ಅಪರಾಧ ಅಲ್ಲಿ ಮಾಡಿದ್ದೀರಿ. ತಾವು ನಿರ್ಣಯವನ್ನು ತೆಗೆದುಕೊಳ್ಳಲು ತಮಗೆ ಸ್ವಾತಂತ್ರ್ಯವಿದೆ. ಆದರೆ ಪ್ರಶ್ನೆ ಏನೆಂದರೆ, ತಾವು ಮಾಡಿದಂಥ ಅಕ್ಷಮ್ಯ ಅಪರಾಧ ಏನು? ಯಾವ ಕಾಂಗ್ರೆಸ್ ಪಕ್ಷದ ಜೊತೆಗೆ ಯಾವುದೇ ವಿವಾದದಲ್ಲಿ ಇಲ್ಲಿಯವರೆಗೆ ಸಹಕಾರ ಕೊಟ್ಟುಕೊಂಡು ಬಂದರೂ ಸರ್ಕಾರ ತಪ್ಪು ಮಾಡಿದಂಥ ಸಂದರ್ಭದಲ್ಲಿಯೂ ಸಹ ವಿರೋಧ ಪಕ್ಷದ ನಾಯಕರು ಇಲ್ಲಿ ಕುಳಿತು ತಮ್ಮ ಕರ್ತವ್ಯವನ್ನು ನಿರ್ವಹಿಸಲಿಲ್ಲ. ಅದು ಯಾವ ರೀತಿ ಒಳಗಡೆ ಮಾತುಕತೆ ಆಗಿದೆಯೋ ಗೊತ್ತಿಲ್ಲ. ಅದು ಕೂಡ ಬಹಿರಂಗವಾಗಬೇಕಾಗಿದೆ. ಇವತ್ತು ಕೆಲವು ಜನರು, ಎಲ್ಲರೂ ಎಂದು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಒಂದು ಸಾರಿ ಹೇಳಿದ್ದೇವೆ ಅಪಾರ್ಥಕ್ಕೆ ಅವಕಾಶವಾಗಬಹುದು ಎಂದು, ಇವತ್ತು ನಮ್ಮ ವಿರೋಧ ಪಕ್ಷದ ನಾಯಕರು ದಿನಾಂಕ 17–2–1992ರಲ್ಲಿ ಪ್ರಧಾನಿಯವರು ಕರೆದಂಥ ಸಭೆಯಲ್ಲಿ ತಾವು ಸರ್ವಾನುಮತದ ವಿಧಾನಮಂಡಲದ ಸಭೆಯ ನಿರ್ಣಯಕ್ಕೆ ವಿರುದ್ಧವಾಗಿ ಸಹಿ ಮಾಡಿಬಂದಾಗ, ಅದು ಅಪರಾಧವೆಂದೇ ಹೇಳಿ ಇಲ್ಲಿ ಪ್ರಸ್ತಾಪ ಮಾಡಿ ಅವರ ಕರ್ತವ್ಯವನ್ನು ನಿರ್ವಹಿಸಬೇಕಾಗಿತ್ತು. ನಾನು ಈ ಮಾತನ್ನುಇಲ್ಲಿ ಹೇಳಿದಾಗ ಮಾನ್ಯ ಹಿರಿಯರು, ಸಚಿವರು ಆಗಿದ್ದ, ರಂಗನಾಥ್‌ರವರು ಹೇಳಿದರು, ಯಡಿಯೂರಪ್ಪನವರೇ, ನೀವು ಏತಕ್ಕೆ ತಪ್ಪು ಮಾಹಿತಿಯನ್ನು ಹೇಳುತ್ತೀರಿ, ನಾವು ನಮ್ಮ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಇದು ಬರಲಿಲ್ಲವೆಂದು ಹೇಳಿದ್ದರು. ಮಾಹಿತಿ ಕೊಡಿ ಎಂದರೆ ನಾನು ದಾಖಲೆಗಳನ್ನು ಕಳುಹಿಸಿಕೊಡುತ್ತೇನೆ. ನಾನು ಇವತ್ತು ಕೇಳುವುದಕ್ಕೆ ಇಚ್ಛೆಪಡುತ್ತೇನೆ ಇದಕ್ಕಿಂತ ಪ್ರಿವಿಲೇಜ್ ಏನು ಬೇಕು? ಇದಕ್ಕಿಂಥ ಅನ್ಯಾಯ ಏನು ಬೇಕು? ನಾನು ನಿಮ್ಮನ್ನು ಕೇಳುತ್ತೇನೆ, ಈ ನಿರ್ಣಯಕ್ಕೆ ವಿರುದ್ಧವಾಗಿ ಏತಕ್ಕೆ ಸಹಿ ಮಾಡಿ ಬಂದಿರಿ? ನಾನು ಅವತ್ತು ಸಹ ಪ್ರಶ್ನೆ ಕೇಳಿದ್ದೆ. ಈ ನಾಡಿನ ಜನ ಸಂಶಯದಿಂದ ನಿಮ್ಮನ್ನು ನೋಡುವ ಪ್ರಶ್ನೆ ಬರುತ್ತಿದೆ. ನೀವು ತಮಿಳ್ನಾಡಿನ ಮುಖ್ಯಮಂತ್ರಿಗಳೋ ಅಥವಾ ಕರ್ನಾಟಕದ ಮುಖ್ಯಮಂತ್ರಿಗಳೋ ಎಂಬ ಸಂಶಯದಿಂದ ನೋಡುವ ರೀತಿಯಲ್ಲಿ ನೀವು ರಾಜ್ಯದ ಜನರ ಹಿತವನ್ನು ಮರೆತು ಯಾವುದೋ ನಿಮ್ಮ ಅನುಕೂಲಕ್ಕೋಸ್ಕರ, ಕರ್ನಾಟಕ ರಾಜ್ಯದ ಅಳಿವಿಗೋಸ್ಕರ ಈ ರೀತಿ ಸಹಿ ಮಾಡಿ ಬಂದಿರುವುದು ಅಕ್ಷಮ್ಯ ಅಪರಾಧ ಎಂದು ಹೇಳಿದೆ. ಅದರ ಬಗ್ಗೆ ಅವತ್ತು ಸದನ ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಮಾನ್ಯ ಸದಸ್ಯರ ಮನಸ್ಸಿಗೆ ನೋವು ಮಾಡುವುದಕ್ಕೆ ನಾನು ಈ ಮಾತನ್ನು ಹೇಳುತ್ತಿಲ್ಲ. ಮಾನ್ಯ ರಂಗನಾಥ್ ಅವರು ಕೂಡ ತಮ್ಮ ನೋವನ್ನು ವ್ಯಕ್ತಮಾಡಿದರು. ಆದರೆ

ಪ್ರತಿಪಕ್ಷವಾಗಿ ಇಲ್ಲಿ ಕುಳಿತ ಬಹುತೇಕ ಜನ ಮಾನ್ಯ ಸದಸ್ಯರು ತಮ್ಮ ಕರ್ತವ್ಯವನ್ನು ಸರಿಯಾಗಿ ಅವತ್ತು ನಿರ್ವಹಿಸಿದ್ದರೆ ಒಂದು ಕ್ಷಣವೂ ಈ ಸರ್ಕಾರ ಅಧಿಕಾರದಲ್ಲಿ ಮುಂದುವರಿಯುವುದಕ್ಕೆ ಅವಕಾಶ ಇರುತ್ತಿರಲಿಲ್ಲ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕರ್ನಾಟಕ ರಾಜ್ಯದ ಜನತೆಗೆ ಟ್ರಿಬ್ಯುನಲ್‌ನಿಂದ, ಕೇಂದ್ರ ಸರ್ಕಾರದಿಂದ ಆಗಿರುವ ಅನ್ಯಾಯ ಅಷ್ಟಿಷ್ಟಲ್ಲ. ಇದೇ ತಪ್ಪೇನಾದರೂ ತಮಿಳ್ನಾಡು ಸರ್ಕಾರ ಮಾಡಿದ್ದರೆ, ಇದೇ ಅನ್ಯಾಯವನ್ನು ಕೇಂದ್ರ ಸರ್ಕಾರ ಮಾಡಿದ್ದರೆ, ಟ್ರಿಬ್ಯುನಲ್ ಮಾಡಿದ್ದರೆ ತಮಿಳ್ನಾಡಿನ ಜನ ಒಂದು ಕ್ಷಣ ಸುಮ್ಮನೆ ಕೂರುತ್ತಿರಲಿಲ್ಲ. ಆ ಸರ್ಕಾರವನ್ನು ಉಳಿಯುವುದಕ್ಕೆ ಬಿಡುತ್ತಿರಲಿಲ್ಲ. ಇಡೀ ರಾಜ್ಯದಲ್ಲಿ ಬೆಂಕಿ ಹತ್ತಿ ಉರಿಯುತ್ತಿತ್ತು. ಆದರೆ ನಾವು ಮತ್ತು ವಿರೋಧ ಪಕ್ಷದ ನಾಯಕರು ಮಂಡ್ಯದಲ್ಲಿ ಹೋರಾಟ ಮಾಡುತ್ತಿರತಕ್ಕ ರೈತ ಸಮಿತಿಗೆ ಚಿಂತೆ ಮಾಡಬೇಡಿ ಎಂದು ಸಾಂತ್ವನ ಹೇಳಿಬಂದೆವು. ನೀವು ಎಲ್ಲ ಹಂತದಲ್ಲಿ ಈ ಸರ್ಕಾರಕ್ಕೆ ಬೆಂಬಲ ಕೊಟ್ಟುಕೊಂಡು ಬಂದೆವು. ನೀವು ಎಲ್ಲ ಹಂತದಲ್ಲೂ ನಿಮ್ಮ ಕರ್ತವ್ಯ ನಿರ್ವಹಿಸದೆ ಸಂಬಂಧಪಟ್ಟ ದಾಖಲೆಗಳನ್ನು ಸರಿಯಾದ ರೀತಿ ಟ್ರಿಬ್ಯುನಲ್ ಮುಂದೆ ಮಂಡನೆ ಮಾಡದೆ ಟ್ರಿಬ್ಯೂನಲ್‌ನಿಂದ ಹೊರಟಿರುವ ಮಧ್ಯಂತರ ಆಜ್ಞೆಯಿಂದ ಅನ್ಯಾಯವಾಗಿದೆ. ಮರುಪರಿಶೀಲನಾ ಅರ್ಜಿಯ ತೀರ್ಪಿನಿಂದಲೂ ಅನ್ಯಾಯವಾಗಿರುತ್ತದೆ. ಅಂತಿಮ ತೀರ್ಪು ಸಹ ಕಠೋರವಾಗಿರುತ್ತದೆ. ನಮ್ಮ ರಾಜ್ಯದ ರೈತ ಸಮುದಾಯಕ್ಕೆ ಯಾವ ಕಾರಣದಿಂದಲೂ ನ್ಯಾಯ ಸಿಗುವುದಕ್ಕೆ ಸಾಧ್ಯವಿಲ್ಲ. ಆ ತಪ್ಪಿನಿಂದ ನಾಡಿನ ಜನತಗೆ ಆಗಿರತಕ್ಕ ಅನ್ಯಾಯಕ್ಕೆ ಸಂಪೂರ್ಣವಾಗಿ ಆಡಳಿತ ಪಕ್ಷ ಜವಾಬ್ದಾರಿ ವಹಿಸಬೇಕಾಗುತ್ತದ. ಮಾನ್ಯ ಮುಖ್ಯಮಂತ್ರಿಗಳು ಎಲ್ಲರ ಪರವಾಗಿರುವವರು. ಈ ಸಂದರ್ಭದಲ್ಲಿ ಆಡಳಿತ ಪಕ್ಷದ ಶಾಸಕರಲ್ಲಿ ವಿನಂತಿಸುತ್ತೇನ, ನಾಡಿನ, ನೀರಿನ, ಜನರ ಪ್ರಶ್ನೆ ಬಂದಾಗ, ಭೂಮಿಯ ಪ್ರಶ್ನೆ ಬಂದಾಗ ನಾವು ನಮ್ಮ ಪಕ್ಷಗಳ ಸಂಬಂಧವನ್ನು ಕಿತ್ತೊಗೆದು ಸರಿ ದಾರಿಯಲ್ಲಿ ಸರ್ಕಾರವನ್ನು ತೆಗೆದುಕೊಂಡು ಹೋಗುವ ಪ್ರಯತ್ನ ಮಾಡಬೇಕಾಗಿದೆ. ವಿರೋಧ ಪಕ್ಷದ ನಾಯಕರು ಸರಿಯಾದ ರೀತಿಯಲ್ಲಿ ಕೆಲಸ ಮಾಡಿದರೋ ಇಲ್ಲವೋ ಗೊತ್ತಿಲ್ಲ. ಜೊತೆಗ ನಾವು ಮೋಸ ಹೋದ ಸಂದರ್ಭ ಉಂಟಾಯಿತು. ಆಡಳಿತ ಪಕ್ಷದ ನಾಯಕರು ಸರಿಯಾದ ರೀತಿಯಲ್ಲಿ ಕೆಲಸ ಆಡಳಿತ ಪಕ್ಷದ ಸದಸ್ಯರು ಕೈಕಟ್ಟಿಕೊಂಡು ಕುಳಿತ ಪರಿಣಾಮ ಇವತ್ತು ಈ ನಾಡಿನ ಜನತೆಗೆ ದೊಡ್ಡ ಅನ್ಯಾಯವಾಗಿದೆ. ಮಾನ್ಯ ಅಧ್ಯಕ್ಷರೇ, ತಾವು ಮಂಡ್ಯ ಜಿಲ್ಲೆಯಿಂದ ಬಂದಿದ್ದೀರಿ, ತಾವು ಸಹ ಅನೇಕ ಬಾರಿ ಸೂಕ್ಷ್ಮವಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದೀರಿ. ಈ ಟ್ರಿಬ್ಯುನಲ್‌ನಿಂದ ನ್ಯಾಯವಾದ ತೀರ್ಪು ಬರುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿ ಮಾತುಕತೆ ಮೂಲಕ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಅವರು ಒತ್ತಾಯವನ್ನು ತಂದರು, ವಿನಂತಿಯನ್ನು ಮಾಡಿದರು. ಮಾನ್ಯ ಅಧ್ಯಕ್ಷರು ಕೂಡ ಈ ಒಂದು ಕೆಲಸವನ್ನು ಮಾಡಿದರು.

(ಉಪಾಧ್ಯಕ್ಷಿಣಿಯವರು ಪೀಠವನ್ನಲಂಕರಿಸಿದರು)

ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರ ಅಭಿಪ್ರಾಯಕ್ಕೆ ವಿರುದ್ಧವಾಗಿ, ಈ ಸಭೆಯಲ್ಲಿ ತೆಗೆದುಕೊಂಡ ಸರ್ವಾನುಮತದ ನಿರ್ಣಯಕ್ಕೆ ವಿರುದ್ಧವಾಗಿ, ತಜ್ಞರ ಸಮಿತಿಯು ಕೊಟ್ಟ ಸಲಹೆಗೆ ವಿರುದ್ಧವಾಗಿ ತಾವು ಮನಬಂದಂತೆ ವರ್ತನೆ ಮಾಡಿ, ಇವತ್ತು ತಮಿಳ್ನಾಡಿನ ಸರ್ಕಾರದ ಬೆಂಬಲ ಇಲ್ಲದೆ ಯಾವ ಕಾರಣಕ್ಕೂ ಒಂದು ಕ್ಷಣವೂ ಕೇಂದ್ರ ಸರ್ಕಾರ ಬೆಂಬಲ ಇಲ್ಲದೆ ಯಾವ ಕಾರಣಕ್ಕೂ ಸಾಧ್ಯವಿಲ್ಲವೆಂಬ ಪರಿಸ್ಥಿತಿ ಒದಗಿಬಂದ ಪರಿಣಾಮ ಇವತ್ತು ನಮ್ಮ ರೈತ ಸಮುದಾಯಕ್ಕೆ ಆಗಿರುವ ಅನ್ಯಾಯಕ್ಕೆ ತಾವು ಪರೋಕ್ಷವಾಗಿ ಪ್ರಧಾನಿಯವರ ಆಶೀರ್ವಾದ ಪಡೆಯುವುದಕೋಸ್ಕರ ಸರ್ಕಾರ ಇವತ್ತು ಒಂದು ನಿರ್ಣಯ ಮಾಡುವ ಪ್ರಯತ್ನ ಮಾಡಿ ಫೆಬ್ರವರಿ 17ರಂದು ಅಗ್ರಿಮೆಂಟಿಗೆ ಸಹಿ ಹಾಕಿ ಬಂದಿದ್ದೀರಿ. ಈ ಹಿನ್ನಲೆಯಲ್ಲಿ ಮಾನ್ಯ ಉಪಾಧ್ಯಕ್ಷಿಣಿಯವರನ್ನು ಒತ್ತಾಯಿಸುವುದು ಏನೆಂದರೆ, ದಯಮಾಡಿ ಇದನ್ನು ನೇರವಾಗಿ ತಾವು ಹಕ್ಕುಚ್ಯುತಿ ಸಮಿತಿಗೆ ಕಳುಹಿಸಿಕೊಡಬೇಕು. ಇದೊಂದು ಏನು ಅನ್ಯಾಯವನ್ನು ಸರ್ಕಾರ ಮಾಡಿದೆ, .ಗೊತ್ತಿದ್ದರೂ ದೊಡ್ಡ ಅಪರಾಧ ಏನು ಮಾಡಿದೆ ಈ ಬಗ್ಗೆ ಸರಿಯಾದ ನಿರ್ಧಾರಕ್ಕೆ ತಾವು ಬರುತ್ತೀರೆಂಬ ನಂಬಿಕೆ ನನಗಿದೆ ಇವತ್ತು ಇನ್ನೊಂದು ಒತ್ತಾಯ ಮಾಡುತ್ತೇನೆ, ಏನೆಂದರೆ, ನಾವು ಇಷ್ಟೊಂದು ಸಹಕಾರ ಕೊಟ್ಟುಕೊಂಡು ಬಂದೆವಲ್ಲ, ಎಲ್ಲಾ

ಸಂದರ್ಭದಲ್ಲೂ ರಾಜ್ಯದ ರೈತರ ಹಿತದೃಷ್ಟಿಯಿಂದ, ಇವತ್ತು ತಮಗೆ ಕೇಂದ್ರದ ಸಚಿವರಾದ ಶ್ರೀ ಶುಕ್ಲಾ ಅವರು ಒಂದು ಪತ್ರವನ್ನು ಬರೆದಿದ್ದಾರೆ. ತಾವು ತುಂಬಾ ವಿಧೇಯತೆಯಿಂದ ನ್ಯಾಯ ಮಂಡಳಿಯ ಆಜ್ಞೆಯನ್ನು ಹಂತಹಂತವಾಗಿ ಅನುಷ್ಠಾನಗೊಳಿಸುತ್ತಿರುವುದಕ್ಕೆ ಅಭಿನಂದನೆ ಸಲ್ಲಿಸಿದ್ದಾರೆ. ನಾನು ಇವತ್ತು ಡಿಮ್ಯಾಂಡ್ ಮಾಡುತ್ತೇನೆ, ಚರ್ಚೆಗೆ ಅನುಕೂಲವಾಗಬೇಕಾದರೆ, ನಿಜವಾಗಿ ನಿಮ್ಮ ಕಳಕಳಿ ಏನಾದರೂ ಬೇರೆ ಇದ್ದು ಜನರ ಹಿತದೃಷ್ಟಿಯಿಂದ ಮಾಡಿದ್ದೇವೆ ಎಂಬುದಾದರೆ ಏತಕ್ಕೆ ನೀವು ಶುಕ್ಲಾ ಅವರ ಪತ್ರವನ್ನು ಬಹಿರಂಗ ಮಾಡದೆ ಇಟ್ಟುಕೊಂಡಿದ್ದೀರಿ? ಅದರಲ್ಲಿ ಬಹಳ ಸ್ಪಷ್ಟವಾಗಿ, ಟ್ರಿಬ್ಯುನಲ್: ಇಂಟರೀಮ್ ಆರ್ಡರನ್ನು ಇಂಪ್ಲಿಮೆಂಟ್ ಮಾಡುತ್ತಿರುವುದಕ್ಕೆ ಅಭಿನಂದನೆ ಸಲ್ಲಿಸಿ ಪತ್ರ ಬರೆದಿಲ್ಲವೆ? ಈಗಾಗಲೇ ಮಾನ್ಯ ಚಂದ್ರೇಗೌಡರು ಪ್ರಸ್ತಾಪ ಮಾಡಿದಂತೆ 'ಕಾವೇರಿ ನ್ಯಾಯ ಮಂಡಳಿಯ ಆದೇಶದ ಜಾರಿಗೆ ಕರ್ನಾಟಕದ ಸಹಕಾರ' —ಈ ಮಾತನ್ನು ಮದ್ರಾಸಿಗೆ ಹೋಗಿ ಕಾವೇರಿ ನ್ಯಾಯಮಂಡಳಿಯ ಮಧ್ಯಂತರ ಆದೇಶದ ಯಥಾವತ್ತಾದ ಜಾರಿಯ ಉಸ್ತುವಾರಿಯನ್ನು ರಾಷ್ಟ್ರೀಯ ಜಲ ಆಯೋಗ ವಹಿಸುತ್ತಿದ್ದು ಉಭಯ ರಾಜ್ಯಗಳು ಈಗ ದಿಸೆಯಲ್ಲಿ ಸಹಕರಿಸುತ್ತವೆಂದು ಜಲ ಸಂಪನ್ಮೂಲ ಖಾತೆಯ ಸಚಿವ ಶ್ರೀ ವಿ.ಸಿ. ಶುಕ್ಲಾ ಅವರು ಭಾನುವಾರ ತಿಳಿಸಿದರು. ತರುವಾಯ ನಿಮಗೆ ಶುಕ್ಲಾ ಅವರು ಅಭಿನಂದನೆ ಸಲ್ಲಿಸಿದರು. ಇದಾದ ಮೇಲೆ ನೀರು ಬಿಡಲಿಲ್ಲವೆಂದು ಬೊಬ್ಬೆ ಹೊಡೆಯುತ್ತಿದ್ದ ತಮಿಳ್ನಾಡು ಸರ್ಕಾರದವರು ಬೊಬ್ಬೆ ಹೊಡೆಯುವುದನ್ನು ನಿಲ್ಲಿಸಿದರು. ಅಂದರೆ ನೀವು ಕಣ್ಣು ಮುಚ್ಚಾಲೆ ಆಟವಾಡಿ ತಮಿಳ್ನಾಡಿಗೆ ನೀರನ್ನು ಬಿಟ್ಟಿರತಕ್ಕದ್ದು ಸತ್ಯವಲ್ಲವೇ? ಏತಕ್ಕೆ ಜನರನ್ನು ವಂಚನೆ ಮಾಡುತ್ತೀರಿ? ಏತಕ್ಕೆ ಸತ್ಯಕ್ಕೆ ದೂರವಾದ ಮಾತನ್ನು ಹೇಳುವಂಥ ಪ್ರಯತ್ನ ಮಾಡುತ್ತೀರಿ? ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಈಗ ನಾನು ಈ ಸರ್ಕಾರವನ್ನು ಡಿಮ್ಯಾಂಡ್ ಮಾಡುತ್ತಿದ್ದೇನೆ. ದಯಮಾಡಿ ಶುಕ್ಲಾ ಅವರು ಬರೆದ ಪತ್ರವನ್ನು ಟೇಬಲ್ ಮುಂದೆ ಇಡಿ. ಈ ನಾಡಿನ ಜನತೆಗೆ ಚುನಾಯಿತ ಪ್ರತಿನಿಧಿಗಳಿಗೆ ನಡೆದಿರುವ ಸತ್ಯಸಂಗತಿಯನ್ನು ತಿಳಿಸಿ. ಅವರು ಯಾವ ಹಿನ್ನೆಲೆಯಲ್ಲಿ ತಮಗೆ ಪತ್ರ ಬರೆದರು ಎಂಬುದನ್ನು ತಿಳಿದುಕೊಳ್ಳಬೇಕು ಎಂಬ ಆಸಕ್ತಿ ಸಹಜವಾಗಿ ನಮಗೆಲ್ಲರಿಗೂ ಇದೆ. ಆದ್ದರಿಂದ ದಯಮಾಡಿ ಆ ಪತ್ರವನ್ನು ಸಹ ಟೇಬಲ್‌ನ ಮುಂದಿಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ನಿಮಗೆಲ್ಲರಿಗೂ ಗೊತ್ತಿರುವ ಸಂಗತಿ. ಟ್ರಿಬ್ಯುನಲ್ ಇಂಟರೀಮ್ ಆರ್ಡರ್ ಕೊಟ್ಟಮೇಲೆ ಮರುಪರಿಶೀಲನಾ ಅರ್ಜಿಯನ್ನು ಹಾಕಿದರೂ ನಮಗೆ ಯಾವ ಕಾರಣಕ್ಕೂ ನ್ಯಾಯ ಸಿಗುವುದಿಲ್ಲ, ಪರಿಹಾರ ಸಿಗುವುದಿಲ್ಲ, ಎಂಬ ಮಾತನ್ನು ಪದೇಪದೇ ನಾವು ಹೇಳುವಂಥ ಪ್ರಯತ್ನ ಮಾಡಿದೆವು. ಇವತ್ತು ಮಧ್ಯಂತರ ಆಜ್ಞೆಗಿಂತ ಟ್ರಿಬ್ಯುನಲ್ ಇಂಟೀರಿಮ್ ಆರ್ಡರ್, ಪರಿಶೀಲನಾ ಅರ್ಜಿ ಹಾಕಿದ ಮೇಲೆ ಆಗಿರುವ ತೀರ್ಪು ಇನ್ನೂ ಹೆಚ್ಚು ಮಹತ್ವವಾಗಿರುವಂಥದ್ದು ಎಂಬುದು ನಮಗೆಲ್ಲರಿಗೂ ಗೊತ್ತಿರುವ ಸಂಗತಿ. ಬಹುಶಃ ಈ ಸದನದಲ್ಲಿ ಎಂಥ ಒಂದು ದೊಡ್ಡ ಘಟನೆ ನಡೆಯಿತು? 6—7—91ರಂದು ಸರ್ವಾನುಮತದಿಂದ ನಿರ್ಣಯವನ್ನು ಮಂಡನೆ ಮಾಡಿದಂಥ ಸಂದರ್ಭದಲ್ಲಿ......

ಶ್ರೀ ಟಿ.ಎಂ. ಮಂಜುನಾಥ್ : ಸನ್ಮಾನ್ಯ ಅಧ್ಯಕ್ಷಿಣಿಯವರೆ, ಮಾನ್ಯ ಸದಸ್ಯರು ಹಕ್ಕುಚ್ಯುತಿ ಪ್ರಶ್ನೆ ಬಗ್ಗೆ ಪ್ರಸ್ತಾವನೆ ಮಾಡುತ್ತಿದ್ದಾರೆ. ಅವರು ಈ ಹಂತದಲ್ಲಿ ಅದರ ಬಗ್ಗೆ ವಿಶೇಷವಾದ ವಿಚಾರವನ್ನು ಹೇಳತಕ್ಕದ್ದಲ್ಲ. ಹಕ್ಕುಚ್ಯುತಿ ಎಲ್ಲಿ ಆಗಿದೆ? ಯಾರು ಮಾಡಿದ್ದಾರೆ ಎಂಬ ಬಗ್ಗೆ ಪ್ರಸ್ತಾವನೆ ಮಾಡಿದರೆ.........

ಶ್ರೀ ವಾಟಾಳ್ ನಾಗರಾಜ್ : ಮಂಡ್ಯ ಹತ್ತಿರ ಆಗಿರಬಹುದು ಅಥವಾ ಶ್ರೀರಂಗಪಟ್ಟಣದ ಹತ್ತಿರ ಆಗಿರಬಹುದು ಹಕ್ಕುಚ್ಯುತಿ.

ಶ್ರೀ ಟಿ.ಎಂ. ಮಂಜುನಾಥ್ : ಒಂದು ನಿಮಿಷ ಸ್ವಲ್ಪ ಇರಿ. ಹಿಂದೆ ಆದಂಥ ಎಲ್ಲಾ ವಿಚಾರಗಳನ್ನು ತಂದು ಹಕ್ಕುಚ್ಯುತಿ ಆಗಿದೆ ಎಂದು ಹೇಳದೇ ಈಗ ಇದಕ್ಕೆ ಸಂಬಂಧಪಟ್ಟಂತೆ ಎಷ್ಟು ಹೇಳಬೇಕು. ಸನ್ಮಾನ್ಯ ಯಡಿಯೂರಪ್ಪನವರು ಬಹಳ ಕಳಕಳಿಯಿಂದ ಮಾತನಾಡುತ್ತಾರೆ. ನಾನು ಅವರಿಗೆ ಪ್ರಶ್ನೆ ಹಾಕುತ್ತೇನೆ, ಅವರದು ಒಂದು ರಾಷ್ಟ್ರೀಯ ಪಕ್ಷ. ಈ ರಾಷ್ಟ್ರೀಯ ಪಕ್ಷದಲ್ಲಿ ಕರ್ನಾಟಕಕ್ಕೆ ಕಾವೇರಿ ಟ್ರಿಬ್ಯುನಲ್‌ನಿಂದ ಆಗಿರುವ ಅನ್ಯಾಯದ ಬಗ್ಗೆ ತಮ್ಮ ರಾಷ್ಟ್ರಮಟ್ಟದ

ನಾಯಕರು ಏನು ಅಭಿಪ್ರಾಯ ಕೊಟ್ಟಿದ್ದಾರೆ, ಸಂಸತ್ತಿನಲ್ಲಿ ಏನು ಹೇಳಿದ್ದಾರೆ ಎಂಬುದನ್ನು ಹೇಳಿಬಿಟ್ಟರೆ ಸ್ವಲ್ಪ ಸಹಾಯವಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷಿಣಿಯವರೆ, ಒಳ್ಳೆಯ ಮಾತನ್ನು ಅವರು ಹೇಳಿದ್ದಾರೆ. ಬಹುಶಃ ಸನ್ಮಾನ್ಯ ಸಚಿವರಿಗೂ ಗೊತ್ತಿಲ್ಲ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಾವು ಕೂತಾಗ ವ್ಯಾಪಕವಾಗಿ ಇದನ್ನು ಚರ್ಚೆ ಮಾಡೋಣ ಎಂದು ಮಾತಾಯಿತು. ತಾವು ರಾಷ್ಟ್ರೀಯ ನಾಯಕರು ಏನು ಮಾಡಿದರು ಎಂದು ಕೇಳಿದಿರಿ. ಈ ಬಗ್ಗೆ ಮುಖ್ಯಮಂತ್ರಿಗಳನ್ನು ಕೇಳಿ ಎಂದು ನಾನು ಸಚಿವರಿಗೆ ಹೇಳುತ್ತೇನೆ. ವಿರೋಧ ಪಕ್ಷದ ನಾಯಕರನ್ನು ಕೇಳಿ. ಕಾವೇರಿ ಜಲವಿವಾದದ ಸಮಸ್ಯೆ ಬಗ್ಗೆ ಪ್ರಧಾನಮಂತ್ರಿಯವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಸರ್ವಪಕ್ಷ ನಿಯೋಗ ಹೋದ ಸಂದರ್ಭದಲ್ಲಿ ಲೋಕಸಭೆಯ ವಿರೋಧ ಪಕ್ಷದ ನಾಯಕರಾದ ಬಿ.ಜೆ.ಪಿ.ಯ ಲಾಲ್ ಕೃಷ್ಣ ಅದ್ವಾನಿ ಅವರನ್ನು ಭೇಟಿ ಮಾಡಿದ್ದೆವು. ಬಹಳ ಸ್ಪಷ್ಟವಾಗಿ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದ್ದಾರೆ, ಯಾವ ಕಾರಣಕ್ಕೂ ಯಾವುದೇ ನ್ಯಾಯಾಲಯ ಈ ಒಂದು ತೀರ್ಮಾನವನ್ನು ಕೊಡುವುದಕ್ಕೆ ಸಾಧ್ಯವಿಲ್ಲ, ಅವರಿಗೆ ಯಾವುದೇ ಒಂದು ಆಧಾರ ಇಲ್ಲ, ಅಂತರ್ಜಲ ವಿವಾದದ ಸಂದರ್ಭದಲ್ಲಿ ಯಾವುದೇ ಸಮಸ್ಯೆಯನ್ನು ಬಗೆಹರಿಸಬೇಕಾದರೆ ರಾಷ್ಟ್ರೀಯ ಜಲನೀತಿ ಇಲ್ಲದಂಥ ಸಂದರ್ಭದಲ್ಲಿ ಅದನ್ನು ಅನುಷ್ಠಾನ ಗೊಳಿಸುವುದು ಹೇಗೆ? ಅದಕ್ಕೋಸ್ಕರ ಮಾತುಕತೆಗಳ ಮೂಲಕ ಸಮಸ್ಯೆ ಬಗೆಹರಿಯಬೇಕು ಎಂದು ನಾನು ಪ್ರಧಾನಮಂತ್ರಿಯವರಿಗೆ ಒತ್ತಾಯ ತರುತ್ತೇನೆ ಎಂದು ಹೇಳಿದರು. ಆಗ ವಿರೋಧ ಪಕ್ಷದ ನಾಯಕರಾದ ಚಂದ್ರೇಗೌಡರಿದ್ದರು, ಮತ್ತೆ ಮುಖ್ಯಮಂತ್ರಿಗಳು ಸಹ ಇದ್ದರು. ತಾವು ಆಪಾದನೆ ಮಾಡಬೇಕು ಎಂದರೆ ನನ್ನದೇನೂ ಅಭ್ಯಂತರ ಇಲ್ಲ. ನಿಮ್ಮ ಪ್ರಶ್ನೆಗೆ ಉತ್ತರವನ್ನು ನಿಮ್ಮ ಮುಖ್ಯಮಂತ್ರಿಗಳಾಗಲಿ, ವಿರೋಧ ಪಕ್ಷದ ನಾಯಕರಾಗಲೀ ಹೇಳಬಹುದು. ಏನಾದರೂ ನಿಮಗೆ ಸಂಶಯವಿದ್ದರೆ ಹೇಳಿ, ಇನ್ನು ಎರಡನೆಯದು ಅಂದರೆ ನಮ್ಮ ಲೋಕಸಭಾ ಸದಸ್ಯರು ಕೂಡ ಲೋಕಸಭೆಯಲ್ಲಿ ಧನಂಜಯಕುಮಾರ್ ಇರಬಹುದು, ವೆಂಕಟಗಿರಿಗೌಡರು ಇರಬಹುದು ಅತ್ಯಂತ ಪ್ರಬಲವಾಗಿ ಇದರ ಬಗ್ಗೆ ಮಂಡನೆ ಮಾಡಿದ್ದಾರೆ. ಮಾತುಕತೆಗಳ ಮೂಲಕ ಸಮಸ್ಯೆ ಬಗೆಹರಿಯಬೇಕು ಎಂದು ಹೇಳಿದ್ದಾರೆ. ಆದರೆ ನಾನು ನಿಮ್ಮನ್ನು ಕೇಳುತ್ತೇನೆ ಇಷ್ಟೊಂದು ಬಹುಮತ ಕೊಟ್ಟು ಜನ ನಿಮಗೆ ಅಧಿಕಾರ ಕೊಟ್ಟಿದ್ದಾರಲ್ಲ ಇದರ ಮೇಲೆ ಇವತ್ತು ನಿಮ್ಮ ಕರ್ತವ್ಯವನ್ನು ನೀವು ನಿರ್ವಹಿಸದೆ ನಿಮ್ಮ ಉಳಿವಿಗೋಸ್ಕರ ಪ್ರಧಾನಿಯ ಬಲವನ್ನು ಗಳಿಸುವುದಕ್ಕೋಸ್ಕರ ತಮಿಳುನಾಡಿನ ಬೆಂಬಲವನ್ನು ಗಳಿಸುವುದಕ್ಕೋಸ್ಕರ ಈ ರಾಜ್ಯದ ನಾಲ್ಕು ಕೋಟಿ ಜನರ ಹಿತಕ್ಕೆ ಧಕ್ಕೆ ಬರುವ ರೀತಿ ನಿಮ್ಮ ಮುಖ್ಯಮಂತ್ರಿಗಳು ನಮ್ಮ ಮುಖ್ಯಮಂತ್ರಿಗಳು ಅಗ್ರಿಮೆಂಟಿಗೆ ಸಹಿ ಮಾಡಿ ಬಂದಿದ್ದಾರಲ್ಲ ಆ ಬಗ್ಗೆ ತಾವೇನಾದರೂ ಚರ್ಚೆ ಮಾಡಿದ್ದೀರಾ? ಬನ್ನಿ ಡಿಬೇಟ್ ಮಾಡಿ.

ಶ್ರೀಮಲ್ಲಾರಿಗೌಡ ಎಸ್. ಪಾಟೀಲ್ : ಯಾವ ಅಗ್ರಿಮೆಂಟ್?

ಶ್ರೀ ಟಿ.ಎಂ. ಮಂಜುನಾಥ್ : ತಾವು ಏತಕ್ಕೆ ಊಹೆ ಮಾಡುತ್ತೀರಿ? ಸುಮ್ಮನೆ ಭಾಷಣ ಮಾಡುವುದು ಬೇಡ. ಎಲ್ಲಿ ಆಗಿದೆ?

ಶ್ರೀ ಸಿ. ಬೈರೇಗೌಡ : ರಾಜೀನಾಮೆ ಕೊಡುತ್ತೇನೆ ಎಂಬ ನಿರ್ಣಯಕ್ಕೆ ನಾವು ಬಂದಾಗ ದಿಢೀರ್ ಎಂದು ಸಭೆ ಕರದರು. ಆಮೇಲೆ ಸಭೆ ಕರೆದಿಲ್ಲ. ಏತಕ್ಕೆ ಇದೆಲ್ಲಾ ಮಾತನಾಡುತ್ತೀರಿ ?

ಶ್ರೀ ಟಿ.ಎಂ. ಮಂಜುನಾಥ್ : ಸ್ವಾಮಿ, ನಿಮ್ಮ ಸರ್ಕಾರ ಒಂದು ಕೋಟಿ ರೂಪಾಯಿ ಖರ್ಚು ಮಾಡುವ ಯೋಗ್ಯತೆ ಇಲ್ಲದೆ ಕಾರ್ಯಕ್ರಮ ಮಾಡಿಲ್ಲ. ಇಲ್ಲಿ ಏತಕ್ಕೆ ಭಾಷಣ ಮಾಡುತ್ತೀರಿ? ಸುಮ್ಮನಿರಿ.

ಶ್ರೀ ಸಿ. ಬೈರೇಗೌಡ : ಇಮಾಮ್ ಸಾಹೇಬರಿಗೂ ಗೋಕುಲಾಷ್ಟಮಿಗೂ ಸಂಬಂಧ ಕಲ್ಪಿಸುತ್ತಿದ್ದಾರೆ ಮಂಜುನಾಥ್ ಅವರು.

ಶ್ರೀ ವಾಟಾಳ್ ನಾಗರಾಜ್ : ಎಲ್ಲಿಗೆ ಹೋಗುತ್ತಿದ್ದೀರಿ?

ಶ್ರೀ ಟಿ.ಎಂ. ಮಂಜುನಾಥ್ : ನೀವು ಮಾಡಿದ ಪಾಪದ ಹೊರೆಯನ್ನು ನಾವು ಹೊರುತ್ತಿದ್ದೇವೆ.

ಶ್ರೀ ಸಿ. ಬೈರೇಗೌಡ : ಮೊದಲು ಮಾತನ್ನು ಅರ್ಥ ಮಾಡಿಕೊಳ್ಳಿ ಆಮೇಲೆ ಮಾತನಾಡಿ.

ಶ್ರೀ ಟಿ.ಎಂ. ಮಂಜುನಾಥ್ : ಏಳೂವರೆ ವರ್ಷ ತಾವು ಪಾಪ ಮಾಡಿದಿರಲ್ಲ, ಆ ಪಾಪದ ಕೂಪ ನಾವು ಈಗ ಹೊರುತ್ತಿದ್ದೇವೆ.

ಶ್ರೀ ಸಿ. ಬೈರೇಗೌಡ : ಪಾಪ ಮಾಡಿದರೆ ಗೊತ್ತಾಗುತ್ತದೆ. ಮೊನ್ನೆ ಗೊತ್ತಾಯಿತಲ್ಲಾ? ನೀವೇ ಕಚ್ಚೆ ಮೇಲಕ್ಕೆ ಎತ್ತಿಕೊಂಡು ಓಡಿದ್ರಲ್ಲಾ ಅದನ್ನು ಮರೀಬೇಡಿ. ಕುಣಿಗಲ್‌ನಲ್ಲಿ ಕಚ್ಚೆ ಎತ್ತಿಕೊಂಡು ಓಡಿದ್ರಲ್ಲ.

ಶ್ರೀ ವಾಟಾಳ್ ನಾಗರಾಜ್ : ಕಾವೇರಿ ಚರ್ಚೆಗೆ ಅವಕಾಶ ಕೊಡುತ್ತಿರೋ ಅಥವಾ ಕಚ್ಚೆ ಬಗ್ಗೆ ಚರ್ಚೆಗೆ ಅವಕಾಶ ಕೊಡುತ್ತಿರೋ ಹೇಳಿ.

ಉಪಾಧ್ಯಕ್ಷರು : ಯಡಿಯೂರಪ್ಪನವರೇ, ನೀವು ಮಾತನಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಉಪಾಧ್ಯಕ್ಷಿಣಿಯವರೇ, ಇವರು ಒಂದು ಸರ್ಕಾರದಲ್ಲಿ ಇದ್ದಾರೆ. ಹಿರಿಯ ಸಚಿವರಾಗಿದ್ದಾರೆ. ನಾನು ಅವರ ಮಾಧ್ಯತೆಗೆ ಯಾವರೀತಿ ಉತ್ತರ ಕೊಡಬೇಕೋ ಎಂದು ಗೊತ್ತಾಗುತ್ತಾ ಇಲ್ಲ. ಹಾಗಿದ್ದರೆ ನಿಮ್ಮ ಮಾನ್ಯ ಮುಖ್ಯಮಂತ್ರಿಗಳು ಫೆಬ್ರವರಿ 17, 1992ರಲ್ಲಿ ಪ್ರಧಾನಮಂತ್ರಿಗಳು ಎಲ್ಲಾ ಮುಖ್ಯಮಂತ್ರಿಗಳನ್ನು ಕರೆದಿದ್ದ ಸಭೆಯಲ್ಲಿ ಟ್ರಿಬ್ಯುನಲ್ ಬಹಿಷ್ಕಾರ ಮಾಡಬೇಕು, ಮಾತುಕತೆ ಮೂಲಕ ಬಗೆಹರಿಸಬೇಕೆಂದು ಹೇಳಬೇಕಾದ ನಮ್ಮ ಮುಖ್ಯಮಂತ್ರಿಗಳು, ಈ ನಾಡಿನ ಮುಖ್ಯಮಂತ್ರಿಗಳು ತಮಿಳುನಾಡಿನ ಮುಖ್ಯಮಂತ್ರಿಗಳು ಸಹಿ ಮಾಡಿದ್ದಕ್ಕೆ ಸನ್ಮಾನ್ಯ ನಮ್ಮ ಮುಖ್ಯಮಂತ್ರಿಗಳೂ ಸಹಾ ಸಹಿ ಮಾಡಿ ಟ್ರಿಬ್ಯುನಲ್ ಪ್ರೊಸೀಡಿಂಗ್ಸ್ ಸ್ಪೀಡ್ ಅಪ್ ಮಾಡಿ ಆದಷ್ಟು ಬೇಗ ತೀರ್ಪು ಕೊಡಿ ಎಂದು ಸಹಿ ಮಾಡಿಲ್ಲ ಎಂದು ಹೇಳುತ್ತೀರಾ ?

ಶ್ರೀ ಎಸ್. ಬಂಗಾರಪ್ಪ : ಬಹಿಷ್ಕಾರ ಮಾಡಬೇಕೆಂದು ಹೇಳಿದ್ದವೇ ?

ಶ್ರೀ ಬಿ.ಎಸ್. ಯಡಿಯೂರಪ್ಪ : ಬಹಿಷ್ಕಾರ ಅಲ್ಲ, ಪ್ರೊಸೀಡಿಂಗ್ ಮುಂದುವರಿಸಬೇಕೆಂದು ಹೇಳಿ ಪ್ರಧಾನಮಂತ್ರಿಗಳು ಕರೆದಿದ್ದ ಸಭೆಯಲ್ಲಿ ತಾವು ಸಹಿ ಮಾಡಿದ ಪತ್ರವನ್ನು ನಕಲು ಮಾಡಿ ತಂದು ಕೊಟ್ಟಿರಿ. ಅದು ಅಲ್ಲ ಎಂದು ವಿರೋಧ ಪಕ್ಷದ ನಾಯಕರು ಹೇಳಲಿ. ಅದೇ ಪ್ರತಿ ತೆಗೆದುಕೊಂಡು ನಾನು ಮಾತನಾಡುತ್ತೇನೆ. ಉತ್ತರ ಕೊಡುವಾಗ ನೀವು ಹೇಳಿ.

ಶ್ರೀ ಎಸ್. ಬಂಗಾರಪ್ಪ : ಟ್ರಿಬ್ಯುನಲ್ ಬಹಿಷ್ಕಾರ ಮಾಡಬೇಕೆಂದು ಹೇಳಿದ್ದವೇ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬಹಿಷ್ಕಾರ ಎಂದು ಹೇಳಲಿ, ಅದನ್ನು ಮಾಡಿದ್ದರೆ ನಾವು ನಿಮಗೆ ಅಪ್ರಿಶಿಯೇಟ್ ಮಾಡುತ್ತಿದ್ದೆವು. ತಮ್ಮನ್ನು ಸನ್ಮಾನ ಮಾಡಿ ರಾಜ್ಯದ ಮೂಲೆ ಮೂಲೆಗೆ ಕರೆದುಕೊಂಡು ಹೋಗುತ್ತಿದ್ದೆವು. ಟ್ರಿಬ್ಯುನಲ್ ಪ್ರೊಸೀಡಿಂಗ್ಸ್ ಮುಂದುವರಿಸಬೇಕೆಂದು ಇದೆ. ಹಕ್ಕುಚ್ಯುತಿ ನಿರ್ಣಯಕ್ಕೆ ಇದು ಅನುಕೂಲಕರವಾದ ದಾಖಲೆ. ಮೊದಲನೆಯದು, ಮರುಪರಿಶೀಲನಾ ಅರ್ಜಿ ಹಾಕಿದ್ದು. ಎರಡನೆಯದು, ಪ್ರಧಾನಿಗಳು ಕರೆದಿದ್ದ ಸಭೆಯಲ್ಲಿ ಸರ್ವಾನುಮತದ ನಿರ್ಣಯಕ್ಕೆ ವಿರುದ್ಧವಾಗಿ ಟ್ರಿಬ್ಯುನಲ್ ಪ್ರೊಸೀಡಿಂಗ್ಸ್‌ನ್ನು ಮುಂದುವರಿಸಬೇಕೆಂದು, ಆದಷ್ಟು ಬೇಗ ತೀರ್ಪು ಕೊಡಬೇಕೆಂದು ಹೇಳಿ ಈ ರಾಜ್ಯದ ಮುಖ್ಯಮಂತ್ರಿಗಳು ಸಹಿ ಮಾಡಿದ್ದು ಅಕ್ಷಮ್ಯ ಅಪರಾಧ. ಅದಕ್ಕೆ ನಾನು ವಿನಂತಿ ಮಾಡುತ್ತೇನೆ. ಇಲ್ಲದಿದ್ದರೆ ಈ ಪ್ರಶ್ನೆ ಏಕೆ ಉದ್ಭವವಾಗುತ್ತಿತ್ತು? ಮರುಪರಿಶೀಲನಾ ಅರ್ಜಿ, ಹಾಕದಿದ್ದರೆ ಇವತ್ತು ನಮ್ಮ ಪರಿಸ್ಥಿತಿ ಇಲ್ಲಿಗೆ ಬರುತ್ತಾ ಇರಲಿಲ್ಲ. ತಾವು ಮರೆತಿರಬಹುದು. ಇದೇ ಸದನದಲ್ಲಿ ಈ ಸ್ಥಾನದಲ್ಲಿ ಮಾತನಾಡುವಾಗ ನಾನು ಟೀಮಾರಿ ಹಾಕಿಸಿಕೊಂಡು ಹೊರನಡೆದುಹೋದೆ. ಅವತ್ತು ನನ್ನ ನಿಲುವು ಏನಿತ್ತು? ಆವತ್ತಿನ ನನ್ನ ಪ್ರಸ್ತಾಪ ಏನೆಂದರೆ, ಇವತ್ತು ನಮ್ಮ ಜವಾಬ್ದಾರಿಯನ್ನು ಬೇರೆಯವರು ಮೇಲೆ ಹಾಕುವುದು ಬೇಡ, ಕೇಂದ್ರ ಸರ್ಕಾರ ಇದನ್ನು ಮಾಡಬೇಕೆಂದು ಸರ್ವಾನುಮತದ ನಿರ್ಣಯ ಮಾಡುವುದರಿಂದ ನಮ್ಮ ಸಮಸ್ಯೆ ಬಗೆಹರಿಯುವುದಿಲ್ಲ, ಬಹಿಷ್ಕಾರ ಹಾಕುತ್ತೇವೆನ್ನುವ ನಿರ್ಣಯವನ್ನು ನಾವು ಮಾಡೋಣವೆಂದು ನಾನು ಆವತ್ತು ಹೇಳಿದಾಗ ದೊಡ್ಡ ಅಪರಾಧ ಮಾಡಿದೆ ಎಂದು ಹೇಳಿ ಅವತ್ತು ನಾನು ಸದನದಿಂದ ಹೊರಗಡೆ ಹೋಗಿದ್ದೇನೆ. ಇದು ಪತ್ರಿಕೆಗಳ ಮುಖಪುಟದಲ್ಲಿ ಬಂತು. ಆವತ್ತಿಂದ ಇವತ್ತಿನವರೆಗೆ ಬಿಜೆಪಿ ನಿಲುವು ಸ್ಪಷ್ಟ ಇದೆ. ವೀರೇಂದ್ರಪಾಟೀಲರು ಕರೆದ ಮೊದಲ ಸಭೆಯಿಂದ ಇವತ್ತಿನವರೆಗೂ ಯಾವ ಕಾರಣಕ್ಕೂ ಸಹಾ ಟ್ರಿಬ್ಯುನಲ್ ಮುಂದೆ ಹೋಗುವುದು ಬೇಡ, ಟ್ರಿಬ್ಯುನಲ್‌ನಿಂದ ನ್ಯಾಯ ಸಿಗುವುದಿಲ್ಲ.... ಬಾಯ್‌ಕಾಟ್ ಮಾಡೋಣ ಎನ್ನುತ್ತಾ ಬಂದಿದ್ದೇವೆ. ಅಂದರೆ ಇವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಗಳು, ಒಂದು ಸರ್ಕಾರದ ಜವಾಬ್ದಾರಿ ಹೊತ್ತಿರುವವರು,

ಈ ನಾಡಿನ 4 ಕೋಟಿ ಜನರ ಜವಾಬ್ದಾರಿ ಹೊತ್ತಿರುವವರು, ನಿಮ್ಮ ನಿಲುವನ್ನು ಸ್ಪಷ್ಟ ಮಾಡಿದ್ದೀರಾ? ಈ ಉಸ್ತುವಾರಿ ಸಮಿತಿ ರಚಿಸಬೇಕೆಂದು ಮಾನ್ಯ ಶುಕ್ಲಾರವರಿಂದ ಪತ್ರ ಬಂದಾಗ ಸಾಧ್ಯವಿಲ್ಲವೆಂದು ಹೇಳಿ ನೇರವಾಗಿ ಅದನ್ನು ವಾಪಸ್ ಕಳುಹಿಸಿದಿರಾ? ಇಲ್ಲ; ಅದಕ್ಕೆ ಮಂತ್ರಿಮಂಡಲದ ಉಪಸಮಿತಿಯನ್ನು ಮಾಡಿದಿರಿ. ಅದನ್ನು ತೀರ್ಮಾನ ಮಾಡುವುದಕ್ಕೆ ಇದರ ಅಗತ್ಯ ಏನು ಇತ್ತು? ಮೆಲ್ನೋಟಕ್ಕೆ ಅನ್ಯಾಯವಾಗಿದೆ ಎಂದಾಗ, ಇದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಆಗುವುದಿಲ್ಲ ಎಂದು ನಿರ್ಣಯಕ್ಕೆ ಬಂದಮೇಲೆ ಯಾವ ಕಾರಣಕ್ಕೆ ಉಪಸಮಿತಿ ಮಾಡಿದಿರಿ ? ಡಿಲೇ ಮಾಡಿ ರಾಷ್ಟ್ರಪತಿಗಳ ಚುನಾವಣೆಯವರೆಗೆ ಮುಂದೂಡುವ ಅಗತ್ಯ ಏನಿತ್ತು? ಈ ರೀತಿಯಾಗಿ ಟ್ರಿಬ್ಯುನಲ್ ಮುಂದೆ ವಾದ ಸರಿಯಾಗಿ ಮಾಡಿಲ್ಲ. ಜನರ ಹಿತವನ್ನು ಮರೆತಿದ್ದೀರಿ. ಸರ್ವಾನುಮತದ ನಿರ್ಣಯಕ್ಕೆ ವಿರುದ್ಧವಾಗಿ ನಡೆದು ಈ ಸದನಕ್ಕೆ ಹಕ್ಕುಚ್ಯುತಿ ಮಾಡಿದ್ದೀರಿ. ಇದನ್ನು ದಯಮಾಡಿ ಹಕ್ಕುಚ್ಯುತಿ ಸಮಿತಿಗೆ ನೇರವಾಗಿ ಕಳುಹಿಸಬೇಕು. ಮತ್ತೆ ಅಕ್ಷಮ್ಯ ಅಪರಾಧ ಇದರ ಬಗ್ಗೆ ಏನಾಗಿದೆ, ಆ ಬಗ್ಗೆ ಯಾರೇ ತಪ್ಪು ಮಾಡಿದ್ದರೆ ಶಿಕ್ಷೆ ಆಗುತ್ತದೆ. ಈ ಸರ್ಕಾರ ರಾಜೀನಾಮೆ ಕೊಟ್ಟು ಹೊರಹೋಗುವ ಕಾಲ ಈ ಕಾರಣದಿಂದ ಹತ್ತಿರ ಬರುತ್ತಿದೆ. ಈ ಹಕ್ಕುಚ್ಯುತಿ ನಿರ್ಣಯ ಏನಾಗುತ್ತದೋ ಗೊತ್ತಿಲ್ಲ; ಅದನ್ನು ಅಧ್ಯಕ್ಷರಿಗೆ ಬಿಡುತ್ತೇನೆ. ಆದರೆ ಅಂತಿಮ ತೀರ್ಮಾನ ಬರುವುದಕ್ಕೆ ಏನು ಕಾಯುತ್ತಿದ್ದೀರಿ, ಅದರಿಂದ ಮುಂದಿನ ಪೀಳಿಗೆ ನಿಮ್ಮನ್ನು ಶಪಿಸುತ್ತದೆ. ಯಾವ ಕಾರಣದಿಂದಲೂ ಇದನ್ನು ರಿಪೇರಿ ಮಾಡುವುದಕ್ಕೆ ಸಾಧ್ಯವಿಲ್ಲ ಅಂಥ ಒಂದು ಅಪರಾಧವನ್ನು ಮಾಡುವ ಕೆಲಸ ತಾವು ಮಾಡದೆ ಈಗಲಾದರೂ ಸರಿಯಾದ ನಿಲುವನ್ನು ರಾಜ್ಯದ ರೈತರ ಹಿತದೃಷ್ಟಿಯಿಂದ ತೆಗೆದುಕೊಳ್ಳಬೇಕೆಂಬ ಒತ್ತಾಯವನ್ನು ಈ ಸಂದರ್ಭದಲ್ಲಿ ಸಲ್ಲಿಸುತ್ತಾ, ಇನ್ನೂ ಅನೇಕ ಜನರು ಮಾತನಾಡುವವರಿದ್ದಾರೆ. ಅವರಿಂದ ಇನ್ನೂ ಬೇರೆ ಪ್ರಮುಖ ವಿಷಯಗಳು ಚರ್ಚೆಗೆ ಬರಬೇಕಾಗಿದೆ; ಈ ಒಂದು ಅಭಿಪ್ರಾಯ ವ್ಯಕ್ತಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಮುಖ್ಯಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ ತಾವು ಈ ನಾಡಿನ ಜನರ ಹಿತದೃಷ್ಟಿಯಿಂದ ಫೆಬ್ರವರಿ 17, 1992 ರಲ್ಲಿ ತಾವು ಏನು ಅಗ್ರಿಮೆಂಟ್‌ಗೆ ಸಹಿ ಮಾಡಿ ಬಂದಿದ್ದೀರಿ ಹಾಗೂ ಆ ಪ್ರತಿಯನ್ನು ನಮಗೆ ಏನು ಕೊಟ್ಟಿದ್ದೀರಿ. ಅದರ ಬಗ್ಗೆ ವಿವರಣೆ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಅದೇರೀತಿ ಶ್ರೀಮಾನ್ ವಿ.ಸಿ. ಶುಕ್ಲರವರು ತಮಗೇನು ಪತ್ರ ಬರೆದಿದ್ದಾರೆ ಅದಕ್ಕೆ ತಮಗೆ ಅಭಿನಂದನೆಗಳನ್ನು ಸಲ್ಲಿಸಿ ಇಂಟೀರಿಯಮ್ ಆರ್ಡರ್ ಇಂಪ್ಲಿಮೆಂಟ್ ಮಾಡಿರುವುದಕ್ಕೆ ಆ ವಿವರದ ಪ್ರತಿಯನ್ನು ಒದಗಿಸಿ ಕೊಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷಿಣಿಯವರೆ ನಮ್ಮ ಪಕ್ಷದ ಪರವಾಗಿ ನನ್ನ ಸ್ನೇಹಿತರಾದ ವೈ.ಕೆ. ರಾಮಯ್ಯನವರು ಮಾತನಾಡುತ್ತಾರೆ.

ಉಪಾಧ್ಯಕ್ಷರು : ನಿಮ್ಮ ಹೆಸರು ಇದೆಯಲ್ಲ, ನೀವು ಮಾತನಾಡುವುದಿಲ್ಲವೆ ?

ಶ್ರೀ ಸಿ. ಬೈರೇಗೌಡ : ಅವರು ಮಾತನಾಡುತ್ತಾರೆ.

ಉಪಾಧ್ಯಕ್ಷರು : ಸರಿ, ಆಗಬಹುದು.

ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್) : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ನಾನು ರುಜು ಮಾಡದಿದ್ದರೂ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಕಾವೇರಿ ನೀರಿನ ಬಗ್ಗೆ ಚರ್ಚೆ ನಡೆಯುವಾಗ ಸುಮ್ಮನೆ ಕುಳಿತುಕೊಳ್ಳುವುದಕ್ಕೆ ನನ್ನ ಕೈಯಲ್ಲಿ ಆಗುವುದಿಲ್ಲ. ನಾನು ಮಾತನಾಡಲು ಅವಕಾಶ ಕೊಡಬೇಕೆಂದು ನನ್ನ ಮಿತ್ರರು ತಮ್ಮಲ್ಲಿ ಕೇಳಿದ್ದಕ್ಕೆ ಅವಕಾಶ ಕೊಟ್ಟಿದ್ದೀರಿ. ಅದಕ್ಕಾಗಿ ತಮಗೆ ವಂದನೆಗಳು. ಈ ದಿವಸ ದಕ್ಷಿಣ ರಾಜ್ಯಗಳ ಮಧ್ಯದಲ್ಲಿ ಕಾವೇರಿ ನೀರಿನ ಹಂಚಿಕೆಯ ಬಗ್ಗೆ ನಮ್ಮ ಉಚ್ಚ ನ್ಯಾಯಾಲಯದಲ್ಲಿ ನಡೆಯುತ್ತಿರುವ ಪ್ರಸ್ತಾಪ, ಅದರಿಂದ ಬಂದಂತಹ ತೀರ್ಮಾನಗಳನ್ನು ಕುರಿತು ಚರ್ಚೆ ನಡೆಯುತ್ತಿದೆ. ಬಹುಶಃ ಕಾವೇರಿ ನೀರಿನ ವಿತರಣೆಯ ಬಗ್ಗೆ ಸದನದ ಒಳಗೆ ಹಾಗೂ ಹೊರಗೆ ಅನೇಕ ವೇದಿಕೆಗಳಲ್ಲಿ ಚರ್ಚೆಯಾಗುತ್ತಿದೆ. ಈ ಚರ್ಚೆ ಇವತ್ತಿನದಲ್ಲ, ನಿನ್ನೆ ಮೊನ್ನೆಯದಲ್ಲ. ಇದು 16–10–1981ರಿಂದ ನಡೆಯುತ್ತಿದೆ. ನನಗೆ ತಿಳಿದು ಬಂದಿರುವ ಮಾಹಿತಿ ಪ್ರಕಾರ ನನ್ನಲ್ಲಿರುವ ಕಾಗದ ಪತ್ರಗಳ ಪ್ರಕಾರ ಇಲ್ಲಿಗೆ ಸುಮಾರು 101 ವರ್ಷಗಳಾಯಿತು. 101

ವರ್ಷಗಳ ಹಿಂದೆ ಅಂದಿನ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಈ ವಿಷಯ ಆರನೆಯ ವಿಷಯವಾಗಿ ಚರ್ಚೆಯಾಗಿದೆ. ಅಂದರೆ 101 ವರ್ಷಗಳ ಹಿಂದೆ ಪೀಪಲ್ ರೆಪ್ರಸೆಂಟೇಟಿವ್ ಸಭೆಯಲ್ಲಿ ಸಾಕಷ್ಟು ಚರ್ಚೆಯಾಗಿದೆ. ಅವೊತ್ತಿನ ಚರ್ಚೆಯಲ್ಲಿ ಮೈಸೂರಿನ ಹಿತವನ್ನು ರಕ್ಷಣೆ ಮಾಡಬೇಕೆಂದು ವಾದ ಮಾಡಿದವರು ವೈ.ಕೆ. ರಾಮಯ್ಯನವರು ಅಲ್ಲ, ಬಂಗಾರಪ್ಪನವರಲ್ಲ; ಅವನು ಯಾವ ತಾಯಿಯ ಮಗನೋ ಎಲ್ಲಿ ಮಣ್ಣಾಗಿದ್ದಾನೋ ಎಲ್ಲಿ ಬೂದಿಯಗಿದ್ದಾನೋ ನನಗೆ ಗೊತ್ತಿಲ್ಲ. 'ಇಲಿಯಟ್' ಎನ್ನುವ ಒಬ್ಬ ಇಂಗ್ಲೀಷ್ ಮನುಷ್ಯ. 6ನೆಯ ವಿಷಯದಲ್ಲಿ ಪ್ರಸ್ತಾಪ ಮಾಡಿ, ಆ ಪ್ರಸ್ತಾಪದಲ್ಲಿ ಒಂದು ಮಾತನ್ನು ಹೇಳುತ್ತಾರೆ. ಮೈಸೂರು ರಾಜ್ಯದ ಜನರ ದೇಣಿಗೆಯಿಂದ ಮೈಸೂರಿನ ಭೂಮಿಯ ಮೇಲೆ ಕಟ್ಟಿದಂತಹ ಅಣೆಕಟ್ಟೆಯ ಮೂಲಕ ನೀರನ್ನು ಬಿಟ್ಟು ಕೊಡುವಂತಹ ಯಾವುದೇ ಪ್ರಸ್ತಾಪ ಅನ್ಯಾಯ ಅಷ್ಟೇ ಅಲ್ಲ, ಇದು ಅವಿವೇಕ ಕೂಡ'' ಎಂದು ಅಲ್ಲಿ ಅವರು ಪ್ರಸ್ತಾಪ ಮಾಡುತ್ತಾರೆ. ಅದನ್ನು ನಾನು ಇಲ್ಲಿ ಪೂರ್ತಿ ಓದುವುದಕ್ಕೆ ಹೋಗುವುದಿಲ್ಲ.

ಶ್ರೀ ಟಿ.ಎಂ. ಮಂಜುನಾಥ್ : ಮಾನ್ಯ ಉಪಾಧ್ಯಕ್ಷಿಣಿಯವರೆ, ತಾವು ನನಗೆ ಸ್ವಲ್ಪ ಅವಕಶ ಕೊಡಬೇಕು. ಮಾನ್ಯ ವೈ.ಕೆ. ರಾಮಯ್ಯನವರು ಹಿರಿಯ ಸದಸ್ಯರು, ಅವರು ಮಂತ್ರಿಯಾಗಿದ್ದವರು, ನನಗಿಂತ ಹೆಚ್ಚಿನ ಅನುಭವ ಅವರಿಗಿದೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷಿಣಿಯವರೆ, ವೈ.ಕೆ. ರಾಮಯ್ಯನವರ ಬಗ್ಗೆ ಅವರು ಸೌಜನ್ಯ ತೋರಿಸಬೇಕಾಗಿದೆಯೆಂದು ತಮ್ಮ ಮೂಲಕ ಅವರಲ್ಲಿ ಕೇಳಿಕೊಳ್ಳುತ್ತೇನೆ. ಅವರು ಮೊದಲನೆಯ ಸಾರಿ ಪ್ರಪ್ರಥಮವಾಗಿ ಮಾತನಾಡುತ್ತಿದ್ದಾರೆ. ಅವರಿಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡಿ. ಅವರಿಗೆ ಅನುಭವವಿದೆ, ಮಾತನಾಡುತ್ತಾರೆ.

ಶ್ರೀ ಟಿ.ಎಂ. ಮಂಜುನಾಥ್ : ಸ್ವಲ್ಪ ಇರಿ. ಅವರು ನನಗಿಂತಲೂ ಹೆಚ್ಚಿನ ಅನುಭವಸ್ಥರು. ಆ ವಿಷಯ ನನಗೆ ಗೊತ್ತಿದೆ. ಒಂದು ಮಾತಿನಲ್ಲಿ ಹೇಳುವುದಾದರೆ ನಿಮಗಿಂತ ಹೆಚ್ಚಿನ ಅನುಭವ ಅವರಿಗೆ ಇದೆ. ಇಲ್ಲಿ ಪ್ರಿವಿಲೇಜ್ ಮೋಷನ್ ಬಗ್ಗೆ ಚರ್ಚೆ ನಡೆಯುತ್ತಿದೆ. ಇದು ಏತಕ್ಕೆ ಆಯಿತು, ಏನಾಯಿತು ಅದರ ಬಗ್ಗೆ ಹೇಳಬೇಕು. ಮಾನ್ಯ ರಾಮಯ್ಯನವರು ನೂರು ವರ್ಷಗಳ ಚರಿತ್ರೆಯನ್ನು ತೆಗೆದುಕೊಂಡು ಪ್ರಸ್ತಾಪ ಮಾಡುತ್ತಿದ್ದಾರೆ. ಹಕ್ಕುಚ್ಯುತಿಗೆ ಸಂಬಂಧಪಟ್ಟಹಾಗೆ ಮಾತನಾಡಲಿಕ್ಕೆ ತಾವು ಅವಕಾಶ ಮಾಡಿಕೊಡಬೇಕು. ತಾವು ಅದನ್ನೆಲ್ಲ ಮಾತನಾಡಲಿಕ್ಕೆ ಟೈಮ್ ಕೊಡುತ್ತೇವೆಂದರೆ ನಾವು ಸ್ವಾಗತ ಮಾಡುತ್ತೇವೆ. ಆದರೆ ಈ ಸಂದರ್ಭಕ್ಕೆ ಅವರು ಆಡತಕ್ಕ ಮಾತು ಸರಿ ಇದೆಯೇ ?

ಉಪಾಧ್ಯಕ್ಷಿಣಿಯವರು : ಮಾನ್ಯ ಮಂಜುನಾಥ್‌ರವರು ಹೇಳಿದ್ದನ್ನು ಗಮನದಲ್ಲಿಟ್ಟುಕೊಂಡು ಮಾನ್ಯ ಸದಸ್ಯರು ಮಾತನಾಡಬೇಕು.

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಉಪಾಧ್ಯಕ್ಷಿಣಿಯವರೆ, ನಾನು ಈ ಸದನದಲ್ಲಿ ಒಂದು ವರ್ಷ ಅಲ್ಲ, ಎರಡು ವರ್ಷ ಅಲ್ಲ ಆರು ವರ್ಷಗಳ ಕಾಲ ಕೆಲಸ ಮಾಡಿದ್ದೇನೆ. ನನಗೂ ಸ್ವಲ್ಪ ಪ್ರಿವಿಲೇಜ್ ಮೋಷನ್ ಅಂದರೇನು, ಆ ವಿಷಯದಲ್ಲಿ ಎಷ್ಟು ಮಾತನಾಡಬೇಕೆಂದು ವಿವೇಕ ಇದೆ. ಅದರ ಜೊತೆಗೆ 18 ವರ್ಷಗಳ ಕಾಲ ಲಾಯರ್ ಆಗಿ ಕೆಲಸ ಮಾಡಿದ್ದೇನೆ. ಮಾನ್ಯ ಮಂತ್ರಿಗಳಾದ ಮಂಜುನಾಥ್‌ರವರು ಮಾತನಾಡುವುದಾದರೆ ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ಟಿ.ಎಂ. ಮಂಜುನಾಥ್ : ತಮ್ಮ ವಿವೇಕದ ಬಗ್ಗೆ, ತಮ್ಮ ಅನುಭವದ ಬಗ್ಗೆ, ತಮ್ಮ ಜ್ಞಾನ ಭಂಡಾರದ ಬಗ್ಗೆ ತಮ್ಮ ಹಿರಿತನದ ಬಗ್ಗೆ ನಾನು ಮಾತನಾಡಲಿಲ್ಲ. ಇವತ್ತಿನ ಸಂದಿಗ್ಧ ಪರಿಸ್ಥಿತಿಗೆ ತಮ್ಮ ಮಾತು ಅನ್ವಯಿಸುತ್ತದೆಯೆ? ಹಕ್ಕುಚ್ಯುತಿಗೆ ತಮ್ಮ ಒಂದು ವಾದ ಏನಿದೆ, ಅದು ಸರಿಯಾಗುತ್ತದೆಯೋ ಎಂದು ನಾನು ಅಧ್ಯಕ್ಷಿಣಿಯವರನ್ನು ಕೇಳುತ್ತಿದ್ದೇನೆ ಅಷ್ಟೆ ?

ಶ್ರೀ ಎಂ. ನಾರಾಯಣಸ್ವಾಮಿ : ಮಾನ್ಯ ಸದಸ್ಯರಾದ ರಾಮಯ್ಯನವರು ಏನು ಹೇಳುತ್ತಿದ್ದಾರೆಂಬುದನ್ನು ಸ್ವಲ್ಪ ಕೇಳಬೇಕು. ಅವರ ಸಮಸ್ಯೆ ಏನಿದೆ, ಅವರ ವಾದ ಏನಿದೆ ಎಂಬುದನ್ನು ಮಂಡಿಸುತ್ತಿದ್ದಾರೆ. ಮಾನ್ಯ ವೈ.ಕೆ. ರಾಮಯ್ಯನವರು ಏನು ಪೀಠಿಕೆ ಹಾಕುತ್ತಿದ್ದಾರೆಂಬುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಅವರು ಇನ್ನು ಪೀಠಿಕೆ ಪ್ರಾರಂಭ ಮಾಡಿದ್ದಾರೆ. ಅಷ್ಟರಲ್ಲಿ ತಾವು ಎದ್ದು ಮಾತನಾಡುವುದು ಸರಿಯಲ್ಲ. ತಾವು ಏನಾದರೂ ಹೇಳುವುದು ಇದ್ದರೆ ಕೊನೆಯಲ್ಲಿ ಹೇಳಿ. ಅದನ್ನು

ಬಿಟ್ಟು ಏನೋ ಒಂದು ಮಾತನಾಡುವುದು ಅಷ್ಟು ಸಮಂಜಸವಲ್ಲವೆನ್ನುವುದು ನನ್ನ ವಾದ.

ಉಪಾಧ್ಯಕ್ಷಿಣಿಯವರು : ಅಲ್ಲಾ, ಪೀಠಿಕೆಯೇ ಇಷ್ಟುಹೊತ್ತು ಆದರೆ ಹೇಗೆ? ತಾವು ಸಂಬಂಧಪಟ್ಟ ವಿಷಯಕ್ಕೆ ಬನ್ನಿ.

ಶ್ರೀ ವೈ.ಕೆ. ರಾಮಯ್ಯ : ನನ್ನ ಮಾತು ಅನಾವಶ್ಯಕ ಎಂದು ತಮಗೆ ಅನ್ನಿಸಿದರೆ ನಾನು ಕುಳಿತುಕೊಳ್ಳುತ್ತೇನೆ.

ಉಪಾಧ್ಯಕ್ಷಿಣಿಯವರು : ನೀವು ಮಾತನಾಡಿ.

ಶ್ರೀ ವೈ.ಕೆ. ರಾಮಯ್ಯ : ಪೀಠಿಕೆ ಅವಶ್ಯಕವೆಂದು ನಾನು ಭಾವಿಸಿಕೊಂಡಿದ್ದೇನೆ. ಇದು ಅನುಪಯುಕ್ತವೆಂದು ತಾವು ಅಪ್ಪಣೆ ಕೊಟ್ಟರೆ ನಾನು ಕುಳಿತುಕೊಳ್ಳುತ್ತೇನೆ. ಜೊತೆಗೆ ತಮ್ಮೊಬ್ಬರದ್ದು ಅಲ್ಲದೆ ಬೇರೆಯವರ ಇಂಟರ್‌ಫಿಯರೆನ್ಸ್ ಅನಾವಶ್ಯಕವೆಂದು ನಾನು ಭಾವಿಸುತ್ತೇನೆ. ನೀವು ಯಾವುದೇ ಹಂತದಲ್ಲಿ ನಾನು ಮಾತನಾಡಿದಂಥ ಮಾತು ರಾಜ್ಯದ ಜನರ ಹಿತದೃಷ್ಟಿಯಿಂದ ಅಥವಾ ಈ ಸದನದ ದೃಷ್ಟಿಯಿಂದ ಅನುಪಯುಕ್ತವಾದದ್ದು ಎಂದು ತಮಗೆ ಗೊತ್ತಾದರೆ ನೇರವಾಗಿ ಅಪ್ಪಣೆ ಕೊಡಬಹುದು. ಅಲ್ಲಿಯವರೆವಿಗೆ ತಾವು ಮತ್ತು ಸದನ ದಯವಿಟ್ಟು ನಾನು ಹೇಳುವುದನ್ನು ಕೇಳಬೇಕು.

ಉಪಾಧ್ಯಕ್ಷಿಣಿಯವರು : ನೀವು ಮಾತನಾಡಬಹುದು.

ಶ್ರೀ ವೈ.ಕೆ. ರಾಮಯ್ಯ : ನಾನು ಏಕೆ ಪೀಠಿಕೆ ಹಾಕುತ್ತಿದ್ದೇನೆ ಎಂದರೆ, 1992ನೇ ಇಸವಿಯವರೆಗೆ ಈ ರಾಜ್ಯದ ಎಲ್ಲ ಕ್ಷೇತ್ರಗಳಲ್ಲಿ ಈ ಸದನದ ಹೊರಗಡೆ ಮತ್ತು ಒಳಗಡೆ ಈ ವಿಷಯ ಕುರಿತು ಚರ್ಚೆಯಾಗಿದೆ. 1988ರಲ್ಲಿ ಈ ವಿಷಯವನ್ನು ಕುರಿತು ಸುಪ್ರೀಂ ಕೋರ್ಟಿನಲ್ಲಿ ಕೊನೆಯ ತೀರ್ಮಾನ ಆಗುವಂಥ ಹಂತದಲ್ಲಿ 13–10–88ರಲ್ಲಿ ಈ ಸದನದಲ್ಲಿ ದೀರ್ಘವಾದಂಥ ಚರ್ಚೆಯಾಗಿದೆ. ಆ ಚರ್ಚೆ ಈ ಸದನದ ಕಡತದಲ್ಲಿ ಸೇರಿಹೋಗಿದೆ. ಈ ಸಭೆಯ ಹಿರಿಯ ಸದಸ್ಯರಾದ ಶ್ರೀ ವೀರಪ್ಪಮೊಯ್ಲಿಯವರು, ಶ್ರೀಮತಿ ನಾಗರತ್ನಮ್ಮನವರು ಅವತ್ತು ಮಾತನಾಡಿದ್ದಾರೆ. ಆಗ ಈ ರಾಜ್ಯದ ಲಕ್ಷಾಂತರ ಜನರಿಗೆ ಸಂಬಂಧಪಟ್ಟಂಥ ಚರ್ಚೆ ಇದಾಗಿದ್ದು, ಈ ಚರ್ಚೆಯನ್ನು ಒಂದೆರಡು ಗಂಟೆಗೆ ಸೀಮಿತವಾಗಿ ಮಾಡಬೇಡಿ. ಹತ್ತಾರು ದಿವಸ ಚರ್ಚೆಗೆ ಅವಕಾಶ ಮಾಡಿಕೊಡಿ ಅಂತ ಆ ದಿನ ಹೇಳಿದ್ದಾರೆ. ದುರಾದೃಷ್ಟವಶಾತ್ ಏನಾಗುತ್ತದೆ ಎಂದರೆ ಈ ಕಡೆ ಕುಳಿತುಕೊಂಡು ಆಡಿದ ಮಾತು ಆ ಕಡೆಗೆ ಹೋದಾಗ ಏಕೋ ಬದಲಾವಣೆಯಾಗುತ್ತದೆ. ಇದು ನನಗೂ ಅನ್ವಯಿಸುತ್ತದೆ. ಇದು ಮನುಷ್ಯನ ಸ್ವಭಾವ ಅಂತ ಕಾಣುತ್ತದೆ. ಅವತ್ತು ಶ್ರೀಮತಿ ನಾಗರತ್ನಮ್ಮನವರು ಒಂದು ಮಾತನ್ನು ಹೇಳಿದ್ದಾರೆ. ಅವರು ವಿರೋಧ ಪಕ್ಷದ ನಾಯಕರಾಗಿ ಆಡಿದ ಮಾತನ್ನು, ಟೈಮ್ ವೇಸ್ಟ್ ಆಗುತ್ತದೆ ಎಂದು ಹೇಳಿದರೆ ನಾನು ಒಪ್ಪುವುದಿಲ್ಲ. ನನ್ನ ಪ್ರಶ್ನೆ ಇಷ್ಟೇನೆ; ಇಲ್ಲಿ ಚರ್ಚೆಯಾಗುತ್ತಿದೆ ಮತ್ತು ಎಲ್ಲಕಡೆ ಚರ್ಚೆ ಆಗುತ್ತದೆ. ಆದರೆ ಸಮಸ್ಯೆಗೆ ಪರಿಹಾರ ದೊರೆತಿಲ್ಲ. ಇಷ್ಟೇ ನನ್ನ ಕಳಕಳಿ ಹೊರತು, ಮಾತನಾಡಿ ಚಟ ತೀರಿಸಿಕೊಳ್ಳಬೇಕು ಎನ್ನುವುದು ನನ್ನ ಕಳಕಳಿ ಅಲ್ಲ. ಅದಕ್ಕಾಗಿ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಸ್ವಲ್ಪ ಹೆಚ್ಚಿನ ಕಾಲಾವಕಾಶವನ್ನು ನಮಗೆ ಕೊಡಬೇಕು ಅಂತ. ಇದು 1891ರಲ್ಲಿ ತೀರ್ಮಾನ ಆಗಿದೆ. 1964ರಲ್ಲಿ ತೀರ್ಮಾನ ಆಗಿದೆ. 1966ರಲ್ಲಿ ತೀರ್ಮಾನ ಆಗಿದೆ. ಮತ್ತೆ ಈ ಸದನದಲ್ಲಿ ನಾನು ಇಲ್ಲದೇ ಇರತಕ್ಕಂಥ ಸಂದರ್ಭದಲ್ಲಿ ಅಂದರೆ ದಿನಾಂಕ 7–6–91ರಲ್ಲಿ ಒಂದು ತೀರ್ಮಾನವಾಗಿದೆ. 1990ರಲ್ಲಿ ಅದಂಥ ತೀರ್ಮಾನ ಏನು ಎಂದರೆ, ಕಾವೇರಿ ನೀರಿನ ಹಂಚಿಕೆ ಬಗ್ಗೆ ಉಚ್ಚ ನ್ಯಾಯಾಲಯ ನೀಡಿರುವ ತೀರ್ಮಾನವನ್ನು ತಿರಸ್ಕರಿಸಬೇಕು, ಅದನ್ನು ಗಣನೆಗೆ ತೆಗೆದುಕೊಳ್ಳಬಾರದು. ರಾಜ್ಯ ಸರ್ಕಾರ ಅದನ್ನು ರಿಜೆಕ್ಟ್ ಮಾಡಬೇಕು ಅಂತ. ಉಚ್ಚನ್ಯಾಯಾಲಯದಿಂದ ರಚಿಸಲ್ಪಟ್ಟಂಥ ಟ್ರಿಬ್ಯುನಲ್ ಅದು. I know th hole story. It is the child of the Supreme Court. As per the direction of the Suprme Court, the tribunal was constituted. ಆ ಒಂದು ಟ್ರಿಬ್ಯುನಲ್ ಕೊಟ್ಟಂಥ ತೀರ್ಪನ್ನು ತಿರಸ್ಕರಿಸಬೇಕು ಎಂದು ಈ ಸದನ ಒಂದು ಸರ್ವಾನುಮತದ ತೀರ್ಮಾನಕ್ಕೆ ಬಂದಿದೆ. ಅದು ಹಕ್ಕುಚ್ಯುತಿಯಾಗುತ್ತದೆಯೇ, ಪ್ರಿವಿಲೇಜ್ ಆಗುತ್ತದೆಯೇ, ಮಾನನಷ್ಟ ಇಲ್ಲವೇ ಅಧಿಕಾರ ನಷ್ಟವಾಗುತ್ತದೆಯೇ ಎಂದು ನನಗೆ ಗೊತ್ತಿಲ್ಲ. ವಿರೋಧ ಪಕ್ಷದ ನಾಯಕರು ಕೊಟ್ಟಂಥ ಒಂದು

ಪತ್ರಿಕಾ ಹೇಳಿಕೆಯನ್ನು ಸರ್ಕಾರ ಗಣನೆಗೆ ತೆಗೆದುಕೊಳ್ಳದೇ ಹೋಗಬಹುದು, ಒಬ್ಬ ಶಾಸಕರು ಬರೆದ ಪತ್ರವನ್ನು ಮಂತ್ರಿಗಳು ಗಣನೆಗೆ ತೆಗೆದುಕೊಳ್ಳದೇ ಹೋಗಬಹುದು. ಆದರೆ ಈ ರಾಜ್ಯ ಇಡೀ ಸಮುದಾಯವನ್ನು, ಜನಾಂಗವನ್ನು ಪ್ರತಿನಿಧಿಸುವಂಥ ಈ ಸದನ ತೆಗೆದುಕೊಂಡಂಥ ತೀರ್ಮಾನಕ್ಕೂ ಕೂಡ ಮೂರು ಕಾಸಿನ ಬೆಲೆ ಸಿಗದಿದ್ದರೆ, ಅದನ್ನು ಪರಿಗಣನೆಗೆ ತೆಗೆದುಕೊಳ್ಳದಿದ್ದರೆ, ಅದನ್ನು ಗಂಭೀರವಾಗಿ ಪರಿಶೀಲಿಸದಿದ್ದರೆ, ಅದನ್ನು ಕಾರ್ಯರೂಪಕ್ಕೆ ತರದಿದ್ದರೆ, ಈ ರಾಜ್ಯದ ಜನತೆಗೆ ಇರುವ ಮತ್ತೊಂದು ದಾರಿಯನ್ನು ತಾವು ತೋರಬೇಕಾಗುತ್ತದೆ. ನಾನು ಈ ಪೀಠಿಕೆಯನ್ನು ಹುಚ್ಚನಾಗಿ ಕೊಟ್ಟಿಲ್ಲ, ಬೆಪ್ಪನಾಗಿ ಕೊಟ್ಟಿಲ್ಲ. 1891ನೇ ಇಸವಿಯಿಂದ 1992ನೇ ಇಸವಿಯವರೆಗೆ ನೂರು ವರ್ಷಕಾಲ ಈ ಸದನದಲ್ಲಿ ಈ ವಿಷಯ ಚರ್ಚೆಯಾಗಿದೆ. 1964ರಲ್ಲಿ ಏನಾಯಿತು, 66ರಲ್ಲಿ ಏನಾಯಿತು, ಏನೇನು ತೀರ್ಮಾನವಾಯಿತು ಎಂದು ನನ್ನ ಹತ್ತಿರ ದಾಖಲೆಗಳಿವೆ. ಬೇಕಾದರೆ ಅದನ್ನು ಓದುತ್ತೇನೆ. ನನ್ನ ಪೀಠಿಕೆಯ ಉದ್ದೇಶ ಇಷ್ಟೇನೆ; ಜನಪ್ರತಿನಿಧಿಗಳಾದ ನಾವು ತೆಗೆದುಕೊಳ್ಳುವಂಥ ತೀರ್ಮಾನಕ್ಕೆ ಈ ಸರ್ಕಾರ ಯಾವ ಪಕ್ಷದ್ದೇ ಆಗಿರಲಿ, ಅದಕ್ಕೆ ಬೆಲೆ ಕೊಡದಿದ್ದರೆ, ಗಂಭೀರವಾಗಿ ಗಣನೆಗೆ ತೆಗೆದುಕೊಳ್ಳದಿದ್ದರೆ, ಕಾರ್ಯರೂಪಕ್ಕೆ ತರದೇ ಇದ್ದರೆ, ಕೋಟ್ಯಾಂತರ ಜನರ ಪ್ರತಿನಿಧಿಗಳ ಬಯಕೆಗೆ ಸ್ಪಂದಿಸದೇ ಇದ್ದರೆ ಏನು ಮಾಡಬೇಕು? ಬೇರೆ ದಾರಿ ಯಾವುದು ? ಅದಕ್ಕೆ ಶ್ರೀ ನಾಗರಾಜ್‌ರವರು with no other alternative wanted to burn that report. What is the best alternative ? I request the Chief Minister where shall be go now ? ಮತ್ತೇನು ಮಾಡಬೇಕು ? ತಮ್ಮ ಮುಂದೆ ಪ್ರತಿಭಟನೆ ಮಾಡಿದ್ದು ಆಯಿತು, ಡಿ.ಸಿ. ಆಫೀಸಿನ ಮುಂದೆ ಪ್ರತಿಭಟನೆ ಮಾಡಿದ್ದಾಯಿತು. ಗವರ್ನರ್‌ರವರ ಹತ್ತಿರ ಹೋಗಿ ಅರ್ಜಿ ಕೊಟ್ಟಿದ್ದೂ ಆಯಿತು. 1988ರಲ್ಲಿ ಇದೇ ನಮ್ಮ ಎಲ್ಲಾ ಹಿರಿಯ ಸದಸ್ಯರು ಕುಳಿತುಕೊಂಡು ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ ನಾನು ಒಂದು ಮಾತನು ಹೇಳಿದ್ದೆ, ಏನೆಂದರೆ, ವಿರೋಧ ಪಕ್ಷದ ಸದಸ್ಯರು ಅಥವಾ ಆಡಳಿತ ಪಕ್ಷದ ಸದಸ್ಯರಾಗಿ ಮಾತನಾಡುತ್ತಿರುವ ನಾವು, ಈ ಜನರ ಹಿತರಕ್ಷಣೆ ಮಾಡದಿದ್ದಲ್ಲಿ, ಒಣಗಿದ ಪೈರಿಗೆ ನೀರನ್ನು ಕುಡಿಸದೇ ಹಿಂದೆ ಬಿದ್ದಲ್ಲಿ, ಈ ರಾಜ್ಯದ ಜನ ಎಚ್ಚೆತ್ತುಕೊಳ್ಳಬೇಕಾಗುತ್ತದೆ. ಅವರು ರಾಜ್ಯ ಸರ್ಕಾರದ ಮೇಲೆ, ಕೇಂದ್ರದ ಮೇಲೆ, ಜಿಲ್ಲಾ ಪರಿಷತ್ತುಗಳ ಮೇಲೆ, ಎಂ.ಎಲ್.ಎಗಳ ಮೇಲೆ ತಿರುಗಿಬೀಳುವಂಥ ಪರಿಸ್ಥಿತಿಯನ್ನು ನೋಡಬೇಕಾಗುತ್ತದೆ. ಈ ರಾಜ್ಯದ ಹಿತವನ್ನು ಕಾಪಾಡುವುದರಲ್ಲಿ, ರೈತನ ಪೈರಿಗೆ ನೀರುಣಿಸುವ ಪವಿತ್ರ ಕೆಲಸ ಮಾಡುವುದರಲ್ಲಿ, ಆದ್ಯತೆಯನ್ನು ಗುರುತಿಸುವುದರಲ್ಲಿ, ಮೀನಾಮೇಷ ಎಣಿಸಿದರೆ, ಕಾವೇರಿ ಕೊಳ್ಳದ ಜನ ರೊಚ್ಚಿಗೆದ್ದಾರು ಎಂದು ಇದು 1988ನೇ ಅಕ್ಟೋಬರ್ 13ರಂದು ಈ ಸದನದಲ್ಲಿ ನಾವು ಮಾಡಿದಂಥ ಚರ್ಚೆ. ನಾನು ಈ ಚರ್ಚೆಯಲ್ಲಿ ಬಹುಶಃ ಸುಮಾರು 55 ನಿಮಿಷಗಳ ಕಾಲ ಅವತ್ತು ಮಾತನಾಡಿದ್ದೇನೆ. ನಾವು ಪಕ್ಷದ ದೃಷ್ಟಿಯಿಂದ ಮಾತನಾಡುತ್ತಿಲ್ಲ. ಆಡಳಿತ ಪಕ್ಷದಲ್ಲಿ ಕುಳಿತು, ಇಷ್ಟು ಕಠಿಣವಾದ ಶಬ್ದವನ್ನು ಬಳಸಿ, ನಾನು ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದೇನೆ, ಎಚ್ಚರ ಮಾಡಿದ್ದೇನೆ ಎನ್ನುವ ಒಂದೇ ಒಂದು ಉದ್ದೇಶದಿಂದ ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಟಿ.ಎಂ. ಮಂಜುನಾಥ : ಪಾಯಿಂಟ್ ಆಫ್ ಆರ್ಡರ್.....

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮಂಜುನಾಥ್‌ರವರು ಇವತ್ತು ಇಷ್ಟೊಂದು ಉತ್ಸಾಹದಿಂದ ಇದ್ದಾರೆ, ಕಾರಣ ಏನು? ಎಲ್ಲರೂ ದೇವರು ಕುಳಿತುಕೊಂಡ ಹಾಗೆ ಕುಳಿತ್ತಿದ್ದಾರೆ, ಅವರು ಏಕೆ ಹೇಳುತ್ತಿದ್ದಾರೋ ನನಗೆ ಅರ್ಥವಾಗುವುದಿಲ್ಲ.

ಶ್ರೀ ಟಿ.ಎಂ. ಮಂಜುನಾಥ್ : ಮಾನ್ಯ ಉಪಾಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಹಕ್ಕುಚ್ಯುತಿ ಮೇಲೆ ಚರ್ಚೆ ಮಾಡುತ್ತಿದ್ದಾರೆ. ಆದರೆ ಅವರು ಹೇಳುತ್ತಾರೆ, ಚರ್ಚೆ ಆರಂಭ ಮಾಡುತ್ತೇನೆಂದು ಹೇಳಿದ್ದಾರೆ. ತಾವು ನಿರ್ದಿಷ್ಟವಾದ ಆದೇಶವನ್ನು ಕೊಡಿ, ವಿಷಯದ ಚರ್ಚೆಗೆ ಆದೇಶ ಕೊಟ್ಟಿದ್ದೀರೋ ಅಥವಾ ಹಕ್ಕುಚ್ಯುತಿ ಮೇಲಿನ ಚರ್ಚೆಗೆ ಆದೇಶ ಕೊಟ್ಟಿದ್ದೀರೋ ಎನ್ನುವುದನ್ನು ತಾವು ಹೇಳಿದರೆ ಸಾಕು.

ಉಪಾಧ್ಯಕ್ಷರು : ಇದು ಪಾಯಿಂಟ್ ಆಫ್ ಆರ್ಡರ್‌ನಲ್ಲಿ ಬರುವುದಿಲ್ಲ. ತಾವು ಆದಷ್ಟು ಸಂಕ್ಷಿಪ್ತವಾಗಿ, ನೇರವಾಗಿ, ಹಕ್ಕುಚ್ಯುತಿ ಬಗ್ಗೆ ಮಾತ್ರ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ಪಾಯಿಂಟ್ ಆಫ್ ಆರ್ಡರ್‌ನಲ್ಲಿ ಬರುವುದಿಲ್ಲವೆಂದು ಉಪಾಧ್ಯಕ್ಷರು ಹೇಳಿದ ಮೇಲೆಯೂ ಅವರು ಮತ್ತೆ ನಿಂತುಕೊಳ್ಳುತ್ತಿದ್ದಾರೆ.

ಶ್ರೀ ವೈ.ಕೆ. ರಾಮಯ್ಯ : ಸನ್ಮಾನ್ಯ ಉಪಾಧ್ಯಕ್ಷರೇ, ಈ ಸಭೆಗೆ ನಾನು ದೊಡ್ಡವನಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ಅವರು ಕಾವೇರಿಗೆ ಸಂಬಂಧಪಟ್ಟ ವಿಚಾರವನ್ನೇ ಮಾತನಾಡುತ್ತಿದ್ದಾರೆ, ಕಾವೇರಿ ಇತಿಹಾಸದ ಬಗ್ಗೆ ಮಾತನಾಡಿದರೆ ತಪ್ಪೇನೂ ಇಲ್ಲ. ಅವರು ಕಾವೇರಿ ವಿಷಯ ಬಿಟ್ಟು ಮಾತನಾಡಿದರೆ ಕ್ರಿಯಾಲೋಪ ಮತ್ತೊಂದು ಎತ್ತಲಿ;

ಉಪಾಧ್ಯಕ್ಷರು : ತಾವು ಬಹಳ ಸಂಕ್ಷಿಪ್ತವಾಗಿ ಮಾತನಾಡಿ.

ಶ್ರೀ ವೈ.ಕೆ. ರಾಮಯ್ಯ : ಮತ್ತೊಂದು ಸಾರಿ ತಮ್ಮಲ್ಲಿ ಪ್ರಾರ್ಥನೆ. ನಾನು ಆಡುವಂಥ ಯಾವುದೇ ಮಾತು ಅನುಚಿತ ಇದ್ದರೆ, ಅಥವಾ ವಿಷಯಕ್ಕೆ ಸಂಬಂಧವಿಲ್ಲದೆ ಇದ್ದರೆ, ತಾವು ಅಪ್ಪಣೆ ಕೊಡುವುದಾದರ ಕೂಡಲೇ ಕುಳಿತುಕೊಳ್ಳುತ್ತೇನೆ. ಬೇರೆಯವರು ಏನಾದರೂ ಹೇಳುವುದಿದ್ದರೆ, ಅಥವಾ ಮಧ್ಯೆ ಪ್ರವೇಶ ಮಾಡುವುದಿದ್ದರೆ, ನಾನು ಮಾತನಾಡುವ ಅವಶ್ಯಕತೆ ಇಲ್ಲ, ನಾನು ಕುಳಿತುಕೊಳ್ಳುತ್ತೇನೆ. ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಈಗತಾನೆ ಹಿರಿಯ ಸದಸ್ಯರಾದ ಮಾನ್ಯ ವೀರಪ್ಪಮೊಯ್ಲಿಯವರು ಬಂದರು. ಅವರು ಹೇಳಿದ ಮಾತನ್ನೇ ಓದುತ್ತೇನೆ. ನಾನಾಗಲೇ ಹೇಳಿದೆ. ನಾನಾಗಲೀ ಅವರಾಗಲೀ, ಈ ಕಡೆ ಕುಳಿತು, ಆ ಕಡೆ ಹೋದಾಗ ಬದಲಾವಣೆಯಾಗುತ್ತದೆ. ಇದು ಏಕೋ ಏನೋ ನನಗೆ ಗೊತ್ತಿಲ್ಲ. ಮನುಷ್ಯನ ದೌರ್ಬಲ್ಯವೋ ಅಥವಾ ಸರ್ಕಾರದ ಕಟ್ಟಪ್ಪಣೆಯೋ ನನಗೆ ಗೊತ್ತಿಲ್ಲ. ಈ ವೀಕ್‌ನೆಸ್ ನನಗೂ ಉಂಟು, ಅವರಿಗೂ ಇದೆ. ಈ ವಿಷಯ ಪ್ರಸ್ತಾಪಕ್ಕೆ ಬಂದಾಗ, ಅವರೇ 13–10–88ರಲ್ಲಿ ಒಂದು ಮಾತನ್ನು ಹೇಳುತ್ತಾರೆ. ಇಂತಹ ಗಂಭೀರವಾದ ವಿಷಯಕ್ಕೆ 10–15–20 ನಿಮಿಷ ಎಂದು ಕಾಲವನ್ನು ಗೊತ್ತುಮಾಡಬೇಡಿ ಎಂದು ಸಹ ಹೇಳಿದ್ದಾರೆ. ಇದನ್ನು ಓದುವುದಕ್ಕೆ ಟೈಮ್ ಇಲ್ಲವೆಂದು ಹೇಳುತ್ತಾರೆ. 281ನೇ ಪೇಜ್‌ನಲ್ಲಿ ತಾವು ಏನೇನು ಹೇಳಿದ್ದೀರಿ ಎನ್ನುವುದನ್ನು ತಾವು ಮನೆಗೆ ಹೋದಮೇಲೆ ತರಿಸಿಕೊಂಡು ಓದಿ. 13–10–68, 15–10–88ರ ಪುಸ್ತಕಗಳಲ್ಲಿದೆ, ಆಗ ತಾವು ಏನೇನು ಹೇಳಿದ್ದೀರಿ ಎನ್ನುವುದನ್ನು ಓದಿ, ನನ್ನದೇನೂ ಅಭ್ಯಂತರವಿಲ್ಲ. ಆದ್ದರಿಂದ ಈ ವಿಷಯ ಎಷ್ಟು ಗಂಭೀರವಾದುದು, ಎಷ್ಟು ಗಹನವಾದುದು ಎಂದು ನಾನಾಗಲೇ ಹೇಳಿದ ಹಾಗೆ ಶ್ರೀಮತಿ ನಾಗರತ್ನಮ್ಮನವರು ಸಹ ಅಪ್ಪಣೆ ಕೊಡಿಸಿದ್ದಾರೆ, ಅದೂ ಕೂಡ ಇದರೊಳಗೇ ಇದೆ. ಆಗಿನ ಅಧ್ಯಕ್ಷರಿಗೆ ರೇಗಿಕೊಂಡಿದ್ದಾರೆ. ಒಂದೇ ಒಂದು ನಿಮಿಷದಲ್ಲಿ ಓದುತ್ತೇನೆ. ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ಬಹುಶಃ ಆಗ ವಿರೋಧ ಪಕ್ಷದ ನಾಯಕರ ಸ್ಥಾನದಲ್ಲಿದ್ದರೆಂದು ಕಾಣುತ್ತದೆ. "ಆರು ಜನ ಅಲ್ಲ, 16 ಜನ ಮಾತನಾಡಿದರೂ ಮುಗಿಯದಂಥ ಪ್ರಶ್ನೆ ಇದು. ಮಾನ್ಯ ಮೊಯ್ಲಿಯವರು ಹೇಳಿದ ಹಾಗೆ ಇಲ್ಲಿ ಲಾ ಸೆಕ್ರಟರಿಯವರು ಇರಬೇಕಾಗಿತ್ತು, ಲಾ ಮಿನಿಸ್ಟರು ಇರಬೇಕಾಗಿತ್ತು. ಇದು ಬಗೆಹರಿಯದ ಪ್ರಶ್ನೆ ದಯಮಾಡಿ ಅವರನ್ನು ಕರೆಸಲು ಹೇಳಿ. ಈ ವಿಚಾರದಲ್ಲಿ ರಾಮಯ್ಯನವರು ಮಾತನಾಡುವುದಕ್ಕೆ ಶುರು ಮಾಡಿ 15–20 ನಿಮಿಷವಾಯಿತೆಂದು ಚೌಕಾಸಿ ಮಾಡಿದರೆ ಆಗುವುದಿಲ್ಲ'' ಇದನ್ನು ನಾನು ಹೇಳುತ್ತಿಲ್ಲ. ಇದನ್ನು ಮಾನ್ಯ ಹಿರಿಯ ಸದಸ್ಯರಾದ ಶ್ರೀಮತಿ ನಾಗರತ್ನಮ್ಮನವರೇ ಹೇಳಿದ್ದಾರೆ. ಅವರು ಈ ಸಭೆಗೆ ಮೊದಲು ಬಂದಾಗ ಹೈಸ್ಕೂಲಿಯಲ್ಲೋ ಮಿಡಲ್ ಸ್ಕೂಲಿನಲ್ಲೋ ಓದುತ್ತಿದ್ದೆನೋ ಏನೋ? ಗೊತ್ತಿಲ್ಲ. ಅವರು ಹೇಳಿದಂತೆ ಈ ವಿಷಯ ಎಷ್ಟು ಗಂಭೀರವಾದುದು ಎಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ವಿಷಯದ ಗಂಭೀರತೆಯನ್ನು ಅರ್ಥಮಾಡಿಕೊಂಡು ತಾವು ನನಗೆ ಕಾಲಾವಕಾಶ ಕೊಡಬೇಕು. ಕಾಲದ ಮಿತಿಯನ್ನು ಹೇರುವಂತಹ ಪ್ರಯತ್ನ ಮಾಡಿದರೆ ನಾನು ಪೂರ್ತಿ ನಿಲ್ಲಿಸಿಬಿಡುತ್ತೇನೆ. ನಾಲ್ಕು ಮಾತನ್ನು ಈ ವಿಷಯದಲ್ಲಿ ಪ್ರಸ್ತಾಪ ಮಾಡಬೇಕೆಂದು ಅನುಮತಿ ಕೊಟ್ಟರೆ ಅಪ್ಪಣೆ ಕೊಟ್ಟರೆ ಪ್ರಸ್ತಾಪ ಮಾಡುತ್ತೇನೆ.

(ಶ್ರೀಮತಿ ಮೋಟಮ್ಮನವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಸನ್ಮಾನ್ಯ ಅಧ್ಯಕ್ಷಣಿಯವರೇ, ನಾನು ಈಗಾಗಲೇ ಹೇಳಿದ ಹಾಗೆ 1981ರಿಂದ ಇವತ್ತಿನವರೆಗೆ ಈ ಸಭೆಯಲ್ಲಿ ಅನೇಕ ಸಮಯದಲ್ಲಿ ಇದು ಚರ್ಚೆಯಾಗಿದೆ. ನಾನು ಪ್ರಿವಿಲೇಜ್ ಮೋಷನ್ ವಿಚಾರಕ್ಕೆ

ಬರುತ್ತಿದ್ದೇನೆ. ನಾನೂ ಸಹ 16–18 ವರ್ಷಗಳಿಂದ ಲಾಯರ್ ಆಗಿ ಕೆಲಸ ಮಾಡಿದ್ದೇನೆ. ಇಷ್ಯೂಸ್ ಮೇಲೆ ಆರ್ಗ್ಯುಮೆಂಟ್ ಮಾಡುವುದು ನನಗೆ ಗೊತ್ತಿದೆ. ಸ್ನೇಹಿತರು ಯಾರೂ ನಾನು ಬೇರೆ ವಿಷಯ ಮಾತನಾಡುತ್ತಿದ್ದೇನೆಂದು ಅನ್ಯಥಾ ಭಾವಿಸಿಕೊಳ್ಳುವುದು ಬೇಡ. ನಾನು ಅದನ್ನೇ ಮಾತನಾಡುತ್ತಿದ್ದೇನೆ ಬೇರೆ ವಿಷಯಕ್ಕೆ ಹೋಗುವುದಿಲ್ಲ. ಈ ಸಭೆಯಲ್ಲಿ 6–7–91ರಂದು ಒಂದು ತೀರ್ಮಾನವಾಗಿದೆ. ಈ ತೀರ್ಮಾನ ಏನು ಎಂದರೆ ಈ ಟ್ರಿಬ್ಯುನಲ್ ಕೊಟ್ಟಂಥ ಆರ್ಡರ್‌ನ್ನು ತಿರಸ್ಕಾರ ಮಾಡಬೇಕೆನ್ನತಕ್ಕಂಥಾದ್ದು. ನಾನು ಆಗಲೇ ಹೇಳಿದ್ದೇನೆ. ಸರಕಾರಕ್ಕೆ ನನ್ನ ಕೋರಿಕೆ ಇಷ್ಟೆ, ಒಬ್ಬ ಶಾಸಕನಾಗಿ ನಾನು ಬರೆದಂಥ ಕಾಗದವನ್ನು ಅವರು ಕಸದ ಬುಟ್ಟಿಗೆ ಹಾಕಬಹುದು, ವಿರೋಧ ಪಕ್ಷದ ನಾಯಕರಾದ ಶ್ರೀಮನ್ ಚಂದ್ರೇಗೌಡರು ಕೊಟ್ಟಂಥ ಪತ್ರಿಕಾ ಹೇಳಿಕೆಯನ್ನು ಸಂಪೂರ್ಣವಾದ ನಿರ್ಲಕ್ಷಿಸಬಹುದು. ನಾನು ಮಾಡಿದಂಥ ಭಾಷಣವನ್ನು ಸಂಪೂರ್ಣವಾಗಿ ಗಮನಕ್ಕೆ ತೇದುಕೊಳ್ಳದೇ ಹೋಗಬಹುದು. ಆದರೆ ಕೋಟ್ಯಾಂತರ ಜನರ ಪ್ರತಿನಿಧಿಗಳ ಈ ಸಭೆ ತೆಗೆದುಕೊಂಡಿದ್ದಂಥ ಯುನಾನಿಮಸ್ ಡಿಷಿಷನ್ ಅನ್ನು ಗೌರವಿಸದ ಇದ್ದಂಥ ಪಕ್ಷದಲ್ಲಿ ಅದಕ್ಕೂ ಬೆಲೆ ಕೊಡದೇ ಇದ್ದಂಥ ಪಕ್ಷದಲ್ಲಿ ನಾವು ಏನು ಮಾಡಬೇಕು? ಇಲ್ಲಿ ಮಾನ್ಯ ವಾಟಾಳ್ ನಾಗರಾಜ್ ಮಾಡಿದ ತರಹ ಸುಡಬೇಕು, ಇಲ್ಲದೇ ಹೋದರೆ ಕಾನೂನನ್ನು ಕೈಗೆ ತೆಗೆದುಕೊಳ್ಳುವ ಕೊನೆಯ ಪ್ರಯತ್ನ ಮಾಡಬೇಕು. If the Government fails to implement, fails to honour the decision of this House. I would like to know from the Government what is the alterate remedy available for the Hon'ble Members sitting here? If this is answered I will sit down. This House has taken an unanimous decision to reject the orders of the Tribunal but still you are considering it, you are honouring it, why? Please tell me what is the alternate remady for us. That is why, I said it is a clear violation of the directives given by this House. That is why it amounts to privilege. This is what I said. ಸನ್ಮಾನ್ಯ ಅಧ್ಯಕ್ಷಿಣಿಯವರೇ, ಬಹುಶಃ ನಮ್ಮ ಅಧ್ಯಕ್ಷರು ಈಗ ತಮ್ಮ ಸ್ಥಾನದಲ್ಲಿ ಇದ್ದಿದ್ದರೆ ನನಗೆ ತುಂಬಾ ಅನುಕೂಲವಾಗುತ್ತಿತ್ತು. ಕಾವೇರಿ ನೀರಿನ ವಿತರಣೆ ಬಗ್ಗೆ ಉಚ್ಚನ್ಯಾಯಾಲಯದ ಆದೇಶದ ಮೇಲೆ ಆದಂಥ ಒಂದು ಟ್ರಿಬ್ಯುನಲ್ ಏನು ತೀರ್ಮಾನ ಕೊಟ್ಟಿದೆ ಆ ತೀರ್ಮಾನದಿಂದ ನನಗೆ ಹಾಗೂ ಶ್ರೀಮಾನ್ ಮಂಜುನಾಥ್‌ರವರಿಗೆ, ಶ್ರೀಮಾನ್ ಹುಚ್ಚಮಾಸ್ತಿಗೌಡರಿಗೆ ಸ್ವಲ್ಪಮಟ್ಟಿಗೆ ನಮ್ಮ ಅಧ್ಯಕ್ಷರಾದ ಶ್ರೀಮಾನ್ ಎಸ್.ಎಂ. ಕೃಷ್ಣರವರಿಗೆ ಹಾಗೂ ನಾಗಮಂಗಲದವರಿಗೆ ಹೆಚ್ಚಿನ ಅನಾನುಕೂಲವಾಗಿದೆ. ಮಂಡ್ಯ ಜಿಲ್ಲೆಯಲ್ಲಿ ವಿಶ್ವೇಶ್ವರಯ್ಯ ಚಾನಲ್ ಕೆಳಗಡೆ ಬರತಕ್ಕಂಥ ನೀರನ್ನು ಉಪಯೋಗಿಸಿಕೊಂಡು ಆಗಲೇ ಗದ್ದೆ ಮಾಡುತ್ತಿದ್ದಾರೆ. ಹಾಸನ ಜಿಲ್ಲೆಯಲ್ಲಿ ಹೇಮಾವತಿ ನೀರಿನ ಬಳಕೆ ಎಷ್ಟಾಗುತ್ತದೋ ಅಷ್ಟನ್ನು ಮಾನ್ಯ ಶ್ರೀಕಂಠಯ್ಯನವರು, ದೇವೇಗೌಡರೂ ಮಾಡಿಕೊಳ್ಳುತ್ತಿದ್ದಾರೆ. ಇವತ್ತು ಹೇಮಾವತಿಯಲ್ಲಿ ತುಂಬಿರತಕ್ಕಂಥ ನೀರನ್ನು ಮೂರೂವರೆ ಲಕ್ಷ ಎಕರೆ ಭೂಮಿಗೆ, ತುಮಕೂರು ಜಿಲ್ಲೆಗೆ ಹಾಗೂ ನಾಗಮಂಗಲ ತಾಲ್ಲೂಕಿಗೆ ಬಿಡಬೇಕಾಗಿದೆ. ಈ ನೀರನ್ನು ತಾವು ಮದ್ರಾಸಿಗೆ ಕೊಡುವುದಾದರೆ ತುಮಕೂರು ಜಿಲ್ಲೆಯಲ್ಲಿ ನಡೆಸುವ ಕಾಮಗಾರಿಗಳನ್ನು ನಿಲ್ಲಿಸಿಬಿಡಿ, ಎಂದು ದಯವಿಟ್ಟು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. If this Government fails to protect the interest of Karnataka people by preserving the cauvery water, which was preserved in Hemavathi, if you fails, then you stop all the channel works. There is no necessity. It is simply a waste.

ನನಗೆ ಪಕ್ಷದ ಗೊಂದಲ ಇಲ್ಲ. ಅಥವಾ ನನಗೆ ಯಾರ ಹಿಡಿತವೂ ಇಲ್ಲ. ನಾನು ಅಕ್ಟೋಬರ್ 1988ರಲ್ಲಿ ಮಾಡಿದ ನನ್ನ ಭಾಷಣ ಮತ್ತು ನಾನು ಅವತ್ತು ಆಡಿರತಕ್ಕಂಥ ಮಾತುಗಳು ನಾನು ಆಡಳಿತ ಪಕ್ಷದಲ್ಲಿ ಕುಳಿತುಕೊಂಡು ಮಾಡಿದ್ದು ಅದು. ಬಹುಶಃ ಅಷ್ಟೊಂದು ಕಠಿಣವಾದ ಶಬ್ಧಗಳನ್ನು ನಾನು ಇವತ್ತು ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಉಪಯೋಗಿಸುತ್ತಾ ಇಲ್ಲ. ಆದ್ದರಿಂದ ನನ್ನ ಪ್ರಾರ್ಥನೆ ಇಷ್ಟೆ ನೀರನ್ನು ಇವತ್ತು ತುಮಕೂರಿಗೆ ಕೊಡಬೇಕೋ ಅಥವಾ ತಮಿಳುನಾಡಿಗೆ ಕೊಡಬೇಕೋ ಇವತ್ತು

ಆಜ್ಞೆ ಇದೆ. ಆ ಆಜ್ಞೆಯನ್ನು ಕಾರ್ಯರೂಪಕ್ಕೆ ತರುವುದಾದರೆ ಅದು ಯಾವುದೇ ಕಾರಣಕ್ಕಾದರೂ ಇರಬಹುದು. ನೀವು ಕೇಂದ್ರ ಸರ್ಕಾರವನ್ನು ಮೆಚ್ಚಿಸಲಿಕ್ಕೆ ಅಥವಾ ಶ್ರೀಮತಿ ಜಯಲಲಿತರವರನ್ನು ಮೆಚ್ಚಿಸಲಿಕ್ಕೆ ಅಥವಾ ಯಾವುದೇ ಕಾರಣಕ್ಕೆ ಆಗಲಿ ಯಾವುದೇ ಕಾರಣದಿಂದ ಯಾರನ್ನಾದರೂ ಮೆಚ್ಚಿಸಲಿಕ್ಕೆ ಆ ನೀರನ್ನು for the best reasons known to the State Government if they are going to implement the orders of the Tribunal - that is a death sentence to the farmer of Tumkur and Nelamangala Taluk. ಆ ನೀರನ್ನು ಹರಿಯಬಿಡುವುದಾದರೆ ತುಮಕೂರು ಜಿಲ್ಲೆಯಲ್ಲಿ ಬಿಡಿ. ನಾನು ಮಾನ್ಯ ನೀರಾವರಿ ಮಂತ್ರಿಗಳನ್ನು ತಮ್ಮ ಮುಖಾಂತರ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕೋಟ್ಯಾಂತರ ರೂಪಾಯಿಗಳು ಈಗಾಗಲೇ ಖರ್ಚಾಗಿವೆ. ನಾನು ಮತ್ತು ನಮ್ಮ ಮಂಜುನಾಥ್‌ರವರು ಶ್ರಮ ಬಿದ್ದು ಕಾಲುವೆ ಕೆಲಸ ಮಾಡಿಸಿದ್ದೇವೆ. ನೀರು ಬಿಡದಿದ್ದರೆ ಹೊಳೆಗೆ ಹುಣಸೆ ಹಣ್ಣು ಹಿಂಡಿದಂತಾಗುತ್ತದೆ. ದಯಮಾಡಿ ಅದನ್ನು ಮಾಡುವುದು ಬೇಡ. ಇವತ್ತು ಕಾವೇರಿ ನೀರನ್ನು ತಮಿಳುನಾಡಿಗೆ ಬಿಟ್ಟು ಕೊಟ್ಟು ಸರ್ಕಾರದವರು ಅಧಿಕಾರದಲ್ಲಿ ಉಳಿದುಕೊಳ್ಳುವಂಥ ಕಾರ್ಯದಲ್ಲಿ ಸಫಲರಾಗಬಹುದು. ಕೇಂದ್ರ ಸರ್ಕಾರವನ್ನು ಮೆಚ್ಚಿಸುವಂತಹ ಕಾರ್ಯದಲ್ಲಿ ಸಫಲರಾಗಹುದು. ತಮಿಳುನಾಡಿನ ಬೆಂಬಲವನ್ನು ತೆಗೆದುಕೊಳ್ಳತಕ್ಕಂಥ ಕಾರ್ಯದಲ್ಲಿ ಸಫಲರಾಗಬಹುದು. ಆದರೆ ಕರ್ನಾಟಕ ರಾಜ್ಯದ ಚರಿತ್ರೆಯಲ್ಲಿ ಈ ಪಾಪ ಕಾರ್ಯವನ್ನು ಮಾಡಿದಂತಹ ಚಾಪ್ಟರ್‌ನಲ್ಲಿ ಅವರ ಹೆಸರು ಉಳಿದು ಹೋಗುತ್ತದೆ. ಆದ್ದರಿಂದ ಇವತ್ತು ಅಧಿಕಾರವನ್ನು ಉಳಿಸಿಕೊಳ್ಳುವ ಅಥವಾ ಕಳೆದುಕೊಳ್ಳುವ ಪ್ರಶ್ನೆ ಅಲ್ಲ. ನನ್ನ ಪ್ರಾರ್ಥನೆ ಏನೆಂದರೆ ಜನತಾ ಪಕ್ಷದವರು ಇದನ್ನು ಮಾಡಲಿಲ್ಲ. ಕಮ್ಯುನಿಸ್ಟ್ ಪಕ್ಷದವರು ಮಾಡಲಿಲ್ಲ, ಕಾಂಗ್ರೆಸ್ ಪಕ್ಷದವರು ಮಾಡಲಿಲ್ಲ ಅಂತ ಅಲ್ಲ. ಈ ರಾಷ್ಟ್ರದ ದುರಾದೃಷ್ಟ ಅಂತ ಕಾಣುತ್ತದೆ. ಈ ರಾಷ್ಟ್ರದ ಬಡಜನರ ಸಮಸ್ಯೆಗಳ ಅರಿವು ಇಲ್ಲದೆ ಇರತಕ್ಕಂಥವರ ಕೈಲಿ ಯೋಜನೆಗಳನ್ನು ನಿರೂಪಿಸುವಂತಹ ಅಧಿಕಾರವನ್ನು ಕೊಡುವಂತಹ ಪಾಪವನ್ನು ನಾವು ಮಾಡಿದ್ದೇವೆ. ಅದು ಕೇಂದ್ರದಲ್ಲಿ ಇರಬಹುದು. ಕೇಂದ್ರದಲ್ಲಿರತಕ್ಕಂಥ ಕಾಂಗ್ರೆಸ್ ಪಕ್ಷ ಇರಬಹುದು, ಜನತಾ ಪಕ್ಷ ಇರಬಹುದು ನೀರಿನ ಬಗ್ಗೆ ಬೇಸಾಯದ ಬಗ್ಗೆ ನೀರು ಇಲ್ಲದೆ ಭೂಮಿ ಒಣಗಿದಾಗ ಪಡುವಂತಹ ನೋವನ್ನು ಅರ್ಥ ಮಾಡಿಕೊಳ್ಳದೆ ಇರತಕ್ಕಂಥವರ ಕೈಲಿ ನಾನು ಅಧಿಕಾರವನ್ನು ಕೊಟ್ಟು ನಾವು ಕೆಟ್ಟಿದ್ದೇವೆ. 1980ರಲ್ಲಿ ಜನತಾ ಪಕ್ಷದ ಸರ್ಕಾರಕ್ಕೂ ನಾನು ಹೇಳಿದ್ದೇನೆ. ಈ ಸರ್ಕಾರಕ್ಕೂ ನಾನು ಹೇಳುತ್ತಿದ್ದೇನೆ. ಹಣವನ್ನು ಖರ್ಚು ಮಾಡುವುದರ ಮುಖಾಂತರ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದರ ಮುಖಾಂತರ ಅತಿ ಜಾಗ್ರತೆಯಾಗಿ ಕಾವೇರಿ ಜಲಾನಯನ ಪ್ರದೇಶದಲ್ಲಿರತಕ್ಕಂಥ ಭೂಮಿಗೆ ನೀರನ್ನು ಕೊಡುವಂತಹ ಕೆಲಸವನ್ನು ನಾವು ಮಾಡದೇ ಇದ್ದರೆ ಹೇಗೆ? ನೀರಾವರಿ ಮಂತ್ರಿಗಳು ಅದು ಏತಕ್ಕೋ ಹೇಮಾವತಿ ಮತ್ತು ಕಾವೇರಿ ಕಡೆ ಗಮನ ಕೊಡುತ್ತಿಲ್ಲ.......

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಇದು ಒಂದು ವಿಚಿತ್ರವಾದಂತಹ ಹೇಳಿಕೆ. ತಮಗೆ ಗೊತ್ತಿದೆ. ತಾವು ಈ ತರಹ ಆಪಾದನೆ ಮಾಡುವುದು ಸರಿಯಲ್ಲ, ನನ್ನ ಮೇಲೆ ಈ ತರಹ ಆಪಾದನೆ ಮಾಡಬೇಡಿ. ಏನಾದರೂ ಸ್ವಲ್ಪ .....

ಶ್ರೀ ಬಸವರಾಜರಾಯರೆಡ್ಡಿ : ಮಾನ್ಯ ಮಲ್ಲಾರಿಗೌಡ ಪಾಟೀಲರೇ, ನಾವು ಕಾವೇರಿ ಬಗ್ಗೆ ಸ್ವಲ್ಪ ಕಿಮ್ಮತ್ತು ಆದರೂ ಕೊಡುತ್ತಾರೆ ಅದೇ ಕೃಷ್ಣಾ ಅಂದರೆ ಹಳೇ ಮೈಸೂರಿನವರು ಯಾವ ಕಿಮ್ಮತ್ತು ಕೊಡುವುದಿಲ್ಲ.

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೇ ನಾನು ತಮ್ಮ ಮುಖಾಂತರ ಈಗಿನ ಹಾಲಿ ನೀರಾವರಿ ಸಚಿವರನ್ನು ಈ ಸದನದಲ್ಲಿ ಅಭಿನಂದಿಸುತ್ತೇನೆ. ಏಕೆಂದರೆ ಅನೇಕ ವರ್ಷಗಳಿಂದ ತುಮಕೂರು ಜಿಲ್ಲೆಗೆ ಆಗುವಂತಹ ಅತಿ ಮುಖ್ಯವಾದಂತಹ ಡೀಪ್ ಕಟ್ ಚಾನಲ್ ಕಾಲುವೆ ಕೆಲಸ ನನೆಗುದಿಗೆ ಬಿದ್ದಿತ್ತು. ಆ ಕೆಲಸವನ್ನು ನನ್ನ ಒತ್ತಾಯಕ್ಕೋ ಅಥವಾ ನಮ್ಮ ಮಂತ್ರಿಗಳ ಒತ್ತಾಯಕ್ಕೋ ಆ ಕೆಲಸವನ್ನು ಮೊದಲು ಮಾಡಿಸಿದ್ದಾರೆ. ಅವರು ಅಧಿಕಾರಿಗಳನ್ನು ಕರೆದುಕೊಂಡು ಹೋಗಿ ತೋರಿಸಿದ್ದಾರೆ. ಅಷ್ಟು ಸಣ್ಣದಾಗಿ ಇದು ಕಾವೇರಿ ಕೃಷ್ಣಾ ಸಂಬಂಧ ಅಲ್ಲ. ತಾವು ನೀರಾವರಿ

ಮಂತ್ರಿಗಳಾಗಿ ಬಂದ ಮೇಲೆ ತುಮಕೂರು ಜಿಲ್ಲೆಗೆ ಹೇಮಾವತಿ ಕಾಮಗಾರಿಗಳಿಗೆ ಚುರುಕು ಸಿಕ್ಕಿದೆ. ಅದಕ್ಕೆ ನಾನು ತಮ್ಮನ್ನು ಅಭಿನಂದಿಸುತ್ತೇನೆ. ತಾವು ಗುಲ್ಬರ್ಗಾದವರು ಅಥವಾ ಬೆಳಗಾಂನವರು ಎಂಬ ಚಿಂತೆ ಇಲ್ಲ. ಏಕೆಂದರೆ ನೀರಾವರಿ ಇಲಾಖೆಯ ಎಲ್ಲಾ ವಿಷಯಗಳಿಗೆ ನೀರಾವರಿ ಮಂತ್ರಿಗಳು ಮುಂದೆ ಇರಬೇಕಾಗಿತ್ತು. ಮುಂದೆ ಇದ್ದು ನೋಡುವಂತಹ ಪದ್ಧತಿ ಇತ್ತೀಚೆಗೆ ಅವರನ್ನು ಬಿಟ್ಟು ಈ ವಿಷಯಗಳಲ್ಲಿ ಬೇರೆ ಬೇರೆಯವರು ಯಜಮಾನಿಕೆ ಮಾಡುತ್ತಿದ್ದಾರೆ. ಆದ್ದರಿಂದ ನಾನು ಆ ರೀತಿಯಾಗಿ ಹೇಳಿದೆನೇ ಹೊರತು ಅವರನ್ನು ದೂಷಿಸಬೇಕೆಂದು ನಾನು ಆ ಮಾತನ್ನು ಹೇಳಲಿಲ್ಲ. ಈ ವಿಷಯದಲ್ಲಿ ನನ್ನ ಪ್ರಾರ್ಥನೆ ಇಷ್ಟೇ, ಈ ಸದನ ಒಂದು ತೀರ್ಮಾನ ತೆಗೆದುಕೊಂಡಿದೆ. ಸನ್ಮಾನ್ಯ ವೀರಪ್ಪಮೊಯ್ಲಿಯವರು ಕಾನೂನು ಸಚಿವರೆಂದು ನಾನು ಭಾವಿಸಿಕೊಂಡಿದ್ದೇನೆ. ಕಾನೂನು ದೃಷ್ಟಿಯಿಂದ ದಾರಿ ತೋರಿಸಿದರೆ ಸಾಕು. ಸುಪ್ರೀಂಕೋರ್ಟ್‌ನಲ್ಲಿ ಪ್ಲೀಡಿಂಗ್ಸ್ ಟ್ರೈ ಮಾಡಿ ಅಲ್ಲೂ ನಾವು ಸೋತಿದ್ದೇವೆ. ರಾಜ್ಯಪಾಲರಿಗೆ ಮನವಿ ಕೊಟ್ಟದ್ದೂ ಪ್ರಯೋಜನವಾಗಲಿಲ್ಲ. ಡಿ.ಸಿ. ಆಫೀಸ್ ಮುಂದೆ ಹಾಗೂ ಸರ್ಕಾರದ ಮುಂದ ಬೊಬ್ಬೆ ಹೊಡೆದು ಕೊಂಡರು, ಅಲ್ಲೂ ಪ್ರಯೋಜನವಾಗಲಿಲ್ಲ. As a last resort we have taken shelter in this House. You have passed an unanimous resolutions to reject the interim order of the Tribunal. Now, I want to know whether the Government has rejected it or not? If you say that you have rejected the Tribunal order, I will simply sit down because you have honoured the sentiments of these hon'ble members. If you have not respected, if you have not rejected, I have no other alternative except to presume that this Government have no regard for Members. I must say that this Government does not have regard for the decision of this House. I would like to ask the Hon'ble Law Minister here, if I violate the rules laid down in this House or if Mr. Vatal Nagaraj violates orders of the Chair, does it not amount to violation of the rules and contempt of the House? If the Government rejects the decision of this House what should be the remedy? I want a clear answer to this question. If you say that we have rejected the orders of the Tribunal on the basis of the decision of this House, I have no argument at all, I will keep quiet. ನಮ್ಮದು ಮುಂದೆ ವಾದವೇ ಇಲ್ಲ. ಈ ವೇದಿಕೆಯ ಅವಶ್ಯಕ್ಯಕತೇನೇ ಇಲ್ಲ. ಆದರೆ ಆ ತೀರ್ಮಾನದ ಬಗ್ಗೆ ಇನ್ನೂ ಏನೂ ತೀರ್ಮಾನ ತೆಗೆದುಕೊಳ್ಳದಿದ್ದರೆ ಈ ಸದನದ ತೀರ್ಮಾನಕ್ಕೆ ನೀವೇನಾದರೂ ಸ್ಪಂದಿಸದಿದ್ದರೆ, ಈ ತೀರ್ಮಾನಕ್ಕೆ ಬೆಲೆ ಕೊಡದಿದ್ದರೆ ಮುಂದ ನನಗೆ ಬೇರೆ ದಾರಿನೇ ಇಲ್ಲದೆ ಈ ಸದನಕ್ಕೆ ನೀವು ಅಗೌರವ ತಂದಿದ್ದೀರ ಎಂದು ಹೇಳಬೇಕಾಗುತ್ತದ. ಈ ಸದನದ 224 ಜನ ಸದಸ್ಯರ ತೀರ್ಮಾನವೇ ಹೊರತು ಇದು ಒಂದು ಪಕ್ಷದಿಂದ ಮಾಡಿದಂಥ ತೀರ್ಮಾನ ಅಲ್ಲ. ಕಾಂಗ್ರೆಸ್‌ನವರು, ಜನತಾದವರು, ಕಮ್ಯುನಿಸ್ಟ್‌ನವರು ಮಾಡಿದ್ದಲ್ಲ. ಇದು ಇಡೀ ಸದನ ಮಾಡಿದಂಥ ತೀರ್ಮಾನ ಈ ತೀರ್ಮಾನಕ್ಕೆ ನೀವು ಬೆಲೆ ಕೊಡಲಿಲ್ಲ ಅಂತ ಅಂದರೆ ಇದು ಪ್ರಿವಿಲೇಜ್ ಆಗುತ್ತಿದೆಯೇ? ಈ ರಾಜ್ಯದ ಕೋಟ್ಯಾಂತರ ಜನರ ಪ್ರತಿನಿಧಿಗಳಾದಂಥ ನಮಗೆ ಅವಮಾನ ಮಾಡಿದಂತಾಗುತ್ತದೆಯೇ? ಎನ್ನುವ ಬಗ್ಗೆ ಸರ್ಕಾರದವರು ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ, ಅಧ್ಯಕ್ಷಿಣಿಯವರೆ, ಪೀಠಿಕೆ ಕೊಡುವಾಗಲೇ ನಾಲ್ಕೈದು ಜನ ಸ್ನೇಹಿತರು ದುಂಬಾಲು ಬೀಳುತ್ತಿದ್ದರು. ಯಾವ ಕಾರಣಕ್ಕೋ ಗೊತ್ತಿಲ್ಲ. ನನ್ನ ವಾದ ಇಷ್ಟೇ, ಈ ಸದನವು ತೆಗೆದುಕೊಂಡ ತೀರ್ಮಾನಕ್ಕೆ ಸರ್ಕಾರ ಬೆಲೆ ಕೊಡಬೇಕೇ ಅಥವಾ ಬೇಡವೇ? ಅದನ್ನು ಪುರಸ್ಕಾರ ಮಾಡಬೇಕೇ ಅಥವಾ ಬೇಡವೇ? ಅದನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೇ ಅಥವಾ ಬೇಡವೇ ಇದು ಒಂದನೆಯದು. ಇನ್ನು ಎರಡನೆಯದು, ತೆಗೆದುಕೊಂಡಂಥ ತೀರ್ಮಾನವನ್ನು ಅವರು ರಿಜೆಕ್ಟ್ ಮಾಡಿದ್ದಾರೋ ಅಥವಾ ಇಲ್ಲವೋ ರಿಜೆಕ್ಟ್ ಮಾಡಿದ್ದರೆ ಸಂತೋಷ. ಆ ತೀರ್ಮಾನವನ್ನು ರಿಜೆಕ್ಟ್

ಮಾಡದಿದ್ದರೆ that is the clear violation of the rules prevailed. ಇಷ್ಟನ್ನು ಹೇಳಿ ನಾನು ಸರ್ಕಾರದವರಿಂದ ಭಾಷಣ ನಿರೀಕ್ಷೆ ಮಾಡುವುದಿಲ್ಲ. ಈ ಸದನವು ತೆಗೆದುಕೊಂಡಂಥ ಯುನಾನಿಮಸ್ ಡಿಸೀಷನ್ ಏನಿದೆ? ಆ ಡಿಸೀಷನ್‌ಗೆ ಇವರು ಗೌರವ ಕೊಡುತ್ತಾರೋ ಕೊಡುವುದಿಲ್ಲವೋ? ಗೌರವ ಕೊಡುವುದಾದರೆ ಆ ಟ್ರಿಬ್ಯುನಲ್ ಆರ್ಡರನ್ನು ರಿಜೆಕ್ಟ್ ಮಾಡುತ್ತಾರೋ ಇಲ್ಲವೋ ಎನ್ನುವ ಬಗ್ಗೆ ಉತ್ತರವನ್ನು ಬಯಸಿ ನಾನು ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಂಥ ನಿಮಗೆ ವಂದನೆಗಳನ್ನು ಅರ್ಪಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮೆಡಮ್ ಚೇರ್ಮನ್, ಒಂದೇ ಒಂದು ಕ್ಲಾರಿಫಿಕೇಷನ್ ನಾನು ಕೇಳಬೇಕಾಗಿದೆ. ಹಿರಿಯ ಸದಸ್ಯರಾದ ಶ್ರೀಮಾನ್ ಯಡಿಯೂರಪ್ಪನವರು ಒಂದು ಮಾತನ್ನು ಹೇಳಿದರು. ಏನೆಂದರೆ, ವಿರೋಧ ಪಕ್ಷದ ನಾಯಕರೂ ಕೂಡಾ ಈ ವಿಚಾರದಲ್ಲಿ ಸರಿಯಾಗಿ ನಡೆದುಕೊಳ್ಳಲಿಲ್ಲ ಎಂದು ಪ್ರಸ್ತಾಪ ಮಾಡಿದ್ದರು.

ಶ್ರೀ ಕಾಗೋಡು ತಿಮ್ಮಪ್ಪ : ಹೌದು, ಹೌದು.

ಶ್ರೀ ವಾಟಾಳ್ ನಾಗರಾಜ್ : ಎಷ್ಟು ಬೇಗ ಸಾಕ್ಷಿ ಹೇಳುತ್ತಿದ್ದಾರೆ ನೋಡಿ. ಕಿತಾಪತಿ ಪಿತೂರಿಗೆ ಸಾಕ್ಷಿ ಹೇಳುವುದಕ್ಕೆ ಎಷ್ಟು ಜನ ಕುಳಿತಿದ್ದಾರೆ ನೋಡಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ಇರುವ ವಿಚಾರವನ್ನು ಹೇಳುವುದಕ್ಕೆ ನಮಗೇನು?

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲವೆಂದು ಹೇಳಿದಾಗ ನೀವು ಹೇಳಿದರೆಂದು ಕೂಗಬೇಕು. ಹೇಳಿದವನು ನಾನು ಇಲ್ಲೇ ಕುಳಿತಿದ್ದೇನೆ. ಏಕೆ ಹೇಳಿದೆ ಎಂದು ನಾನು ಮುಂದೆ ಹೇಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ನೀರು ಬಿಟ್ಟಿದ್ದಾರೆಯೇ ಎಂದು ಕೇಳಿದರೆ ಸಾಕ್ಷಿ ಹೇಳುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ನಿಮ್ಮ ಕಡೆ ವೆಂಕಟೇಶ್ ಇದ್ದಾರೆ. ಅವರೇ ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ವೆಂಕಟೇಶನನ್ನು ಪರಮಾತ್ಮನೇ ಕಾಪಾಡಬೇಕು. ತಿರುಪತಿ ತಿಮ್ಮಪ್ಪನೇ ಈ ವೆಂಕಟೇಶನನ್ನು ಕಾಪಾಡಬೇಕು ನಾನು ಏನು ಮಾಡುವುದಕ್ಕಾಗುತ್ತದೆ?

ಶ್ರೀ ಎಂ.ಪಿ. ವೆಂಕಟೇಶ್ : ನನಗೆ ಮಾತನಾಡಲು ಅವಕಾಶ ಮಾಡಿಕೊಡಬೇಕು. ಏಕೆಂದರೆ ಮಾನ್ಯ ವಾಟಾಳ್ ನಾಗರಾಜ್‌ರವರು ಈ ಸದನಕ್ಕೆ ತಪ್ಪು ಅಭಿಪ್ರಾಯ ಕೊಡುತ್ತಿದ್ದಾರೆ. ಅದು ಸರಿಯಾದುದಲ್ಲ. ನಾನು ಏನು ಹೇಳಬೇಕೋ ಅದನ್ನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಅವರನ್ನು ದೇವರು ಕಾಪಾಡಲಿ ಎಂದು ನನ್ನ ಸ್ನೇಹಿತರಿಗೆ ಹೇಳಿದರೆ, ಅವರಿಗೆ ಏತಕ್ಕೆ ಕೋಪ ಬರುತ್ತದೆ?

ಶ್ರೀ ಕಾಗೋಡು ತಿಮ್ಮಪ್ಪ : ಅಧ್ಯಕ್ಷರೆ, ಕಬಿನಿ ಪ್ರಾಜೆಕ್ಟ್‌ನ ಆ ಕ್ಷೇತ್ರದವರು ಇಲ್ಲೇ ಕಣ್ಣು, ಬಾಯಿ ಬಿಟ್ಟುಕೊಂಡು ಕುಳಿತಿದ್ದಾರೆ ಅವರನ್ನು ಕೇಳದೇನೇ ಗಾಡೀನಾ ಹೊಡಿತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಇಷ್ಟೇ ವಿವರಣ ಕೊಡಬೇಕಾಗಿದ್ದು, ಮಾನ್ಯ ಯಡಿಯೂರಪ್ಪನವರಿಗೆ ಇರತಕ್ಕಂಥ ಸಂಶಯಕ್ಕೆ ಏನು ಕಾರಣವೋ ಗೊತ್ತಿಲ್ಲ. ಆದರೆ ಇದರ ಅನೇಕ ಪ್ರಕ್ರಿಯೆಗಳಲ್ಲಿ ನಾವು ಪಾಲುದಾರರು. ಶಾಸನ ಸಭೆಯ ನಿರ್ಣಯಕ್ಕೆ ಈಗಾಗಲೇ ಒಕ್ಕೊರಲಿನ ಬೆಂಬಲವನ್ನು ಕೊಟ್ಟೆವೋ ಹಾಗೇ ಹೊರಗಡೆ ನಡೆದಿರತಕ್ಕಂಥ ಪ್ರಕ್ರಿಯೆಗಳಿಗೂ ನಾವು ಬೆಂಬಲ ಕೊಟ್ಟಿದ್ದೆವು. ಶಾಸನ ಸಭೆಯಲ್ಲಿ ನಿರ್ಣಯ ಆದ ಮೇಲೆ ರಾಜ್ಯ ಸರ್ಕಾರ, 25ನೇ ಜುಲೈ 1991ರಂದು ಒಂದು ಆರ್ಡಿನೆನ್ಸ್‌ನ್ನು ಹೊರಡಿಸಿತು.

Karnataka Ordinance No. 6/1991.....
"Karnataka Cauvery Basin Irrigation Protection Ordinance 1991" ಎಂದು

ಆ ದಿವಸ ಮಾನ್ಯ ಯಡಿಯೂರಪ್ಪನವರೆ, ನಾವು ಬೆನ್ನು ತಟ್ಟಿದ್ದೇವೆ, ನೀವು ಸಹ ಬೆನ್ನು ತಟ್ಟಿದ್ದೀರಿ. ಈ ಸರ್ಕಾರಕ್ಕೆ. ಈ ಆರ್ಡಿನೆನ್ಸ್ ಎಂಟನೇ ತಾರೀಖು ನವೆಂಬರ್ 1991ರಲ್ಲಿ ಶಾಸನ ಆಯಿತು. ಈ ಅಧ್ಯಾದೇಶ ಶಾಸನ ಆಗುವ ಕಾಲಕ್ಕೆ ಕೂಡ ರಾಜ್ಯ ಸರ್ಕಾರ ಕಾವೇರಿ ವಿಚಾರದಲ್ಲಿ ಬಹಳ ಗಂಡುಸುತನದ ನಿರ್ಣಯವನ್ನು ತೆಗೆದುಕೊಂಡಿದೆ ಎನ್ನತಕ್ಕ ಪದವನ್ನು ನಾನು ಬಳಸಿದೆ. ಕೇಂದ್ರ ಸರ್ಕಾರದ ವಿರುದ್ಧ ಇಂತಹ ಒಂದು ಶಾಸನವನ್ನು ಜಾರಿಗೆ ತರುವಲ್ಲಿ, ತೋರಿದಂತಹ ಧೈರ್ಯವನ್ನು,

ಸಾಹಸವನ್ನು, ಉತ್ಸಾಹವನ್ನು ನಾನು ಮೆಚ್ಚಿದೆ. ಮುಂದೆ ಡಿಸೆಂಬರ್ 13ನೇ ತಾರೀಖು ರಾಜ್ಯಾದ್ಯಂತ ಬಂದ್ ಆಚರಿಸಿದರು. ಅದರಲ್ಲಿ ನಾವೆಲ್ಲರೂ ಪಾಲುಗೊಂಡಿದ್ದೇವೆ. ಇದು ಸರ್ಕಾರ ಕರೆದಂತಹ ಬಂದ್, ಸರ್ವಪಕ್ಷಗಳು ಮಾಡಿದಂತಹದು, ಅದರಲ್ಲಿ ನಾವು ಪಾಲುಗೊಂಡಿದ್ದೇವೆ. ಈ ಎಲ್ಲ ಪ್ರಕ್ರಿಯೆಗಳನ್ನು ಹೇಳುವುದಕ್ಕೆ ಮುಖ್ಯವಾದ ಕಾರಣ ಅದು ಆದ ಮೇಲೆ ಮತ್ತೊಂದು ಠರಾವನ್ನು ಅದೇ ಸಂದರ್ಭದಲ್ಲಿ ಮಾನ್ಯ ಮಾಡಿ ಸರ್ವ ಪಕ್ಷಗಳ ನಿಯೋಗ ಒಂದು ದೆಹಲಿಗೆ ಹೋಗಿದೆ. ಈ ಸರ್ವಪಕ್ಷಗಳ ನಿಯೋಗದಲ್ಲಿ ನಾವು ಹೋಗಿದ್ದೇವೆ. ಈ ಮೂರೂ ಪ್ರಕ್ರಿಯೆಗಳ ಬಗ್ಗೆ ಮಾತ್ರ ನಾನು ಈ ಸದನದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ನಿಯೋಗ, ಆರ್ಡಿನನ್ಸ್, ಮತ್ತು ಶಾಸನ. ಶಾಸನ ಮೂಡಿದಾಗ ಮತ್ತು ರಾಜ್ಯದ ಬಂದ್‌ಗೆ ಕರೆದಾಗ ಎಲ್ಲ ಕಾರ್ಯದಲ್ಲೂ ನಾವು ಒಟ್ಟಾಗಿ ಹೋಗಿದ್ದೇವೆ. ಆದ್ದರಿಂದ ಮಾನ್ಯ ವಿರೋಧ ಪಕ್ಷದ ನಾಯಕರು ತಪ್ಪಿರುವುದು ಎಲ್ಲಿ ಎಂದು ಮಾನ್ಯ ಯಡಿಯೂರಪ್ಪನವರನ್ನು ಕೇಳಬಯಸುತ್ತೇನೆ, ಇದು ಒಂದು. ಶಾಸನ ಸಭೆಯಲ್ಲಿ ನನ್ನ ಅಭಿಪ್ರಾಯ ಅಂದಿಗೂ, ಇಂದಿಗೂ, ನಾಳೆಗೂ ಸ್ಪಷ್ಟವಾಗಿದೆ ಅಂದು ಪ್ರಾರಂಭದ ದಿನಗಳಲ್ಲಿ ಟ್ರಿಬ್ಯೂನಲ್ ಅನ್ನು ಒಪ್ಪಿಕೊಳ್ಳಬೇಡಿ ಎನ್ನತಕ್ಕ ವಾದ ಏನಿತ್ತು, ತೀರ್ಪನ್ನು ಬಹಿಷ್ಕರಿಸಿ ಎನ್ನತಕ್ಕ ವಾದ ಏನಿತ್ತು, ಅದಕ್ಕೆ ದಾಖಲೆಗಳೇ ಸಾಕ್ಷಿ. ಆದರೂ ಶ್ರೀಮಾನ್ ವೀರೇಂದ್ರ ಪಾಟೀಲರು ಆ ಕಾಲಕ್ಕೆ ನೀವು ನಂಬಿಕೆ ಕಳೆದುಕೊಂಡರೆ ಹೇಗೆ? ನಾನು ವಿಶ್ವಾಸ ಇಟ್ಟಿದ್ದೇನೆ. ಸರ್ಕಾರದ ವತಿಯಿಂದ ಬಂದಂತಹ ಆಶ್ವಾಸನೆ ಬಗ್ಗೆ ನಾವು ವಿಶ್ವಾಸ ಇಟ್ಟಿದ್ದೇವೆ, ನಮ್ಮ ರಾಜ್ಯಕ್ಕೆ ಅನ್ಯಾಯ ಆಗುವುದಿಲ್ಲ ಎಂದು ಪದೇ ಪದೇ ಒತ್ತಿ ಹೇಳಿದ್ದಾರೆ. ಈಗಿನ ಮುಖ್ಯಮಂತ್ರಿಗಳು ನಡೆದುಕೊಂಡಿದ್ದನ್ನು ಸಹ ಹೇಳಿದ್ದೇನೆ. ಎಲ್ಲ ಪ್ರಕ್ರಿಯೆಗಳಲ್ಲಿ ಈಗ ಮುಂಭಾಗದಲ್ಲಿ ಕುಳಿತಿರತಕ್ಕ ಸದಸ್ಯರು ಒಟ್ಟಾಗಿ ಕೆಲಸ ಮಾಡಿದ್ದೇವೆ. ಆದರೂ ವಿರೋಧ ಪಕ್ಷದ ನಾಯಕರಲ್ಲಿ ಎಲ್ಲಿ ಮತ್ತು ಹೇಗೆ ದೋಷ ಕಾಣಿಸಿತೋ ಮಾನ್ಯ ಯಡಿಯೂರಪ್ಪನವರಿಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಏನು ಹೇಳುತ್ತಿದ್ದೇನೆ ಎಂದರೆ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಚಂದ್ರೇಗೌಡರು ಹೇಳಿದಂತೆ ಎಲ್ಲ ಸಂದರ್ಭದಲ್ಲಿಯೂ ಸಹ ಕೇವಲ ವಿರೋಧ ಪಕ್ಷದವರೇ ಅಲ್ಲ, ಈ ಸದನ ಪೂರ್ಣವಾಗಿ ಮಾನ್ಯ ಮುಖ್ಯಮಂತ್ರಿಗಳ ಜೊತೆ, ಸರ್ಕಾರದ ಜೊತೆ ಸಹಕಾರ ಕೊಟ್ಟುಕೊಂಡು ಬಂದಿದೆ. ಏಕೆಂದರೆ ಅವರು ಏನಾದರೂ ಈ ನಾಡಿನ ರೈತರನ್ನು ಉಳಿಸಬಹುದು ಎಂದು. ನಾನು ಏನು ಪ್ರಸ್ತಾಪ ಮಾಡಿದೆ ಎಂದರೆ, ನಮ್ಮಿಂದ ಏನು ಕೊರತೆ ಆಯಿತು ಎಂದು ಪ್ರಸ್ತಾಪ ಆಗಬೇಕಾಗಿದೆ ಎಂದು ಹೇಳಿದೆ. ಅದು ಏನೆಂದರೆ ಕಾವೇರಿ ಜಲಾನಯನ ಪ್ರದೇಶಕ್ಕೆ ಸಂಬಂಧಪಟ್ಟಂತೆ ತಜ್ಞರ ಸಮಿತಿ ಏನು ನೇಮಕ ಮಾಡಿದ್ದಾರೆ, ಮಾನ್ಯ ವಿರೋಧ ಪಕ್ಷದವರೂ ಇದ್ದಂತಹ ತಜ್ಞರ ಸಮಿತಿ ಅದು; ಆ ಸಭೆಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಪ್ರಧಾನ ಮಂತ್ರಿಗಳು ಕರೆದಂತಹ ಫೆಬ್ರವರಿ 17, 1992ರ ಸಭೆಯಲ್ಲಿ ನಮ್ಮ ಸರ್ವಾನುಮತದ ನಿರ್ಣಯದ ವಿರುದ್ಧವಾಗಿ ಸಹಿ ಹಾಕಿ ಏನು ಒಂದು ಅಗ್ರಿಮೆಂಟ್ ಮಾಡಿಕೊಂಡು ಬಂದರು, ಆ ಅಗ್ರಿಮೆಂಟ್ ಅಂದರೆ ಕಾವೇರಿ ಟ್ರಿಬ್ಯೂನಲ್ ಪ್ರೊಸೀಡಿಂಗ್ಸ್ ಮುಂದುವರಿಯಬೇಕು, ಆದಷ್ಟು ಬೇಗ ತೀರ್ಪನ್ನು ಕೊಡಬೇಕು ಎನ್ನುವಂತಹದ್ದು, ಅದರ ಪ್ರತಿಯನ್ನು ವಿರೋಧ ಪಕ್ಷದ ನಾಯಕರಿಗೆ ಸಭೆಯಲ್ಲಿ ಕೊಟ್ಟರು. ಇಲ್ಲಿರುವವರು ಯಾರೂ ತಪ್ಪು ತಿಳಿಯದೇ ಇದ್ದರೆ ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಇರುವಂತಹ ಆ ಸಭೆಯಲ್ಲಿ ಮುಖ್ಯಮಂತ್ರಿಗಳಿಗೆ ಆಗ ನಾನು ಹೇಳಿದೆ, ನೀವು ಅಕ್ಷಮ್ಯ ಅಪರಾಧ ಮಾಡಿದ್ದೀರಿ, ಯಾರನ್ನು ಕೇಳಿ ಅಗ್ರಿಮೆಂಟಿಗೆ ಸಹಿ ಮಾಡಿ ಬಂದಿರಿ ಎನ್ನುವ ಮಾತನ್ನು ಹೇಳಿ ಇದನ್ನು ನಾನು ಒಪ್ಪುವುದಿಲ್ಲ, ಸದನದಲ್ಲಿ ಇದನ್ನು ಪ್ರಸ್ತಾಪ ಮಾಡುತ್ತೇನೆ ಎಂದು ಹೇಳಿ ಕುಳಿತುಕೊಂಡೆ. ಇಲ್ಲಿ ಏನೋ ಕೋರ್ಟ್ ನಿಂದನೆ ಆಗುತ್ತದೆ ಮತ್ತೊಂದು ಆಗುತ್ತದೆ ಎಂದು ಮಾನ್ಯ ನಮ್ಮ ಹಿರಿಯ ಸಚಿವರಾದ ಮೊಯಿಲಿಯವರು ಮಾರ್ಗದರ್ಶನ ಮಾಡಿದ್ದರಿಂದ ನಾನು ಈ ವಿಷಯವನ್ನು ಸಭೆಯಲ್ಲಿ ಪ್ರಸ್ತಾಪ ಮಾಡುತ್ತೇನೆ. ಈ ಸಭೆಯಲ್ಲಿ ಸುಮಾರು ಮುಕ್ಕಾಲು ಗಂಟೆಗಳ ಕಾಲ ಚರ್ಚೆ ಮಾಡಿ ಆಯಿತು. ಮಾನ್ಯ ಹಿರಿಯ ಸದಸ್ಯರಾದ ಶ್ರೀಮಾನ್ ರಂಗನಾಥ್ ಅವರು ಸಹ ಮಧ್ಯೆ ಪ್ರವೇಶ ಮಾಡಿದರು. ಈಗಲಾದರೂ ಸರ್ಕಾರ ಹೇಳಿಕೆ ನೀಡಲಿ.

ಫೆಬ್ರವರಿ 17, 1992ರಲ್ಲಿ ಏನು ಒಂದು ಸಹಿ ಹಾಕಿ ಅಗ್ರಿಮೆಂಟ್ ಮಾಡಿಕೊಂಡು ಬಂದಿರಿ, ಅದನ್ನು ನೀವು ಏನಾದರೂ ಕರೆಯಿರಿ. ಅದರ ಪ್ರತಿಯನ್ನು ಕೊಟ್ಟವರು ಮಾನ್ಯ ಮುಖ್ಯಮಂತ್ರಿಗಳು. ಆ ಸಮಯದಲ್ಲಿ ನಾವು ಸರ್ಕಾರದ ಬಗ್ಗೆ ವಿಶ್ವಾಸ, ನಂಬಿಕೆ ಇಟ್ಟುಕೊಂಡಿದ್ದೆವು. ಈ ಅಗ್ರಿಮೆಂಟಿಗೆ ಸಹಿ ಹಾಕಿದ ಪ್ರತಿಯನ್ನು ಕೊಟ್ಟ ಸಂದರ್ಭದಲ್ಲಿ ನಾವು ಅಲ್ಲೇ ಪ್ರತಿಭಟನೆ ಮಾಡಿದ್ದರೆ, ಅದರ ನೇತೃತ್ವ ವಹಿಸಿದ್ದರೆ ಅಥವಾ ಸರಿಯಾದ ರೀತಿಯಲ್ಲಿ ವರ್ತನೆ ಮಾಡುತ್ತಿದ್ದರೆ ಇವತ್ತು ಈ ಮಟ್ಟಕ್ಕೆ, ಈ ಘಟ್ಟಕ್ಕೆ ಪರಿಸ್ಥಿತಿ ಬರುತ್ತಾ ಇರಲಿಲ್ಲ. ಅದರಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ವಿಫಲರಾದರು. ಅದು ಪ್ರಸ್ತಾಪ ಆಗಬೇಕಾಗಿದೆ ಎನ್ನುವ ಮಾತನ್ನು ಹೇಳಿದನೇ ಹೊರತು ಹಿಂದಿನ ಯಾವುದೇ ಸಂದರ್ಭದಲ್ಲಿ ಅವರು ಭಾಗವಹಿಸಲಿಲ್ಲ ಎಂದು ಹೇಳಿಲ್ಲ. ತಪ್ಪು ಆಗಿದೆ, ಆ ತಪ್ಪಿನ ಅರಿವು ಆಗಿದೆ. ಅದಕ್ಕೆ ಇನ್ನು ಮುಂದೆ ರಾಜ್ಯದ ಜನರ ಹಿತದೃಷ್ಟಿಯಿಂದ ಈ ರೀತಿ ಪ್ರಮುಖವಾದ ಸಮಸ್ಯೆಗಳ ಬಗ್ಗೆ ನಾವು ಏನೋ ಒಳ್ಳೆಯದನ್ನು ಮಾಡಬಹುದೆಂದು ಮಾಡಿದರೆ, ನಂಬಿಕೆ ಹೋಗುತ್ತದೆ. ಅದನ್ನು ಕೈಬಿಡುವಂತಹ ಒಂದು ನಿರ್ಣಯವನ್ನು ನಾವು ಸೇರಿ ಮಾಡಿದರೆ ಹೊಸ ದಿಕ್ಕಿನಲ್ಲಿ ಹೋಗಬಹುದು, ಅಷ್ಟು ಮಾತನ್ನು ಮಾತ್ರ ಹೇಳುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ : ನಾನು ಏನು ವಿಷಯ ಹೇಳುತ್ತೇನೆ ಎಂದರೆ .... I will complete..

ಚೇರ್ಮನ್ : ನೀವು ನೀವೇ ವಾದಕ್ಕೆ ಇಳಿದರೆ ಹೇಗೆ ?

ಶ್ರೀ ಡಿ. ಬಿ. ಚಂದ್ರೇಗೌಡ : ಶಾಸನಸಭೆಯಲ್ಲಿ ಮಾಡಿದಂತಹ Ordinance No : Law/46/NNG/91 Bangalore, dated 8th November 1991 ಕರ್ನಾಟಕ ಕಾವೇರಿ ಜಲಾನಯನ ಪ್ರದೇಶದ ನೀರಾವರಿ ಸಂರಕ್ಷಣಾ ಅಧಿನಿಯಮ 1989 ಶಾಸನ ಜಾರಿಯಲ್ಲಿ ಇದೆಯೋ ಅಥವಾ ಇಲ್ಲವೋ ? ಸರ್ವೋಚ್ಚ ನ್ಯಾಯಾಲಯ ಆರ್ಟಿಕಲ್ 143ರಲ್ಲಿ ರೆಫರೆನ್ಸ್ ಮಾಡಿದ್ದಾರೆ. ಅದರಲ್ಲಿ ಅಭಿಪ್ರಾಯ ವ್ಯಕ್ತಮಾಡಿದ್ದಾರೆ. ಆದರೆ ಈ ಶಾಸನ ಇನ್ನೂ ಜಾರಿಯಲ್ಲಿ ಇದೆ ಎಂದು ನಾನು ತಿಳಿದಿದ್ದೇನೆ. This is the law of the land. Why you have let out water in violation of this law ? That's all my question.

ಶ್ರೀ ಕಾಗೋಡು ತಿಮ್ಮಪ್ಪ : ಹೈಕೋರ್ಟ್ ಅದನ್ನು ಸ್ಟ್ರಕ್ ಡೌನ್ ಮಾಡಬೇಕು. ಸ್ಟ್ರಕ್‌ಡೌನ್ ಮಾಡಲಿಲ್ಲ. ಅಪೀಲ್ ಆಗಲಿಲ್ಲ. ಅದರ ಅರ್ಥ ಏನು ?

Sri D.B. Chandre Gowda : That's the law of the land.

ಶ್ರೀ ವಾಟಾಳ್ ನಾಗರಾಜ್ : ನಾವು ಮಾನ್ಯ ಮುಖ್ಯಮಂತ್ರಿಗಳ ಮೇಲೆ ಹಕ್ಕುಚ್ಯುತಿ ನಿರ್ಣಯ ತಂದಿರತಕ್ಕದ್ದು ಬಹಳ ಗಂಭೀರವಾದ ಪ್ರಶ್ನೆ. ಕರ್ನಾಟಕದ ಶಾಸನಸಭೆ ಇತಿಹಾಸದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಮೇಲೆ ಹಕ್ಕು ಚ್ಯುತಿ ತಂದಿರುವುದು ಇದೇ ಪ್ರಥಮಬಾರಿ ಏನೋ ? ನಾನು 1967ರಿಂದ ಇಲ್ಲಿ ಇದ್ದೇನೆ. 1967ರಿಂದ ಇಲ್ಲಿಯವರೆಗೆ ನೋಡಿದಾಗ ಯಾವ ಮುಖ್ಯಮಂತ್ರಿಗಳ ಮೇಲೂ ಹಕ್ಕುಚ್ಯುತಿ ತಂದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮೋಹನ್ ಮಕೆನ್ಸ್ ಬಗ್ಗೆ ವಿವರ ಕೊಡಬೇಕಾದರೆ ಎಲ್ಲ ದಾಖಲೆ ಸಹಿತ ಹಕ್ಕುಚ್ಯುತಿ ಆಗಿದೆ ಎಂದು ಮಂಡನೆ ಮಾಡಿದ್ದೆ. ಹಕ್ಕುಚ್ಯುತಿ ಬಗ್ಗೆ ಹುಡುಕಿಕೊಂಡು ಹೋದರೆ ನೂರಾರು ಇವೆ. ನಾವು ಮಂಡನೆ ಮಾಡಿಲ್ಲ ಅಷ್ಟೇ. ಈಗ ಹಕ್ಕುಚ್ಯುತಿ ಬಗ್ಗೆ ಬಹಳ ಪ್ರಾಮುಖ್ಯವಾದುದು ಸಿಕ್ಕಿದೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) ;– ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಏನು ನಿರ್ಣಯ ಆಯಿತು, ಆ ನಿರ್ಣಯದ ವಿರುದ್ಧ ಮಾನ್ಯ ಮುಖ್ಯಮಂತ್ರಿಗಳು ಯಾವ ರೀತಿ ಹೋಗಿದ್ದಾರೆ, ಅದು ಬಹಳ ಪ್ರಮುಖವಾದ ಪ್ರಶ್ನೆ. "ಕಾವೇರಿ ಜಲ ವಿವಾದದ ಬಗ್ಗೆ ಕಾವೇರಿ ನ್ಯಾಯಾಧಿಕರಣ ನೀಡಿರುವ ಮಧ್ಯಂತರ ಆಜ್ಞೆ ಕರ್ನಾಟಕ ರಾಜ್ಯದ ಹಿತಕ್ಕೆ ಮಾರಕ ಆಗಿರುವುದರಿಂದ ಮತ್ತು ಟ್ರಿಬ್ಯುನಲ್ ಕಾರ್ಯವ್ಯಾಪ್ತಿಗೆ ಹೊರತಾಗಿದ್ದು ಕಾನೂನು, ವಾಸ್ತವಿಕತೆ, ವ್ಯವಹಾರಿಕತೆಗೆ ಬಹಳ ದೂರ ಆಗಿರುವುದರಿಂದ ಈ ಸಭೆಯು ಮಧ್ಯಂತರ ಆಜ್ಞೆಯನ್ನು ತಿರಸ್ಕರಿಸಬೇಕೆಂದು ಸರ್ವಾನುಮತದಿಂದ ಸರ್ಕಾರವನ್ನು ಒತ್ತಾಯಪಡಿಸುತ್ತದೆ ಎಂದು ನಿರ್ಣಯಿಸಿದೆ. ಮಾನ್ಯ ಮೊಯ್ಲಿಯವರು ಈ ನಿರ್ಣಯದ

ಬಗ್ಗೆ ತಾವು ಸ್ವಲ್ಪ ಗಮನ ಕೊಡಿ. ಮಾನ್ಯ ಕಾಗೋಡು ತಿಮ್ಮಪ್ಪನವರನ್ನು ಸಭೆಯ ಪರವಾಗಿ ನಾನು ಪ್ರಾರ್ಥಿಸುತ್ತೇನೆ. ಹತ್ತು ನಿಮಿಷ ದೇವರ ಹಾಗೆ ತಾವು ಕುಳಿತುಕೊಳ್ಳಿ. ನಾನು ಮಾತನಾಡುವವರೆಗೆ ಹತ್ತು ನಿಮಿಷಗಳ ಕಾಲ ವಿರೋಧ ಪಕ್ಷದವರ ಪಾತ್ರ ವಹಿಸಬೇಕು. ಏಕೆಂದರೆ ನಾನು ನಿಮ್ಮ ಜೊತೆ ಇದ್ದವನು. ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಜಲ ನೀತಿಯನ್ನು ರೂಪಿಸಿ, ಅಂತರರಾಜ್ಯ ಜಲ ವಿವಾದ 1956ರ ಮೂಲಕ ಶಾಸನಕ್ಕೆ ತಿದ್ದುಪಡಿ ಆಗುವವರೆಗೆ ಮತ್ತು ನ್ಯಾಯಾಧಿಕರಣಕ್ಕೆ ಸ್ಪಷ್ಟ ಮಾರ್ಗ ಸೂಚಿ ಒದಗಿಸುವವರೆಗೆ ಕಾವೇರಿ ಜಲ ವಿವಾದಕ್ಕೆ ಸಂಬಂಧಪಟ್ಟ ಹಾಗೆ ರಾಜ್ಯಕ್ಕೆ ಆಗಿರುವ ಕಾವೇರಿ ನ್ಯಾಯಾಧಿಕರಣದ ಎಲ್ಲ ಕಾರ್ಯ ಕಲಾಪಗಳನ್ನು ಸ್ಥಗಿತಗೊಳಿಸುವಂತೆ ಈ ಸಭೆಯು ಸರ್ವಾನುಮತದಿಂದ ಒತ್ತಾಯಪಡಿಸುತ್ತದೆ. ಈ ಮಾತನ್ನು, ಈ ನಿರ್ಣಯವನ್ನು ನಾವು ನೀವು ಒಪ್ಪಿಕೊಂಡಿಕೆ ನ್ಯಾಯ ಮಂಡಲಿಯ ಮುಂದೆ ನಮ್ಮ ಮುಖ ಸಹ ತೋರಿಸುವ ಹಾಗೆ ಇಲ್ಲ. ಇವತ್ತು ಏನು ಆಗಿದೆ, ಎಲ್ಲಿ ಹಕ್ಕುಚ್ಯುತಿ ಆಗಿದೆ ಎನ್ನುವುದನ್ನು ನಾವು ಹೇಳುತ್ತಿದ್ದೇವೆ. ಇದು ಎರಡೂ ಸದನಗಳ ನಿರ್ಣಯ. ಈ ಸರ್ವಾನುಮತದ ನಿರ್ಣಯವನ್ನು ನಾವೆಲ್ಲ ವಿರೋಧ ಪಕ್ಷ ಮುಖಂಡರ ಮುಖಾಂತರ ತಂದದ್ದು. ಈ ಸರ್ವಾನುಮತದ ನಿರ್ಣಯಕ್ಕೆ ಈ ಸದನದ ಮಾನ್ಯ ನಾಯಕರಾದ ಮಾನ್ಯ ಬಂಗಾರಪ್ಪನವರು ಮತ್ತು ಅವರ ಮಂತ್ರಿ ಮಂಡಲ ಮತ್ತು ಇಡೀ ಸದನ ಬದ್ಧವಾಗಿರತಕ್ಕದ್ದು. ಈ ನಿರ್ಣಯಕ್ಕೆ ಬದ್ಧವಾಗಿದ್ದರೆ ನಾವು ನ್ಯಾಯ ಮಂಡಲಿಯ ಮುಂದೆ ಯಾವ ಒಂದು ಸಣ್ಣ ಕಲಾಪಕ್ಕೂ ಹೋಗಬಾರದು. ಇದು ಒಂದುಕಡೆ ನಿರ್ಣಯ. ಮತ್ತೊಂದು ಕಡೆ ನ್ಯಾಯಾಧೀಕರಣದ ಮುಂದೆ ಪುನರ್‌ಪರಿಶೀಲನಾ ಅರ್ಜಿಯನ್ನು ಈ ನಿರ್ಣಯಕ್ಕೆ ವಿರುದ್ಧವಾಗಿ ಏನು ಹಾಕಿದ್ದೀರಿ, ಆ ಬಗ್ಗೆ ಒಂದೇ ಒಂದು ಮಾತು ಹೇಳುತ್ತೇನೆ. ಸುತ್ತಿ ಬಳಸಿ ಹೇಳುವುದಿಲ್ಲ. ಇದರ ವಿರುದ್ಧ ಮತ್ತೆ ಏನಾದರೂ ಈ ಸದನದಲ್ಲಿ ಎಲ್ಲರ ಅಪ್ಪಣೆ ಪಡೆದು ನಿರ್ಣಯವನ್ನು ಮಾಡಿ, ನ್ಯಾಯಾಧೀಕರಣದ ಮುಂದೆ ಹೋಗಬೇಕು. ಎಂದು ಎಲ್ಲಾದರೂ ಕೇಳಿದಿರಾ? ನೀವು ಕೇಳಲಿಲ್ಲ.

ಶ್ರೀ ಕಾಗೋಡು ತಿಮಪ್ಪ: ಈ ನಿರ್ಣಯದ ವಿರುದ್ಧ ಸರ್ಕಾರ ಕೆಲಸ ಮಾಡಿದೆ ಅಂತ ಅವರ ವಾದ ಇದೆ. ಮೊದಲನೆಯದು, ಮಧ್ಯಂತರ ತೀರ್ಮಾನವನ್ನು ಸದನ ತಿರಸ್ಕರಿಸಿದೆ ಅಂತ ಆಗಿದೆ. ಎರಡನೆಯದು ಓದಿ ಹೇಳಿದ್ದರಲ್ಲಿ ಟ್ರಿಬ್ಯುನಲ್ ಮುಂದೆ ಸರ್ಕಾರದವರು ಹಾಜರಾಗಕೂಡದು ಯಾವ ಅರ್ಜಿನೂ ಹಾಕಬಾರದು ಅಂತ ಬರೆದಿದೆಯಾ?

ಶ್ರೀ ಪಾಟೀಲ್ ನಾಗರಾಜ್: ಇವರು ಒಳ್ಳೆಯ ಲಾಯರ್ ಒಪ್ತೇನೆ ನಾನು. ಆದರೆ ಇವರು ಎರಡೂ ಕಡೆ ವಾಸ ಮಾಡ್ತಾರೆ, ಕೊಲೆ ಮಾಡಿದವನ ಪರವಾಗಿ ಮತ್ತು ಬಿಡಿಸೋಕೂ ವಾದ ಮಾಡ್ತಾರೆ. ತಾವು ಕ್ಷಮೆಯಬಿಟ್ಟೆ ಹೇಳಿ ಇದರ ಅರ್ಥ ಏನು ? ಇನ್ನೊಂದು ಸಲ ಓದುತ್ತೇನೆ ; ಕೇಳಿ : "ಕಾವೇರಿ ಜಲವಿವಾದದ ಬಗ್ಗೆ ಕಾವೇರಿ ನ್ಯಾಯಾಧಿಕರಣ ನೀಡಿರುವ ಮಧ್ಯಂತರ ಆಜ್ಞೆ ಕರ್ನಾಟಕ ರಾಜ್ಯದ ಹಿತಕ್ಕೆ ಮಾರಕ ಆಗಿರುವುದರಿಂದ ಮತ್ತು ಟ್ರಿಬ್ಯುನಲ್ ಕಾರ್ಯವ್ಯಾಪ್ತಿಗೆ ಹೊರತಾಗಿದ್ದು ಕಾನೂನು, ವಾಸ್ತವಿಕತೆ ಮತ್ತು ವ್ಯವಹಾರಿಕತೆಗೆ ಬಹಳ ದೂರವಾಗಿರುವುದರಿಂದ ಈ ಸಭೆಯು ಮಧ್ಯಂತರ ಆಜ್ಞೆಯನ್ನು ತಿರಸ್ಕರಿಸಬೇಕೆಂದು ಸರ್ವಾನುಮತದಿಂದ ಸರ್ಕಾರವನ್ನು ಒತ್ತಾಯಪಡಿಸುತ್ತದೆ." ಎಂದಿದೆ. ಹೌದಾ ಸ್ವಾಮಿ, ಹಾಗಂತ ಕೇಂದ್ರಸರ್ಕಾರಕ್ಕೆ ಹೇಳಿ ಈ ಸರ್ಕಾರಾನೇ ಟ್ರಿಬ್ಯುನಲ್ ಕಾರ್ಯಕಲಾಪದಲ್ಲಿ ಭಾಗವಹಿಸುತ್ತದೆ. ಇದು ಥ್ಯಾಗೇಂತ. ಇನ್ನೊಂದು ಸಲ, ಸ್ವಾಮಿ, ಈ ಹಿನ್ನೆಲೆಯಲ್ಲಿ ನಾವು ಈ ನ್ಯಾಯಾಧಿಕರಣದಿಂದ ನಮಗೆ ಬಹಳ ಅನ್ಯಾಯವಾಗಿದೆ ಎಂದು ಇಷ್ಟೆಲ್ಲ ಹೇಳುತ್ತಿದ್ದೇವೆ. ಯಾರು ಹೇಳ್ತಾ ಇರೋದು ನಾವು, ಈಸಭೆ ಹೇಳ್ತಾ ಇರೋದು. ಈ ಹಿನ್ನೆಲೆಯಲ್ಲಿ ಅಂದರೆ ಏನೇನು ಅನ್ಯಾಯ ನಡೆದಿದೆ ಆದರ ಹಿನ್ನೆಲೆಯಲ್ಲಿ ಅಂತ, ಹೀಗಿದ್ದೂ ನೀವು ಹೀಗೆ ಮಾತಾಡಿದರೆ ಹೇಗೆ, ಇದು "ಕೋಣನ ಮುಂದೆ ಕಿನ್ನರಿ ಬಾರಿಸಿದ ಹಾಗೆ" ಆಗುತ್ತದೆ. ಸ್ವಾಮಿ ತಿಮ್ಮಪ್ಪನವರೇ, ಈ ಹಿನ್ನೆಲೆ ಎಂದರೆ ಯಾವುದು ? ಮಾರಕವಾಗಿರುವುದು, ಅನ್ಯಾಯವಾಗಿರುವುದು ಹಾಗೂ ನಮಗೆ ತೊಂದರೆಯಾಗಿರುವುದು ಇವೇ ತಾನೇ ಹಿನ್ನೆಲೆ? ಈ ಹಿನ್ನೆಲೆ ಪ್ರಕಾರ ಜಲನೀತಿಯನ್ನು ರೂಪಿಸಿ ಅಂತರರಾಜ್ಯ ಜಲವಿವಾದ 1956ರ ಶಾಸನಕ್ಕೆ ತಕ್ಕ ತಿದ್ದುಪಡಿ ಆಗುವವರೆಗೆ ಮತ್ತು ನ್ಯಾಯಾಧೀಕರಣದ ಬಗ್ಗೆ ಸ್ಪಷ್ಟ ಮಾರ್ಗಸೂಚಿ ಬರುವವರೆಗೆ ಕಾವೇರಿ ಜಲವಿವಾದಕ್ಕೆ

ಸಂಬಂಧಪಟ್ಟ ಹಾಗೆ ರಚಿತವಾಗಿರುವ ಕಾವೇರಿ ನ್ಯಾಯಾಧಿಕರಣದ ಸರ್ವಾನುಮತದಿಂದ ಒತ್ತಾಯಪಡಿಸುತ್ತದೆಂಬ ನಿರ್ಣಯ ಮಾಡಿ ಮತ್ತೊಂದು ಕಡೆ ಅದಕ್ಕೆ ವಿರುದ್ಧವಾಗಿ ನೀವು ನ್ಯಾಯಮಂಡಲಿ ಮುಂದೆ ಪುನರ್‌ಪರಿಶೀಲನಾ ಅರ್ಜಿ ಹಾಕಿರುವುದದು ಏನಿದೆ ಅದು ಈ ಸದನದ ಹಕ್ಕಿಗೆ . . . .

ಶ್ರೀ ಕಾಗೋಡು ತಿಮ್ಮಪ್ಪ : ಅಧ್ಯಕ್ಷರೇ, ಶ್ರೀ ವಾಟಾಳ್ ನಾಗರಾಜ್‌ರವರು ಹಿರಿಯ ಸದಸ್ಯರಾಗಿ ಅವರೇ ತಪ್ಪು ಅಭಿಪ್ರಾಯವನ್ನು ಸದನಕ್ಕೆ ಕೊಡಬಾರದು. ಅದಕ್ಕೇ ಎರಡನೇ ಸಾರಿ ಅವರ ಬಾಯಿಂದಲೇ ಆ ನಿರ್ಣಯವನ್ನು ಓದಿಸಿದ್ದೇನೆ. ನಾವು ತಂದಿರುವ ಒತ್ತಾಯ ಕೇಂದ್ರಸರ್ಕಾರದ ಮೇಲೆ, ಆ ನಿರ್ಣಯದಲ್ಲಿ ಎಲ್ಲಾದರೂ ರಾಜ್ಯಸರ್ಕಾರ ಟ್ರಿಬ್ಯೂನಲ್ ಮುಂದೆ ಹಾಜರಾಗಬಾರದು ಮತ್ತು ಕೇಸಿನಲ್ಲಿ ವಾದ ಮಾಡಬಾರದು ಅಂತ ಇದ್ದರೆ ಅವಾಗ ನೀವು ಹೇಳೋ ವಾದಕ್ಕೆ ಪುಷ್ಠಿ ಬರತ್ತಾ ಇತ್ತು, ಆದರೆ ಅದಿಲ್ಲ, ಕೇವಲ ಕೇಂದ್ರಸರ್ಕಾರವನ್ನು ಮುಂದಿನ ಕಲಾಪಗಳನ್ನು ಸ್ಥಗಿತಗೊಳಿಸಬೇಕೆಂದು ನಾವು ಒತ್ತಾಯ ಮಾಡಿದ್ದೇವಷ್ಟೆ ;

ಶ್ರೀ ವಾಟಾಳ್ ನಾಗರಾಜ್ : ಈಗ ಮಗಳ ಗಂಡ ಅಂದರೆ ಅಳಿಯ ತಾನೇ. ಅಳಿಯ ಅಲ್ಲ ಮಗಳ ಗಂಡ ಅಂತ ತಿರುಗಿತಿರುಗಿ ಹೇಳಿದರೆ ಹೇಗೆ? ತಿಮ್ಮಪ್ಪನವರೇ, ಇದರರ್ಥವೇ ನಮಗೆ ಮಹಾ ಮೋಸಲಾಗಿದೆ, ಆದ್ದರಿಂದ ಈ ಟ್ರಿಬ್ಯೂನಲ್ ಏನು ಮಾಡಿದೆ ಅಂತ ಹೇಳ್ತಾ ಇದ್ದೆ

ಶ್ರೀ ಬಿ. ಹೆಚ್ ಬನ್ನಿಕೋಡ್ : ನಾಗರಾಜ್‌ರವರೇ, ನೀವು ಕಾಗೋಡು ತಿಮ್ಮಪ್ಪನವರು ಒಳ್ಳೆಯ ಲಾಯರ್ ಅಂತ ಹೇಳ್ತಾ ಇದ್ರಲ್ಲ, ಅವರು ಈಗ ತಿರುಪತಿ ತಿಮ್ಮಪ್ಪನಾಗಿ ಈ ಸರ್ಕಾರವನ್ನು ರಕ್ಷಣೆ ಮಾಡೋಕೆ ಹೊರಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈ ವಿರ್ಣಯವನ್ನು ತಾವು ಗಂಭೀರವಾಗಿ ಪರಿಗಣಿಸುವುದಾದರೆ ಈ ಹಕ್ಕುಚ್ಯುತಿ ನಿರ್ಣಯವನ್ನು ತಾವು ಒಪ್ಪಬೇಕಾಗುತ್ತದೆ. ಮತ್ತು ಇದನ್ನು ಹಕ್ಕುಚ್ಯುತಿ ಸಮಿತಿಗೆ ಕಳುಹಿಸಬೇಕಾಗುತ್ತದೆ. ಅಂತಿಮವಾಗಿ ಮಾನ್ಯ ಮುಖ್ಯಮಂತ್ರಿಗಳು ಈ ಸದನಕ್ಕೆ ಮಾಡಿರತಕ್ಕಂಥ ಹಕ್ಕಿನ ಲೋಪದ ಬಗ್ಗೆ ನಿಮಗೆ ಏನು ತೋರುತ್ತದೋ ಅದನ್ನು ಮಾಡುವುದಕ್ಕೆ ನಿಮಗೆ ಪರಮಾಧಿಕಾರವಿದೆ. ಅದುದರಿಂದ ದಯಮಾಡಿ ಇದನ್ನು ಹಕ್ಕುಚ್ಯುತಿ ಸಮಿತಿಗೆ ಕಳುಹಿಸಬೇಕು. ಇದರಲ್ಲಿ ಬೇರೆ ಮಾರ್ಗ ಇಲ್ಲವೇ ಇಲ್ಲ . ಇದನ್ನು ಹಕ್ಕುಚ್ಯುತಿಗೆ ಕಳುಹಿಸಿ ಎಂದು ಬೆಳಿಗ್ಗೆಯಿಂದ ಸಂಜೆಯವರೆಗೂ ನಾವು ಹೇಳುತ್ತೇವೆ. ಇದಕ್ಕೆ ಒಪ್ಪದಿದ್ದರೆ ರಾತ್ರಿಯೆಲ್ಲಾ ರಾಮಾಯಣ ಕೇಳಿ ಬೆಳಿಗ್ಗೆ ರಾಮನಿಗೂ ಸೀತೆಗೂ ಏನಾಯಿತು ಎಂದು ಕೇಳುವ ಪರಿಸ್ಥಿತಿ ಬರುತ್ತದೆ ಹಾಗೂ ಸುಮ್ಮನೆ ಒಂದು ದಿನವೆಲ್ಲಾ ನಾವು ಕುಳಿತುಕೊಂಡು ಇದರ ಬಗ್ಗೆ ಚರ್ಚೆ ಮಾಡಿದ್ದು ವ್ಯರ್ಥವಾಗುತ್ತದೆ. ಆದ್ದರಿಂದ ಕೊನೆಗೂ ನಿಮ್ಮ ತೀರ್ಪು ಹಕ್ಕುಚ್ಯುತಿ ಸಮಿತಿಗೆ ಇದನ್ನು ನೀವು ಕಳುಹಿಸುತ್ತೀರಿ ಎಂದು ನಾನು ಅಂದುಕೊಂಡಿದ್ದೇನೆ. ಮುಂದೆ ಯಾವ ತರಹ ತೀರ್ಪು ಬರುತ್ತದೋ, ಆ ನಿಮ್ಮ ತೀರ್ಪಿನ ಪ್ರಕಾರ ನಾವು ಒಪ್ಪುತ್ತೇವೆ. ನಾವೇನು ಅದರ ಬಗ್ಗೆ ವಿರೋಧವನ್ನು ಮಾಡುತ್ತೇವೆ ಎನ್ನತಕ್ಕಂಥ ಪ್ರಶ್ನೆ ನನಗಂತೂ ಇಲ್ಲ. ಇದು ಸ್ಪಷ್ಟವಾಗಿ ಹಕ್ಕುಚ್ಯುತಿಯಾಗಿದೆ. ಇದರಲ್ಲೇನು ಎರಡನೇ ಅಭಿಪ್ರಾಯವಿಲ್ಲ. ಮತ್ತೆ ಕಾವೇರಿ ಕೃಷ್ಣ ಸಮನ್ವಯ ಸಮಿತಿ ಎನ್ನದೆ ನಾವು ಬರೀ ಕಾವೇರಿ ಸಮನ್ವಯ ಸಮಿತಿ ಎಂದು ಮಾಡಿದ್ದೇವೆ. ಅದರ ಉದ್ದೇಶ ಕೃಷ್ಣ ಬಿಟ್ಟುಬಿಟ್ಟು ಕಾವೇರಿ ಒಂದನ್ನೇ ಹಿಡಿದುಕೊಳ್ಳಬೇಕು ಎನ್ನತಕ್ಕಂಥದ್ದಲ್ಲ. ಸಮಗ್ರ ಕರ್ನಾಟಕದ ಎಲ್ಲಾ ಜನರ ಎಲ್ಲಾ ಜಿಲ್ಲೆಯ ಎಲ್ಲಾ ಕ್ಷೇತ್ರದ ಎಲ್ಲರನ್ನೂ ಸೇರಿಸತಕ್ಕಂಥ ಒಂದು ಒಕ್ಕೂಟದ ಸಂಸ್ಥೆ ನಮ್ಮದು. ಅದಕ್ಕೆ ಮೊನ್ನೆ ನಾವು ಸಮನ್ವಯ ಸಮಿತಿಯಲ್ಲಿ ಮಾನ್ಯ ಚಂದ್ರೇಗೌಡರು, ನಂಜೇಗೌಡರು ಹಾಗೂ ಇನ್ನಿತರ ಅನೇಕ ಸದಸ್ಯರು ಸೇರಿ ಇದರ ಅಧ್ಯಕ್ಷರಿಗೆ ಮನವಿಯನ್ನು ಕೊಡುವಾಗ ಕಾವೇರಿ ಕೃಷ್ಣ ಸಮನ್ವಯ ಸಮಿತಿ ಎಂತಲೇ ಮಾಡಿ, ಅದರಲ್ಲೇನು ತಪ್ಪು ಇಲ್ಲ ಎನ್ನತಕ್ಕಂಥ ಮಾತನ್ನು ಹೇಳಿದ್ದೇವೆ.

ಶ್ರೀ ಎಸ್.ಹೆಚ್. ಕೌಜಲಗಿ : ಅವತ್ತಿನ ದಿವಸ ನಾನು ಸಮಿತಿಯಲ್ಲಿ ಪ್ರಪೋಸ್ ಮಾಡಿದೆ ಆಗ ಅದನ್ನು ಎಲ್ಲರೂ ಆಪೋಸ್ ಮಾಡಿದರು. ಅಲ್ಲಿ ಕುಳಿತಿರತಕ್ಕಂಥ ಸದಸ್ಯರುಗಳು ಇವತ್ತಿನ ದಿವಸ ಕಾವೇರಿ ಇದೆ, ಕೃಷ್ಣ ಎಂದು ಇಲ್ಲ, ಕೃಷ್ಣ ಬೇಡ ಎಂದು ಹೇಳಿ ಅವರೆಲ್ಲರೂ ಅಪೋಸ್ ಮಾಡಿದರು.

ಶ್ರೀ ಬಿ.ಹೆಚ್. ಬನ್ನಿಕೋಡ್ : ಏಕೆಂದರೆ ಈಗ ಏನು ಕಾವೇರಿ ಕಣ್ಣೀರು ಸುರಿಸತಕ್ಕಂಥ ಪರಿಸ್ಥಿತಿ ಬಂತಲ್ಲ, ಕೃಷ್ಣದವರಿಗೆ ಎರಡು ಸಾವಿರದ ಇಸವಿಯವರೆಗೆ ಅದು ಬಂದ ನಂತರ ಸಮನ್ವಯ ಸಮಿತಿ ಮಾಡಬೇಕು ಎನ್ನತಕ್ಕಂಥ ಅಭಿಪ್ರಾಯ ಇರಬೇಕು ಅಷ್ಟೆ.

ಶ್ರೀ ವಾಟಾಳ್ ನಾಗರಾಜ್ : ನಾನು ಹೇಳುತ್ತಿದ್ದೇನೆ, ಯಾರೂ ಇದಕ್ಕೆ ವಿರೋಧ ಮಾಡಲಿಲ್ಲ. ನಾವೆಲ್ಲಾ ಸಭೆಯಲ್ಲಿ ಇದ್ದೆವು. ವಿರೋಧ ಏನೂ ಇಲ್ಲ. ಅದು ಒಂದು ಬಹಳ ಮಹತ್ತರವಾದ ಸಭೆ. ಈ ರಾಜ್ಯದಲ್ಲಿ ರಾಜ್ಯದ ಸಮಗ್ರ ಕಾವೇರಿ ಮತ್ತು ಕೃಷ್ಣದ ಬಗ್ಗ ಚಿಂತನೆಯನ್ನು ಮಾಡತಕ್ಕಂಥ ಒಂದು ಮಹತ್ತರವಾದ ಸಭೆ. ಅದು ಒಂದು ವೇದಿಕೆ. ಆ ವೇದಿಕೆಗೆ ಕಾವೇರಿ, ಕೃಷ್ಣ ಸಮನ್ವಯ ಸಮಿತಿ ಎಂದು ಮಾಡಬೇಕು ಎಂದು ನಿರ್ಧಾರವಾಗಿದೆ. ಆದರಲ್ಲೇನೂ ಇಲ್ಲ. ಕಾವೇರಿ ಬಗ್ಗೆ ಕಾವೇರಿ ಕನ್ನಡಿಗರ ಕಣ್ಣೀರಿನ ಕಥೆಯಾಗಿದೆ. ಇದು ಸುಮಾರು ಒಂದೇ ಸಮನೆ ನಡೆದು ಬರುತ್ತಿದೆ. ಈ ಸದನದಲ್ಲಿ ನಾನು ನ್ಯಾಯಮಂಡಳಿ ಸಂಪೂರ್ಣವಾಗಿ ಆದರ ರಚನೆಯೇ ಬೇಡ ಎಂದು ಹೇಳಿ ಮೊದಲಿನಿಂದಲೂ ಒತ್ತಾಯ ಮಾಡಿಕೊಂಡು ಬಂದವನು. ಸುಮಾರಾಗಿ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದ್ದಾಗಲೂ ಸಹಾ ನಾನೊಬ್ಬನೇ ಹೇಳಿದ್ದೇನೆ. ಚಂದ್ರೇಗೌಡರು ಮಾಡಿದ್ದಾರೆ, ಎಲ್ಲರೂ ಕೂಡ ಮಾಡಿದ್ದಾರೆ, ಇದು ಆಗಿದೆ. ಕಾಗೋಡು ತಿಮ್ಮಪ್ಪನವರ ಬಗ್ಗೆ ನನಗನ್ನಿಸುತ್ತದೆ, ನಿಮ್ಮ ಕಾಟ ತಪ್ಪಿಸಿಕೊಳ್ಳಬೇಕಾದರೆ ಮುಖ್ಯಮಂತ್ರಿಗಳಿಗೆ ನಾವೆಲ್ಲಾ ಸೇರಿ ಹೇಳೋಣ. ಅವರಿಗೆ ಕ್ಯಾಬಿನೆಟ್‌ನಲ್ಲಿ ಜಾಗ ಕೊಟ್ಟು ಬಿಡಿ ಎಂದು ಹೇಳೋಣ. ಏಕೆಂದರೆ ಆಗ ಗಂಭೀರವಾಗಿರುತ್ತದೆ, ಇಲ್ಲದಿದ್ದರೆ ಬಹಳ ಕಷ್ಟ. ಒಂದು ದಿನಕ್ಕೆ ಇಷ್ಟು ಕಷ್ಟ ಕೊಟ್ಟರೆ ಹೇಗೆ?

ಶ್ರೀ ಬಿ.ಹೆಚ್. ಬನ್ನಿಕೋಡ್ : ಅವರು ಸರ್ಕಾರದ ಪರವಾಗಿ ವಕಾಲತ್ತು ಮಾಡುತ್ತಿದ್ದಾರೆ. ಏನಾದರೂ ವ್ಯವಸ್ಥೆಯಾದರೆ ಒಳ್ಳೆಯದು.

ಶ್ರೀ ವಾಟಾಳ್ ನಾಗರಾಜ್ : ಮುಖ್ಯಮಂತ್ರಿಗಳು ಒಂದು ಸುಗ್ರೀವಾಜ್ಞೆ ತರುವವರೆಗೂ ಅವರ ಕಾರ್ಯಕ್ರಮದ ಬಗ್ಗೆ ನಮಗೆ ಬಹಳ ನಂಬಿಕೆ ಇತ್ತು. ಸುಗ್ರೀವಾಜ್ಞೆ ತಂದು ಈ ಸದನದಲ್ಲಿ ಅದು ಕಾಯ್ದೆಯಾಗುವಾಗಲಂತೂ ನಾವಂತು ಬಹಳ ಅತ್ಯಂತ ಪ್ರಾಮಾಣಿಕವಾಗಿ ಕೇಂದ್ರ ಸರ್ಕಾರವನ್ನು ಟ್ರೈಬ್ಯೂನಲ್ ವಿರೋಧಿಸಿ ಸುಗ್ರೀವಾಜ್ಞೆ ಹೊರಡಿಸತಕ್ಕಂಥ ಕೆಲಸಕ್ಕೆ ಕೈ ಹಾಕಿದ್ದೀರಿ ಎಂದು ಹೇಳಿ ನಾವು ಅವರನ್ನು ಹೊಗಳಿದ್ದು ಉಂಟು. ಸುಗ್ರೀವಾಜ್ಞೆಯನ್ನು ಹೊರಡಿಸುವಾಗ ಈ ರಾಜ್ಯದ ಮಾನ್ಯ ಮುಖ್ಯ ಮಂತ್ರಿಗಳಾದ ಮಾನ್ಯ ಬಂಗಾರಪ್ಪನವರಿಗೆ ಇದ್ದಂಥ ಆ ಧೈರ್ಯ ಈಗ ಕುಗ್ಗಿ ಹೋಯಿತಲ್ಲಾ . ಎಲ್ಲಿದೆ ಆ ಧೈರ್ಯ ? ಅದಕ್ಕೆ ಕಾರಣವೇನು? ಆ ಒಂದು ಧೈರ್ಯ ಸ್ಥೈರ್ಯ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀಮಾನ್ ಬಂಗಾರಪ್ಪನವರು ಕಳೆದುಕೊಳ್ಳಬೇಕಾದರೆ ಕಾರಣಗಳೇನು ? ಇದೇ ಪರಿಸ್ಥಿತಿ ಏನಾದರೂ ತಮಿಳುನಾಡಿನಲ್ಲಿ ಆಗಿದ್ದರೆ ಪರಿಸ್ಥಿತಿ ಏನಾಗಬಹುದಿತ್ತು ? ಆದರೆ ನಾವು ಇಲ್ಲಿ ಉಪದೇಶ ಮಾಡುತ್ತಿದ್ದೇವೆ, ಹರಿಕಥೆ ಮಾಡುತ್ತಿದ್ದೇವೆ. ಗಂಟೆ ಹೊಡೆಯುತ್ತಿದ್ದೇವೆ. ತಮಿಳುನಾಡಿನಲ್ಲಿ ಈ ರೀತಿಯಾಗಿದ್ದರೆ ಯುದ್ಧವಾಗುತ್ತಿತ್ತು. ಅದರಲ್ಲಿ ಬೇರೆ ಮಾತೇ ಇಲ್ಲ. ನಮ್ಮ ನೀರಿನ ಹಕ್ಕನ್ನು ರಕ್ಷಿಸಲು ಇರುವಂತಹ ಮಸೂದೆ ಈಗ ಜೀವಂತವಾಗಿದೆಯೇ? ಅದನ್ನೇ ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಿದರು. ಅದು ಜೀವಂತವಾಗಿದೆಯೇ ಎಂಬುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು ಮತ್ತು ಈ ನ್ಯಾಯಮಂಡಲಿಯನ್ನು ಬಹಿಷ್ಕಾರ ಮಾಡುವುದರ ಬಗ್ಗೆ ನಮ್ಮ ರಾಜ್ಯದ ನಿಲುವು ಏನು ಎನ್ನುವುದನ್ನು ನಾವು ಒಂದೇ ಸಮನೆ ಒತ್ತಾಯ ಮಾಡುತ್ತಿದ್ದೇವೆ. ಆದರೆ ಈ ಕ್ಷಣದವರೆಗೂ ಸರ್ಕಾರದ ನಿಲುವು ಸ್ಪಷ್ಟವಾಗಿಲ್ಲ. ನ್ಯಾಯಮಂಡಳಿಯನ್ನು ಬಹಿಷ್ಕಾರ ಮಾಡಬೇಕೆನ್ನುವ ಬಗ್ಗೆ ದ್ವಂದ್ವವಾದ ನೀತಿ ಮಾನ್ಯ ಮುಖ್ಯಮಂತ್ರಿಗಳಲ್ಲಿದೆ. ಆ ಒಂದು ಉದ್ದೇಶದಿಂದಲೇ ನಮ್ಮ ಮುಖ್ಯಮಂತ್ರಿಗಳು ಕರೆಯುವಂಥ ಕಾವೇರಿಯ ಬಗ್ಗೆ ಯಾವುದೇ ಸಭೆಗಳಿಗೆ ಭಾಗವಹಿಸಬಾರದೆಂಬ ನಿರ್ಧಾರವನ್ನು ಕೈಗೊಂಡಿದ್ದೇವೆ. ಆದರೆ ಮುಖ್ಯಮಂತ್ರಿಗಳು ತಮ್ಮ ಪ್ರಧಾನಿ ಮಂತ್ರಿಯವರನ್ನು ಒಲೈಸುವುದಕೊಸ್ಕರವಾಗಿ ಪ್ರಧಾನ ಮಂತ್ರಿಗಳಲ್ಲಿ ವಿಶ್ವಾಸ ಬೆಳೆಸುವುದಕ್ಕೋಸ್ಕರವಾಗಿ ಹಾಗೂ ತಮ್ಮ ಅಧಿಕಾರ ಗದ್ದುಗೆಯನ್ನು ಉಳಿಸಿಕೊಳ್ಳುವುದಕೊಸ್ಕರವಾಗಿ, ಇವತ್ತು ಕೇಂದ್ರಕ್ಕೆ ಹೆದರಿದ್ದಾರೆ ಹಾಗೂ ತಮಿಳುನಾಡಿನ ಒತ್ತಡಕ್ಕೆ ಮಣಿದಿದ್ದಾರೆ. ಈ ಶಾಸನ ಸಭೆಯ

ನಿರ್ಣಯವನ್ನು ಗಾಳಿಗೆ ತೂರಿ ತಾವು ತಮ್ಮದೇ ಆದಂತಹ ನಿರ್ಧಾರಕ್ಕೆ ಬಂದಿರತಕ್ಕದ್ದು ಏನಿದೆ, ಇದು ನಿಜವಾಗಿಯೂ ಈ ರಾಜ್ಯದ ನಾಲ್ಕೂವರೆ ಕೋಟಿ ಕನ್ನಡಿಗರಿಗೆ ಮಾಡಿದಂತಹ ನಿರಂತರವಾದಂತಹ ಅಪರಾಧ ಎಂದು ನಾನು ಈ ಸಂದರ್ಭದಲ್ಲಿ ಹೇಳಬಬೇಕಾಗಿದೆ. ಮಾನ್ಯ ಕಾಗೋಡು ತಿಮ್ಮಪ್ಪನವರೇ, ನೀವು ನಮ್ಮ ಜೊತೆಯಲ್ಲಿ ಇರಬೇಕಾಗಿತ್ತು. ಇದ್ದಿದ್ದರೆ ನೀವು ನಿಮ್ಮ ಶಬ್ದಕೋಶದಲ್ಲಿರುವ ಯಾವ್ಯಾವ ಪದಗಳನ್ನು ಹೇಳುತ್ತಿದ್ದೀರಿ ಎಂಬುದು ನಮಗೆ ಗೊತ್ತಾಗುತ್ತಿತ್ತು. ಕಾವೇರಿಯ ಬಗ್ಗೆ ಒಂದು ಉಪ ಸಮಿತಿಯನ್ನು ರಚನೆ ಮಾಡಿದ್ದೀರಿ. ಅಧು ಯಾವುದು ಸ್ವಾಮಿ ? ಆ ಆರಾರು ತಿಂಗಳಿಗೊಮ್ಮೆ ಆ ಸಮಿತಿ ಬದಲಾವಣೆಯಾಗುತ್ತಿರುತ್ತದೆ. ಆ ಸಚಿವ ಸಂಪುಟದ ಉಪಸಮಿತಿಗೆ ಯಾರು ಅಧ್ಯಕ್ಷರು ? ಸದಸ್ಯರು ಯಾರು ಯಾರಿದ್ದಾರೆ? ಮಾನ್ಯ ಶುಕ್ಲಾರವರ ಪತ್ರ ತಮಗೆ ಬಂದು 48 ಗಂಟೆ 68 ಗಂಟೆಯಾದರೂ ಆದಕ್ಕೆ ಉತ್ತರ ಕೊಡುವುದು ಹೇಗೆ ಎಂದು ನೀವು ಧೈರ್ಯತೋರಿಸಲಿಲ್ಲವಲ್ಲಾ ? ಸುಗ್ರೀವಾಜ್ಞೆಯನ್ನು ಹೊರಡಿಸತಕ್ಕಂಥ ಧೈರ್ಯ ತೋರಿಸಿದಂತಹ ಮಾನ್ಯ ಬಂಗಾರಪ್ಪನವರು ಶುಕ್ಲಾರವರ ಪತ್ರಕ್ಕೆ ಉತ್ತರವನ್ನು ಕೊಡತಕ್ಕ ಧೈರ್ಯ ತೋರಿಸಲಿಲ್ಲ. ಶುಕ್ಲಾರವರ ಪತ್ರವನ್ನು ಹರಿದು ಬಿಸಾಕಿದ್ದರೆ ನಾನು ಒಪ್ಪುತ್ತಿದ್ದೆ. ಆ ಶಕ್ತಿ ನಿಮಗಿಲ್ಲ. ಈಗ ಹೋಗಿ ಬಿಟ್ಟಿದೆ. ಅಧಿಕಾರದಲ್ಲಿದ್ದು ಯಾವರೀತಿ ಬದುಕೋಣ ಎಂಬ ಯೋಚನೆ ನಿಮಗೇನಾದರೂ ಬಂದರೆ ಅದು ನಿಜವಾಗಿಯೂ ಒಳ್ಳೆಯದಲ್ಲ.

ಶ್ರೀ ಕಾಗೋಡು ತಿಮ್ಮಪ್ಪ ;— ಇದನ್ನು ರಚನೆ ಮಾಡುವಾಗ ನಿಮ್ಮ ಆಕ್ರೋಶ, ಸಿಟ್ಟು ಎಲ್ಲಿ ಹೋಗಿತ್ತು? ಅದರ ಬಗ್ಗೆ ನೀವು ಏನನ್ನು ಹೇಳಲಿಲ್ಲವಲ್ಲ.

ಶ್ರೀ ವಾಟಾಳ್ ನಾಗರಾಜ್ ;— ಮಾನ್ಯ ಅಧ್ಯಕ್ಷರೆ, ಮಾಜಿ ಪ್ರಧಾನಿಯವರು ನ್ಯಾಯ ಮಂಡಲಿಯನ್ನು ರಚನೆ ಮಾಡಿ ಕರ್ನಾಟಕಕ್ಕೆ ಅನ್ಯಾಯಮಾಡಿದ್ದಾರೆಂದು ಸಾವಿರ ಸಾರಿ ಹೇಳಿದ್ದೇನೆ. ಇದು ಹೊಸದೇನಲ್ಲ. ಮಾನ್ಯ ಕಾಗೋಡು ತಿಮ್ಮಪ್ಪನವರು ನಾನು ಹೇಳುವಾಗ ಇದ್ದರೋ ಇಲ್ಲವೋ ಗೊತ್ತಿಲ್ಲ.

ಶ್ರೀ ಸಿ. ಭೈರೇಗೌಡ;— ಅನ್ಯಾಯವಾಗಿದೆ ಎಂದು ಒಂದು ಸಾರಿ ಅಲ್ಲ. ಒಂದು ಸಾವಿರದ ಒಂದು ಸಾರಿ ಹೇಳುವುದಕ್ಕೆ ತಯಾರಿದ್ದೇನೆ ಯಾವತ್ತು ಬೇಕಾದರೂ ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ;— ಈ ಟ್ರಿಬ್ಯುನಲ್ ಅನ್ನು ರಚನೆ ಮಾಡಿ ಮಾನ್ಯ ವಿ.ಪಿ.ಸಿಂಗ್‌ರವರು ಕರ್ನಾಟಕಕ್ಕೆ ನಿರಂತರವಾಗಿ ಹಾಗೂ ಶಾಶ್ವತವಾಗಿ ಅನ್ಯಾಯಮಾಡಿದ್ದಾರೆ. ಆದರೆ ಅವರಿಂದ ಅನ್ಯಾಯ ಆಗಿದೆ ಎಂದು ನೀವು ಇವತ್ತಿನವರೆಗೂ ಹೇಳಿಲ್ಲ.

ಶ್ರೀ ಸಿ. ಭೈರೇಗೌಡ ;— ಮಾನ್ಯ ತಿಮ್ಮಪ್ಪನವರು ವಿರೋಧಪಕ್ಷದಲ್ಲಿದ್ದಾಗ ಬೆಳಗ್ಗಿನಿಂದ ಸಂಜೆಯವರೆಗೂ ಇಲ್ಲಿ ಕುಳಿತುಕೊಳ್ಳುತ್ತಿದ್ದರು. ಈಗ ಆ ಕಡೆ ಕುಳಿತುಕೊಂಡು ಸುಮ್ಮನೆ ಮಿಂಚು ಹೊಡೆದ ಹಾಗೆ ಹೊಡೆದು ಬಿಟ್ಟು ಇಲ್ಲಿ ಎರಡು ನಿಮಿಷ ಕುಳಿತು ಹೊರಟು ಹೋಗುತ್ತಾರೆ. ಇಲ್ಲಿ ನಡೆಯುವಂತಹ ನಡವಳಿಕೆಗಳನ್ನು ಅವರು ಗಮನಿಸುತ್ತಿಲ್ಲ. ಇಲ್ಲಿ ನಡೆಯುವಂತಹದ್ದು ಕಡತದಲ್ಲಿಯೂ ಇದೆ. ನಾನು ಇದೇ ಮಾತನ್ನು ಹೇಳಿದ್ದೇನೆ. ಹಿಂದಿನ ಪ್ರಧಾನಿಮಂತ್ರಿಗಳಾದಂತಹ ಮಾನ್ಯ ವಿ.ಪಿ. ಸಿಂಗ್‌ರವರು ಸಹ ಅವರ ಅಧಿಕಾರವನ್ನು ಉಳಿಸಿಕೊಳ್ಳುವುದಕೋಸ್ಕರ, ಈ ನ್ಯಾಯಮಂಡಳಿಯನ್ನು ರಚನೆ ಮಾಡಿರುವುದು ಎನ್ನತಕ್ಕದ್ದು ಇವತ್ತಿಗೂ ಈ ಸದನದ ಕಡತದಲ್ಲಿದ್ದರೆ ಮಾನ್ಯ ತಿಮ್ಮಪ್ಪನವರು ಏನು ಹೇಳುತ್ತಾರೆ?

ಶ್ರೀ ಕಾಗೋಡು ತಿಮ್ಮಪ್ಪ ; ಈಗೇನಾದರೂ ಹೇಳಿದ್ದಿರಾ?

ಶ್ರೀ ಸಿ. ಭೈರೇಗೌಡ ; ಇವತ್ತು ಇನ್ನೂ ನಾನೇನು ಮಾತನಾಡಿಲ್ಲ. ನನ್ನ ಪರವಾಗಿ ಶ್ರೀ ರಾಮಯ್ಯನವರು ಮಾತನಾಡಬಹುದೆಂದು ಹೇಳಿದ್ದರಿಂದ ಅವರು ಮಾತನಾಡಿದ್ದಾರೆ. ಇವರು ಮಾತನಾಡಿದ ಮೇಲೆ ನಾನು ಮಾತನಾಡುವುದಕೋಸ್ಕರ ಅವಕಾಶ ಮಾಡಿಕೊಡಬೇಕೆಂದು ಅಧ್ಯಕ್ಷರಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ; ಈಗ ಹೇಗಿದ್ದರೂ ಇಬ್ಬರೂ ಒಟ್ಟಿಗೆ ಇರುತ್ತೀರಿ. ನೀವು ನಾಗರಾಜ್ ಅವರಿಂದ ಹೇಳಿಸಿಬಿಡಿ ಏಕೆಂದರೆ, ಯಾರೋ ಮಾಡಿದ ಪಾಪಕ್ಕೆ ನಾವು ಇವತ್ತು

ತೊಳೆದುಕೊಳ್ಳಬೇಕಾದಂತ ಸಂಧರ್ಭ ಬಂದಿದೆ. ಯಾರು ತಪ್ಪು ಮಾಡಿ ಅದಕ್ಕೆ ಹೊಣೆಗಾರರಾಗಿದ್ದಾರೋ ಅವರನ್ನು ರಾಷ್ಟ್ರೀಯವಾಗಿ ಇವೊತ್ತು ನಾವು ಟೀಕೆ ನಿಂದನೆಯನ್ನು ಮಾಡದೆ ಹೋದರೆ, ಅಂತಹವರನ್ನು ಬಯಲಿಗೆಳೆಯದೇ ಹೋದರೆ ಇವೊತ್ತು ನಮಗೆ ನ್ಯಾಯ ಹೇಗೆ ಸಿಗುತ್ತದೆ?

ಶ್ರೀ ಸಿ. ಬೈರೇಗೌಡ ; ಯಾರು ಯಾರು ಪಾಪ ಮಾಡಿದ್ದಾರೋ, ಅವರೆಲ್ಲಾ ಪಾಪಿಗಳು; ಮಾನ್ಯ ಉಪಾಧ್ಯಕ್ಷಣಿಯವರೇ, ಇದಕ್ಕಿಂತ ಸ್ಪಷ್ಟವಾಗಿ ಇನ್ನೇನು ಹೇಳಬೇಕು?

ಶ್ರೀ ಡಿ.ಬಿ. ಚಂದ್ರೇಗೌಡ ; ಮಾನ್ಯ ಉಪಾಧ್ಯಕ್ಷಣಿಯವರೇ, ತಪ್ಪು ಅಂಕಿ–ಅಂಶಗಳು ಶಾಸನ ಸಭೆಯ ಕಡತಕ್ಕೆ ಹೋಗಬಾರದು. ಈ ವಿಚಾರವನ್ನು ನಾವು ಅನೇಕ ಸಲ ಚರ್ಚೆ ಮಾಡಿದ್ದೇವೆ. ಸರ್ವೋಚ್ಛ ನ್ಯಾಯಾಲಯ ಒಂದು ಆದೇಶ ಕೊಟ್ಟಿತು. ಕೆಲವರು ಆ ಆದೇಶವನ್ನು ಒಪ್ಪದಿರಬಹುದು. ಆದರೆ ವಸ್ತು ಸ್ಥಿತಿ ಏನು? ಮೊದಲು ನೀವು ಹೇಳಿ, ಅನಂತರ ನಿಮ್ಮ ಅಭಿಪ್ರಾಯಕ್ಕೆ ನಾವು ವಿರೋಧ ಬರುವುದಿಲ್ಲ. ಆ ಆದೇಶದಲ್ಲಿ ಎರಡು ಡಿರೆಕ್ಷನ್ಸ್ ಇತ್ತು. ಒಂದು, ಕಾವೇರಿ ನ್ಯಾಯಾಧಿಕರಣವನ್ನು ರಚನೆ ಮಾಡುವುದು. ಬೇಕೆಂದರೆ ನಾನು ಅದನ್ನು ಓದುತ್ತೇನೆ. "You shall constitute the Tribunal within 30 days from the date of this order". What was the direction issued by the highest law of the land, the Hon'ble Supreme Court of India".

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಉಪಾಧ್ಯಕ್ಷಿಣಿಯವರೇ, ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಸುಪ್ರೀಂ ಕೋರ್ಟ್ ಆ ಭಾಷೆಯನ್ನು ಉಪಯೋಗಿಸಿತ್ತೆಂದು ಈಗತಾನೆ ಹೇಳಿದರು. ಸುಪ್ರೀಂ ಕೋರ್ಟ್ ಆ ಭಾಷೆಯನ್ನು ಯಾವಾಗ ಉಪಯೋಗಿಸಿತು ? ಸನ್ಮಾನ್ಯ ವಿ.ಪಿ. ಸಿಂಗ್‌ರವರು ಪ್ರಧಾನಮಂತ್ರಿಗಳಾಗಿದ್ದಂಥ ಕಾಲದಲ್ಲಿ ಸರ್ಕಾರದ ಪರವಾಗಿ ಈ ಸದನದಿಂದ ಒಂದು ನಿಯೋಗ ಹೋಗಿತ್ತು. ಆ ನಿಯೋಗದಲ್ಲಿ ನಾನೂ ಕೂಡ ಇದ್ದೆ. ಆಗ ಶ್ರೀಮಾನ್ ವೀರೇಂದ್ರ ಪಾಟೀಲರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ಅದು ಯಾವ ಕಾಲ ಎಂದರೆ ಸುಪ್ರೀಂ ಕೋರ್ಟ್‌ನ ಮುಂದೆ ಕೇಂದ್ರ ಸರ್ಕಾರ ತನ್ನ ಹೇಳಿಕೆಯನ್ನು ದಾಖಲು ಮಾಡಬೇಕಾಗಿತ್ತು. ನೀವು ಏನು ಹೇಳುತ್ತೀರಿ ? ನಿಮ್ಮ ಹೇಳಿಕೆ ಬಂದ ನಂತರ ನಾವು ನಮ್ಮ ತೀರ್ಪು ಕೊಡುತ್ತೇವೆಂದು ಸುಪ್ರೀಂ ಕೋರ್ಟ್ ಹೇಳಿತ್ತು. ಆ ಕಾಲದಲ್ಲಿ ಈ ರಾಜ್ಯದಿಂದ ನಾವು ಒಂದು ನಿಯೋಗ ತೆಗೆದುಕೊಂಡು ಹೋಗಿದ್ದೆವು. ನಿಯೋಗದಲ್ಲಿ ಹೋಗಿ ನಾವು ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿದಾಗ ಶ್ರೀಮಾನ್ ವಿ.ಪಿ. ಸಿಂಗ್‌ರವರ ಬಾಯಿಂದ ಬಂದ ಮೊದಲ ವಾಕ್ಯ "We are shortly going to constitute the Inter-state Council and these are the matters which are fit to be referred to such a Council." This was the statement made by Mr. V.P. Singh to the delegation which went from the State of Karnataka.

ಎರಡು ದಿವಸಗಳ ನಂತರ ಅವರ ವಕೀಲರು ಸುಪ್ರೀಂ ಕೋರ್ಟಿನ ಮುಂದೆ ಒಂದು ಸ್ಟೇಟ್‌ಮೆಂಟನ್ನು ಫೈಲ್ ಮಾಡುತ್ತಾರೆ. ಆದರಲ್ಲಿ ಮಾತುಕತೆ ವಿಫಲವಾಗಿದೆ. ಆ ಕಾರಣ ತಾವು ಏನು ತೀರ್ಮಾನ ಕೊಟ್ಟರೂ ನಾವು ಅದಕ್ಕೆ ಬದ್ಧರಾಗುತ್ತೇವೆಂದು ಹೇಳಿದರು. ನಮಗೆ ಮೋಸ ಮಾಡಿದವರು ಮೊದಲು ವಿ.ಪಿ. ಸಿಂಗ್ ಅವರು.

(ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರುಗಳೆಲ್ಲರೂ ಕೈ ಚಪ್ಪಾಳೆ ತಟ್ಟಿದರು)

ಶ್ರೀ ವಾಟಾಳ್ ನಾಗರಾಜ್ : ಇದು ಕೈ ಚಪ್ಪಾಳೆ ಹೊಡೆಯುವಂಥ ಪ್ರಶ್ನೆಯಲ್ಲ. ಈ ರೀತಿ ನಡೆದಿರುವುದು ನಿಜ. ಅದನ್ನು ನಾನು ಒಪ್ಪುತ್ತೇನೆ. ಅದನ್ನು ನಾನು ವಿರೋಧ ಮಾಡುತ್ತಿಲ್ಲ. ನಾನು ಕೂಡ ಅದನ್ನೇ ಹೇಳುತ್ತಿದ್ದೇನೆ. ಇದರ ಬಗ್ಗೆ ಈಗ ಯಾರನ್ನು ಯಾರು ದೂಷಿಸಿದರೂ ಸಹ ಇದ್ದ ವಿಚಾರವನ್ನು ನಾವು ಸ್ಪಷ್ಟಪಡಿಸಿದ್ದೇವೆ. ಇದರಲ್ಲಿ ಎರಡನೇ ಅಭಿಪ್ರಾಯ ಇಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಸರ್ಕಮ್‌ಸ್ಟೆನ್ಸಸ್ ಬಗ್ಗೆ ಹೇಳುವುದಿಲ್ಲ. ಸುಪ್ರೀಂ ಕೋರ್ಟ್ ಕೊಟ್ಟಿರುವ ಜಡ್ಜ್‌ಮೆಂಟನ್ನು ಓದಿಬಿಡುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ಹೇಳುವುದನ್ನು ಒಂದು ನಿಮಿಷ ದಯವಿಟ್ಟು ಕೇಳಿ. ತಾವು ಅನಂತರ ಮಾತನಾಡಿ. ಈಗ ಸುಪ್ರೀಂ ಕೋರ್ಟಿಗೆ

ನ್ಯಾಯಮಂಡಳಿಯನ್ನು ರಚನೆ ಮಾಡತಕ್ಕಂಥ ಅಧಿಕಾರವಿಲ್ಲ. ಆ ಇಂಟರ್‌ಸ್ಟೇಟ್ ರಿವರ್ ಡಿಸ್‌ಪ್ಯೂಟ್ ಆ್ಯಕ್ಟ್ ಪ್ರಕಾರ ಅಧಿಕಾರವಿರತಕ್ಕಂಥ ಸರ್ಕಾರಕ್ಕೆ ಮಾತ್ರ. ಆ ಅಧಿಕಾರ ನಿಮಗೆ ಇಲ್ಲ ಎನ್ನತಕ್ಕಂಥ ಮಾತನ್ನು ಅಂದಿನ ಕೇಂದ್ರ ಆ ನಿಲುವನ್ನು ತಾಳಿದ್ದರೆ ಸುಪ್ರೀಕೋರ್ಟ್ ಏನು ತೀರ್ಮಾನ ಕೊಡುತ್ತಿತ್ತೋ, ಅದನ್ನು ಕೊಡುತ್ತಿತ್ತು. ಆದರ, ಆ ನಿಲುವು ಆಗಿನ ಸರ್ಕಾರದ್ದಾಗಿರಲಿಲ್ಲ. ಅದಕ್ಕೆ ಬದಲಾಗಿ ಏನು ಹೇಳಿದರಂದರೆ, ಸರ್ಕಾರಕ್ಕೆ ಇರತಕ್ಕಂಥ ಅಧಿಕಾರವನ್ನು ನ್ಯಾಯಾಲಯಕ್ಕೆ ಕೇಳಿ ನೀವು ಏನೇ ಹೇಳಿದರೂ ಅದರಂತೆ ನಾವು ನಡೆದುಕೊಳುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದರು. ಹಾಗಾದರೆ ನ್ಯಾಯಮಂಡಳಿ ರಚನೆ ಮಾಡಿ ಎಂದು ಸುಪ್ರೀಂಕೋರ್ಟ್ ಹೇಳಿತು. ಇದು ಸತ್ಯಾಂಶ. ಇದರ ಬಗ್ಗೆ ದಾಖಲೆಗಳಿರುವುದರಿಂದ ಇದನ್ನು ಮರೆಮಾಚತಕ್ಕಂಥ ಅವಶ್ಯಕತೆಯಿಲ್ಲ.

SRI D.B. CHANDRE GOWDA : I am trying to place the facts before the House.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ತಲೆ ಮೇಲೆ ಕಲ್ಲು ಹಾಕಿದರು, ನೀವು ಪೂರ್ತಿ ಶವ ಸಂಸ್ಕಾರ ಮಾಡಿ ಮಣ್ಣು ಹಾಕಿ ಮುಚ್ಚಿದಿರಿ. ಅಷ್ಟೇ

ಶ್ರೀ ಡಿ.ಬಿ ಚಂದ್ರೇಗೌಡ ; ಸ್ವಲ್ಪ ಕೇಳಿ ; "We, therefore, direct the Contral Government to fulfil its statutory abligation and notifying in the official gazette, the constitution of an appropriate Tribunal for the adjudication of the water Dispute referred to in earlier part of the Judgement. We further direct that the same should be done within a period of one month from today."

SRI KAGODU THIMMAPPA : If the Government is so apathetic, what is the option left?

SRI D..S. CHANDRE GOWDA : That I don't know because I am not the Advocate who argued before the Supreme Court. The worst criminal is your Government, how they have conducted themselves.

ಶ್ರೀ ಬಿ.ಎಚ್. ಬನ್ನಿಕೋಡ್ : ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದರು. ಸುಪ್ರಿಂಕೋರ್ಟಿನ ಆದೇಶ ಅನಂತರ ಆಯಿತು. ಈ ದಿಸೆಯಲ್ಲಿ ನೀವು ಏನಾದರೂ ಮಾಡಿ ಎಂದು ಸುಪ್ರೀಂಕೋರ್ಟಿಗೆ ಕಳುಹಿಸಿದರು. ಕಾರಣವೇನು? ಇಲ್ಲಿಯವರೆಗೆ ಕರ್ನಾಟಕದಲ್ಲಿದ್ದಂಥ ಸರ್ಕಾರ ಈ ಸಂಧಾನಕ್ಕೆ ಸಹಕಾರಿಯಾಗಬೇಕೆಂದು ಮತ್ತು ತಮಿಳುನಾಡು ಮತ್ತು ಕರ್ನಾಟಕ ರಾಜ್ಯ ಸಂಧಾನದ ಮೂಲಕ ಈ ಕಾವೇರಿ ನೀರಿನ ಸಮಸ್ಯೆ ಇತ್ಯರ್ಥವಾಗಬೇಕೆಂದು ಆಗಿದ್ದಂಥ ನಮ್ಮ ಸರ್ಕಾರ ಅನಂತರ ಮೊದಲಿದ್ದಂಥ ಸರ್ಕಾರಗಳು ಸಮಯಕ್ಕೆ ಅನುಸಾರವಾಗಿ ಅವರಿಗೆ ಅವಶ್ಯಕತೆಯಿದ್ದಾಗ ನೀರನ್ನು ಅಷ್ಟಿಷ್ಟು ಬಿಡುತ್ತಾ ಬಂದರು. ಆದರೆ ಇದೇ ಸರ್ಕಾರದ ಆಗಿನ ಮುಖ್ಯಮಂತ್ರಿಗಳಾಗಿದ್ದ ಶ್ರೀಮಾನ್ ವೀರೇಂದ್ರ ಪಾಟೀಲರು ಒಂದು ಹನಿ ನೀರನ್ನು ನಾವು ಬಿಡುವುದಿಲ್ಲವೆಂದು ಹೇಳಿದ್ದರಿಂದ ತಮಿಳಿನಾಡಿನವರು ಸಿಡಿದೆದ್ದರು, ಅದಕ್ಕಾಗಿ ಸಂಧಾನ ವಿಫಲವಾಯಿತು. ಇವರ ಸರ್ಕಾರ ಮಾಡಿದಂಥ ಅಪರಾಧಕ್ಕೆ ಸುಪ್ರಿಂ ಕೋರ್ಟಿನಿಂದ ಅಂತಹ ಆದೇಶವನ್ನು ಪಡೆಯಬೇಕಾಯಿತು.

ಶ್ರೀ ವಾಟಾಳ್ ನಾಗರಾಜ್ : ಈಗ ಸತ್ಯವನ್ನು ಮುಚ್ಚಿಡುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ಸತ್ಯವನ್ನು ಮುಚ್ಚಿಡಬೇಕೆನ್ನತಕ್ಕಂಥ ಪ್ರಶ್ನೆ ಅಲ್ಲ ನಿಜ. ಈ ರಾಜ್ಯಕ್ಕೆ ನ್ಯಾಯ ಮಂಡಳಿ ರಚನೆ ಮಾಡುವ ಮೂಲಕ ಮಾಜಿ ಪ್ರಧಾನಿಗಳಾಗಿದ್ದ ಶ್ರೀಮಾನ್ ವಿ.ಪಿ. ಸಿಂಗರು ಅನ್ಯಾಯ ಮಾಡಿದ್ದಾರೆ. ಅದರಲ್ಲಿ ಎರಡನೇ ಅಭಿಪ್ರಾಯವಿಲ್ಲ. ಇದರ ಬಗ್ಗೆ ಸ್ಪಷ್ಟವಾಗಿ ಅನೇಕ ಸಲ ಹೇಳಿದ್ದೇವೆ. ಇದೇನೂ ಹೊಸದಲ್ಲ. ಅವರೂ ಮನಸ್ಸು ಮಾಡಲಿ.

ಶ್ರೀ ಕಾಗೋಡು ತಿಮ್ಮಪ್ಪ : ಇದಕ್ಕೆ ವಿರುದ್ಧವಾಗಿ ನೀವು ರಾಜ್ಯಪಾಲರ ಮನೆ ಮುಂದೆ ಉಪವಾಸ ಸತ್ಯಾಗ್ರಹ, ಧರಣಿಮಾಡಲಿಲ್ಲ. ನಿಮಗೆ ಗೌರ್ವನರ್ಮೆಂಟ್ ಆರ್ಡರ್ ಸಿಗಲಿಲ್ಲ.

ಶ್ರೀ ವಾಟಾಳ್ ನಾಗರಾಜ್ ನಾನು ಎಷ್ಟೋ ಸಲ ಮಾಡಿದ್ದೇನೆ . ಬಹುಶಃ ತಮಗೆ ಗೊತ್ತಿಲ್ಲವೆಂದು ಕಾಣುತ್ತದೆ. ತಾವು ಶಿವಮೊಗ್ಗದಲ್ಲಿ ಎಲ್ಲಿಯೋ ಆರಾಮಾಗಿ ಇದ್ದುಬಿಟ್ಟರೆಂದು ಕಾಣುತ್ತದೆ. ನಾನು ಈ ಸದನದಲ್ಲಿ ಶ್ರೀಮಾನ್ ವಿ.ಪಿ. ಸಿಂಗರು ಕರ್ನಾಟಕಕ್ಕೆ ಮಾಡಿರುವ ಅನ್ಯಾಯದ ಬಗ್ಗೆ ಅನೇಕ ಭಾರಿ ಹೇಳಿದ್ದೇನೆ. ಇದರಲ್ಲಿ ನಾನು ಹಿಂದು–ಮುಂದು ನೋಡುವುದಿಲ್ಲ. ತಿಮ್ಮಪ್ಪನವರು ಅವರನ್ನು ರಕ್ಷಣೆ ಮಾಡತಕ್ಕಂಥ ಉದ್ದೇಶ ನನಗಂತೂ ಇಲ್ಲ. ದಯಮಾಡಿ ಇದನ್ನು ತಾವು ತಿಳಿದುಕೊಳ್ಳಬೇಕು. ಇಲ್ಲಿಯೇ ನಾನು ಅನೇಕ ಸಲ ಹೇಳಿದ್ದೇನೆ. ವಿರೋಧ ಪಕ್ಷಗಳು ಕರೆದಂಥ ಅನೇಕ ಸಭೆಗಳಲ್ಲಿಯೂ ಸಹ ಅವರು ಮಾಡಿದದ ಅನ್ಯಾಯಕ್ಕೆ ಯಾರು ಹೊಣೆ? ಎನ್ನತಕ್ಕಂಥ ಮಾತನ್ನು ಹೇಳಿದ್ದೇನೆ. ಆದರೆ ನಿಮ್ಮ ಜವಾಬ್ದಾರಿ ಏನು? ನಿಮ ಸರ್ಕಾರದ ಜವಾಬ್ದಾರಿ ಏನು? ನೀವು ಭುಜ ತಟ್ಟಿಕೊಂಡು ಜೋರಾಗಿ ನಿಂತು ಸುಗ್ರೀವಾಜ್ಞೆ ತರುವುದರ ಮೂಲಕ ನೀವು 'ಟುಸ್' ಆದಿರಿ. ಈಗ ನೀವು 'ಸುರುಸುರು' ಬತ್ತಿ ತರಹ ಆಗಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ ; ಆಗ ನೀವು ಏಕೆ ಶ್ರೀಮಾನ್ ವಿ.ಪಿ. ಸಿಂಗ್ ಮನೆ ಮುಂದೆ ಧರಣಿ, ಉಪವಾಸ ಸತ್ಯಾಗ್ರಹ ಕುಳಿತುಕೊಳ್ಳಲಿಲ್ಲ?

ಶ್ರೀ ವಾಟಾಳ್ ನಾಗರಾಜ್ : ನೋಡಿ ವಿ.ಪಿ. ಸಿಂಗ್‌ರನ್ನು ಹುಡುಕುವುದಕ್ಕೆ ದೆಹಲಿಗೆ ಹೋಗಬೇಕು. ಇವರ ಮನೆ ಮುಂದೆ ಕುಳಿತರೆ ಆಗುವುದಿಲ್ಲ. ಜನರನ್ನು ಕರೆದುಕೊಂಡು ದೆಹಲಿಗೆ ಹೋಗುವುದೇ? ಏನು ಪರಿಸ್ಥಿತಿ ಇವರು ಹೇಳುವುದು? ನೀವು ಏಕೆ ವಿ.ಪಿ. ಸಿಂಗ್‌ರವರ ಮನೆ ಮುಂದೆ ಧರಣಿ ಕುಳಿತುಕೊಳ್ಳಲು ಹೋಗಲಿಲ್ಲವೆಂದು ತಿಮ್ಮಪ್ಪನವರು ಹೇಳುತ್ತಿದ್ದಾರೆ. ಸರಿ ಹೋಯಿತು. ಇದು ಯಾವ ತರಹದ ವಾದ ? ಆದುದರಿಂದ, ನಾನು ಹೇಳುತ್ತೇನೆ. ಕರ್ನಾಟಕಕ್ಕೆ ಅನ್ಯಾಯವಾಗಿರುವುದನ್ನು ಯಾರೂ ಕೂಡ ತಳ್ಳಿಹಾಕುವಂತಹದ್ದಲ್ಲ. ಇದನ್ನು ನಿಲ್ಲಿಸಬಹುದಾಗಿತ್ತು. ನಾನು ಹೇಳುತ್ತೇನೆ, ವಿ.ಪಿ. ಸಿಂಗ್‌ರವರು ಕರುಣಾನಿಧಿ ಅವರನ್ನು ಓಲೈಸುವುದಕ್ಕೋಸ್ಕರ ನಮಗೆ ಮೋಸ ಮಾಡಿದರು, ಈಗಿನ ಪ್ರಧಾನಿ ಪಿ.ವಿ. ನರಸಿಂಹರಾವ್‌ಗವರು ಕುಮಾರಿ ಜಯಲಲಿತಾ ಅವರನ್ನು ಓಲೈಸುವುದಕ್ಕೋಸ್ಕರ ನಮ್ಮ ಕತ್ತನ್ನು ಕುಯ್ಯುತ್ತಿದ್ದಾರೆ. ನೀವು ಇದನ್ನು ಒಪ್ಪುತ್ತೀರೊ ಅಥವಾ ಇಲ್ಲವೋ ಗೊತ್ತಿಲ್ಲ, ಅದನ್ನು ಒಪ್ಪುವುದಿಲ್ಲವೆಂದರೆ ಏತಕ್ಕೆ ಒಪ್ಪುವುದಿಲ್ಲ. ಒಂದನ್ನು ಮಾತ್ರ ಹೇಳ್ತುತೀರಿ, ಆದರೆ ಇನ್ನೊಂದನ್ನು ಮಾತ್ರ ಹೇಳುವುದಿಲ್ಲ. ಇದು ನಡೆದಿರತಕ್ಕ ಕತೆ. ಆದರೂ ಕೂಡ ತಮ್ಮ ತಮ್ಮ ಗದ್ದಿಗೆಯನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಕನ್ನಡಿಗರನ್ನು ನೇಣುಗಂಬಕ್ಕೇರಿಸುತ್ತಿದ್ದೀರಿ. ಕಾವೇರಿಯ ಬಗ್ಗೆ ಏನು ಚಿಂತನೆ ಇದೆ? ಸಮನ್ವಯ ಸಮಿತಿಯ ಸಭೆಗೆ ನಿಮ್ಮ ಪಕ್ಷದವರು ಹಿರಿಯ ನಾಯಕರು ಆದಂಥ ಮಾನ್ಯ ಜಿ. ಮಾದೇಗೌಡರು ಮತ್ತು ಕಾಂಗ್ರೆಸ್‌ನ ಕೆಲವು ಸದಸ್ಯರು ಹೋದರೆ ಅವರ ವಿರುದ್ಧ ಶಿಸ್ತಿನ ಕ್ರಮವನ್ನು ಕೈಗೊಳ್ಳುತ್ತೇವೆಂದು ಹೇಳುತ್ತೀರಿ, ಏತಕ್ಕೆ ಹಾಗೆ ಹೇಳುತ್ತೀರಿ? ಈ ರಾಜ್ಯದ ಹಿತವನ್ನು ಕಾಪಾಡತಕ್ಕ ಸಮನ್ವಯ ಸಮಿತಿಗೆ ಕೆಲವು ಸಚಿವರು ಬಂದರೆ ಅವರ ವಿರುದ್ಧ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇವೆಂಬು ಹೇಳುತ್ತೀರಲ್ಲ, ಈ ರೀತಿ ಹೇಳಬಹುದೇ?

ಶ್ರೀ ಕಾಗೋಡು ತಿಮ್ಮಪ್ಪ :— ಈಗ ನೀವು ಏನು ಹೇಳುತ್ತಿದ್ದೀರಿ ಅದನ್ನು ಹೇಳುವುದಕ್ಕೆ ಏನು ತೊಂದರೆ? ಈಗ ನೀವು ಮಾನ್ಯ ಮಾದೇಗೌಡರ ಪರವಾಗಿ ವಾದಮಾಡುತ್ತಿರುವವರು ಏತಕ್ಕೆ ಹೇಳಬಾರದು?

ಶ್ರೀ ವಾಟಾಳ್ ನಾಗರಾಜ್ ;— ನಾನು ಯಾರ ಪರವಾಗಿಯೂ ವಾದ ಮಾಡುತ್ತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :— ಇದು ಕೊಂಡಿ ತಪ್ಪಿಸುವ ವ್ಯವಹಾರ. ಅದನ್ನು ಗಟ್ಟಿಯಾಗಿ ಹೇಳಿ. ಅದರಲ್ಲಿ ಏನು ತೊಂದರೆ ಇದೆ?

ಶ್ರೀ ವಾಟಾಳ್ ನಾಗರಾಜ್ :— ಗಟ್ಟಿಯಾಗಿ ಹೇಳೇ ಹೇಳುತ್ತಾರೆ. ಅವರು ಏನಾದರೂ ಗಟ್ಟಿಯಾಗಿ ಹೇಳಿದರೆ ನಿಮ್ಮ ಬುಡದ ಭದ್ರತೆ ಅಲ್ಲಾಡಿಹೋಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ:— ಮಾನ್ಯ ವಾಟಾಳ್ ನಾಗರಾಜ್‌ರವರು ಪಕ್ಕದಲ್ಲಿದ್ದರೆ.

ಶ್ರೀ ವಾಟಾಳ್ ನಾಗರಾಜ್ :— ಸಮನ್ವಯ ಸಮಿತಿಯ ಬಗ್ಗೆ ನೂರಾರು ಜನ ಶಾಸಕರು ನಮಗೆ ಸಿಕ್ಕಿ ಹೇಳುತ್ತಿದ್ದಾರೆ. ಏನೆಂದರೆ, ನಮ್ಮ ಸರ್ಕಾರದವರು ನಮಗೆ ಅನ್ಯಾಯ ಮಾಡಿದ್ದಾರೆ, ನಾವೆಲ್ಲರೂ

ಆ ಸಭೆಗೆ ಬರಬೇಕೆಂದಿದ್ದೇವೆ. ಆದರೆ ನಮ್ಮ ಮೇಲೆ ಶಿಸ್ತಿನ ಕ್ರಮ ತೆಗೆದುಕೊಂಡು ಗಧಾಪ್ರಹಾರ ಮಾಡುವುದಕ್ಕೆ ಹೊರಟಿದ್ದಾರೆ? ಅದಕ್ಕಾಗಿ ನಾವು ಏನು ಮಾಡಬೇಕೆಂದು ಭಯಭೀತರಾಗಿದ್ದೇವೆಂದು; ಆದರೂ ಸುಮಾರು 20 ಜನ ಶಾಸಕರು, 9 ಜನ ಕಾಂಗ್ರೆಸ್‌ನವರು, 11 ಜನ ವಿರೋಧಪಕ್ಷದವರು ನಮ್ಮ ಜೊತೆಗೆ ಬಹಳ ಧೈರ್ಯದಿಂದ ಬಂದರು. ನಾವು ಅವರನ್ನು ಮೆಚ್ಚುತ್ತೇವೆ. ಈ ದಿಸೆಯಲ್ಲಿ ಮಾನ್ಯ ಮಾದೇಗೌಡರೂ ಸೇರಿದಂತೆ ಅನೇಕರು ಸರ್ಕಾರದ ಈ ಬೆದರಿಕೆಯನ್ನೂ, ಎಚ್ಚರಿಕೆಯನ್ನೂ, ಧಿಕ್ಕರಿಸಿ ನಮ್ಮ ಸಮನ್ವಯ ಸಮಿತಿಯ ಸಭೆಗೆ ಬಂದಿದ್ದಕ್ಕಾಗಿ ಅವರಿಗೆ ಈ ಸಭೆಯಲ್ಲಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಆದರೆ ನೀವು ಅವರನ್ನು ಹೆದರಿಸುತ್ತೀರಿ. ಇಂಥ ಪರಿಸ್ಥಿತಿ ಬಂದರೆ ಹೇಗೆ ಸ್ವಾಮಿ?

ಶ್ರೀ ಕಾಗೋಡು ತಿಮ್ಮಪ್ಪ – ಊರಲ್ಲಿ ಹುಲಿ, ಪರ ಊರಲ್ಲಿ ನರಿ.

ಶ್ರೀ ಸಿ. ಬೈರೇಗೌಡ – ಕಾಗೋಡು ತಿಮ್ಮಪ್ಪನವರು ಪ್ರತಿ ಸಾರಿಯೂ ಎದ್ದೇಳುತ್ತಿದ್ದಾರೆ. ಆದರೆ ಇವರು ಸರ್ಕಾರದಲ್ಲಿ ಮಂತ್ರಿಗಳೂ ಅಲ್ಲ, ಮುಖ್ಯ ಮಂತ್ರಿಗಳೂ ಕೂಡ ಅಲ್ಲ. ಇವರು ಏನಾದರೂ ತಿಜೋರಿಯಾಗಿ ಡಿಫಾಲ್ಟ್ ಆಗಿ ಮುಖ್ಯ ಮಂತ್ರಿಗಳಾಗಿದ್ದಾರೆಯೇ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಸ್ವಾಮಿ, ಕಾಂಗ್ರೆಸ್ ಪಕ್ಷದ ಒಬ್ಬ ಸಂಸದೀಯ ಸದಸ್ಯರು ಇಷ್ಟೊಂದು ಬಹಿರಂಗವಾಗಿ ಟೀಕೆ ಮಾಡುತ್ತಾ ರಾಜ್ಯದ ಜನರಿಗೆ ಈ ಸರ್ಕಾರ ದ್ರೋಹ ಮಾಡಿದೆ, ಆದ್ದರಿಂದ ನಾವು ರಾಜೀನಾಮೆಯನ್ನು ಕೊಡುತ್ತೇವೆ, ಈ ಸರ್ಕಾರ ಒಂದು ಕ್ಷಣ ಕೂಡ ಅಧಿಕಾರದಲ್ಲಿ ಮುಂದುವರಿಯುವುದಕ್ಕೆ ಅರ್ಹತೆ ಇಲ್ಲವೆಂದು ಹೇಳುತ್ತಿರಬೇಕಾದರೆ, ಆದರ ಸತ್ಯಾಂಶ ಏನು ಎಂಬುದನ್ನು ಪರಿಶೀಲಿಸಿ ನೋಡದೆ ಅವರ ಪಕ್ಷದ ಸದಸ್ಯರ ಬಗ್ಗೆ ಏತಕ್ಕೆ ಲೋಕಸಭೆಯಲ್ಲಿ ಪ್ರಸ್ತಾಪ ಮಾಡುವುದಿಲ್ಲ. ಅಲ್ಲಿ ಪ್ರಸ್ತಾಪ ಮಾಡುವುದಿಲ್ಲವೆಂದು ಹೇಳಿದರೆ ನೀವು ಮಾಡಿಸಿ; ಈ ಮಾತನ್ನು ನಾವು ಹೇಳುವುದು ನಿಮಗೆ ಅವಮಾನ ಅಲ್ಲವೇ? ಒಬ್ಬ ಚುನಾಯಿತ ಲೋಕಸಭಾ ಸದಸ್ಯರೇ ಈ ದಿವಸ ಬಹಿರಂಗವಾಗಿ ಹೊರಗಡೆಗೆ ಬಂದಿದ್ದಾರೆ. ಮಂತ್ರಿಮಂಡಲದ ಸದಸ್ಯರೂ ಕೂಡ ನಮ್ಮ ಜೊತೆಗೆ ಬಂದು ಭಾಗವಹಿಸಿದ್ದಾರೆ. ನಿಮ್ಮ ಮುಖ್ಯಮಂತ್ರಿಗಳು ಅವರನ್ನು ಹೆದರಿಸಿರುವುದರಿಂದ ಅವರು ವಾಪಸು ಬಂದಿಲ್ಲ. ನಾವು ಏನನ್ನೂ ಹೇಳಿಲ್ಲವೆಂದು ಹೇಳುವಂತಹ ಸ್ಟೇಟ್‌ಮೆಂಟ್ ಅನ್ನು ಅವರಿಂದ ವಾಪಸು ತೆಗೆದುಕೊಳ್ಳತಕ್ಕ ಘಟನೆ ಇವತ್ತು ನಡೆದಿದೆ. ಹಿಂದೆ ವಿ.ಪಿ. ಸಿಂಗರ ಸರ್ಕಾರದಲ್ಲಿ ಏನು ನಡೆದಿತ್ತು ಅದಕ್ಕಿಂತ ನೂರು ಪಟ್ಟು ಅನ್ಯಾಯ ಇವತ್ತು ಇಲ್ಲಿ ನಡೆಯುತ್ತಿದೆ. ಅದನ್ನು ಸಹಿಸಿಕೊಂಡು ನಿಮ್ಮ ಈ ಕುರ್ಚಿಗಾಗಿ ಇಲ್ಲಿ ಮಾಡಬಾರದ್ದನ್ನು ಮಾಡಿಕೊಂಡು ಹೋಗುತ್ತಿರುವಂಥ ನಿಮಗೆ ನಿಜವಾಗಿಯೂ ಇದರ ಬಗ್ಗೆ ಮಾತನಾಡುವಂಥ ಹಕ್ಕಿಲ್ಲ.

ಶ್ರೀ ಡಿ. ಹಲಗೇಗೌಡ :– ಮಾನ್ಯ ಸಭಾಧ್ಯಕ್ಷಣಿಯವರೇ, ನಾನು ಇಲ್ಲಿ ಮಧ್ಯೆ ಪ್ರವೇಶ ಮಾಡಬೇಕಾಗಿ ಬಂದದ್ದು ಶ್ರೀಮಾನ್ ಮಾದೇಗೌಡರ ವಿಚಾರದಲ್ಲಿ ಕೆಲವು ಮಾತುಗಳು ಬಂದಿದ್ದರಿಂದ. ಮಾನ್ಯ ಮಾದೇಗೌಡರು ಯಾವುದಾದರೂ ಸಾರ್ವಜನಿಕ ವ್ಯಾಚಾರಗಳು ಬಂದಾಗ ಯಾವುದೇ ಪಕ್ಷವನ್ನಾಗಲಿ, ಯಾವುದೇ ವ್ಯಕ್ತಿಯನ್ನಾಗಲಿ ಅವರು ನೋಡುವುದಿಲ್ಲ; ನನಗೂ ಕೂಡ ಪಕ್ಷಕ್ಕಿಂತ ದೇಶ ದೊಡ್ಡದು. ದೇಶ ಎಂದರೆ ಜನರು. ಪಕ್ಷಕ್ಕಿಂತ ಜನರು ದೊಡ್ಡವರು. ಜನರ ಹಿತ ಎಂದರೆ ಸಾರ್ವಜನಿಕರ ಹಿತ. ಅದು ಮುಖ್ಯ ಆದುದರಿಂದ ಸಾರ್ವಜನಿಕರ ಹಿತದ ಪ್ರಶ್ನೆ ಬಂದಾಗ ದೇಶದ ಹಿತಕ್ಕೆ ಧಕ್ಕೆ ಬಂದಾಗ ಪಕ್ಷ, ವ್ಯಕ್ತಿ, ನಾಯಕ ಎಂದು ಯಾರನ್ನೂ ಕೂಡ ಹಿಂದೆಮುಂದೆ ನೋಡದೆ ಹೋಡೆದಾಡತಕ್ಕ ಧೀಮಂತ ವ್ಯಕ್ತಿ ಎಂದರೆ ಶ್ರೀಮಾನ್ ಮಾದೇಗೌಡರು. ಅವರು ಲೋಕಸಭೆಯಲ್ಲಿ ಕೂಡ ಅಷ್ಟೇ ಖಂಡತುಂಡವಾಗಿ ಪ್ರತಿಪಾದನೆಯನ್ನು ಮಾಡಿದ್ದಾರೆ. ಉಳಿದ ಸದಸ್ಯರು ಅವರನ್ನು ಅಡ್ಡಿಪಡಿಸಿದರೂ ಕೂಡ ಅದನ್ನು ಲೆಕ್ಕಿಸದೆ ಅವರು ತಮ್ಮ ಅನಿಸಿಕೆಯನ್ನು ಹೇಳಿದ್ದಾರೆ. ಅವರು ತಮ್ಮ ಕರ್ತವ್ಯವನ್ನು ಮಾಡಿದ್ದಾರೆ. ಈಗಲೂ ಕೂಡ ಅವರು ಯಾವ ಪಕ್ಷಕ್ಕೂ ಯಾರಿಗೂ ಹೆದರುವುದಿಲ್ಲ. ನನ್ನನ್ನು ಪಕ್ಷದಿಂದ ಹೊರಗೆ ಹಾಕುತ್ತಾರೆನ್ನತಕ್ಕ ಭಯವೂ ಕೂಡ ಇಲ್ಲದೆ ನಾನು ನನ್ನ ಜನರಿಗೆ, ನನ್ನ ನಾಡಿಗೆ, ನನ್ನ ದೇಶಕ್ಕ ನನ್ನ ಕೊನೆಯ ಉಸಿರು ಇರುವವರೆಗೂ ನಾನು ಹೋರಾಟ ಮಾಡುತ್ತೇನೆ, ಈ ಸ್ಥಾನ 4–5 ವರ್ಷ ಇರಬಹುದು. ಆದರೆ ನನಗೆ ಇದು

ಮುಖ್ಯವಲ್ಲ ಎಂದು ಅವರು ತಮ್ಮ ಕೆಲಸವನ್ನು ತಾವು ಮಾಡಿದ್ದಾರೆ. ನಾವೂ ಕೂಡ ಇಲ್ಲದ್ದೇವೆ. ನನಗೂ ಕೂಡ ಅನಿಸುತ್ತದೆ. ನನಗೆ ಪಕ್ಷಕ್ಕಿಂತ ದೇಶದ ಹಿತಮುಖ್ಯ. ದೇಶದ ಹಿತದ ಪ್ರಶ್ನೆ ಬಂದಾಗ ಪಕ್ಷದ ಹಿತವನ್ನು ಕಡೆಗಣಿಸಿ ನಾವೂ ಕೂಡ ಹೋರಾಟಕ್ಕೆ ಸಿದ್ಧವಾಗಿ ಹೋಗುತ್ತೇವೆನ್ನತಕ್ಕ ಮಾತನ್ನು ನಾನು ಹೇಳಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:— ನಾನು ಈ ಮಾತನ್ನು ಒಪ್ಪುತ್ತೇನೆ. ಮಾದೇಗೌಡರು ಸ್ಪಷ್ಟವಾಗಿ ಹೇಳಿದ್ದಾರೆ ಹಾಗೂ ನಿಖರವಾಗಿ ಹೇಳಿದ್ದಾರೆ. ಹಿಂದೆ ಮುಂದೆ ಕದ್ದು ಹೋಗಿಲ್ಲ. ಈ ರಾಜ್ಯದ ಹಿತಕ್ಕಾಗಿ ಕಾವೇರಿ ಹಿತಕ್ಕಾಗಿ ನಾನು ರಾಜೀನಾಮೆ ಕೊಟ್ಟು ಹೊರಕ್ಕೆ ಬಂದು ಮಾತನಾಡಿದರೆ ಆಗ ಒಪ್ಪಿಕೊಳ್ಳಬಹುದು.

ಶ್ರೀ ವಾಟಾಳ್ ನಾಗರಾಜ್:— ಕೊಟ್ಟು ಇಲ್ಲಿ ಬಂದು ಹೇಗೆ ಮಾತನಾಡುವುದು? ಆಗ ನಮ್ಮನ್ನು ಒಳಕ್ಕೆ ಸೇರಿಸುತ್ತೀರಾ?

ಶ್ರೀ ಬಿ.ಹೆಚ್. ಬನ್ನಿಕೋಡ್:— ರಾಜೀನಾಮೆ ಕೊಟ್ಟು ಈ ಮಾತನ್ನಾಡುವುದನ್ನು ಬಿಡಲಿ ಎಂಬುದು ಅವರ ಬುದ್ಧಿವಂತಿಕೆ ಮಾತು.

ಶ್ರೀ ವಾಟಾಳ್ ನಾಗರಾಜ್ :— ನಾವು ರಾಜೀನಾಮೆ ಕೊಟ್ಟು ಬಂದರೆ ನೀವು ಒಳಕ್ಕೆ ಸೇರಿಸುತ್ತೀರಾ?

ಶ್ರೀ ಬಿ.ಎಸ್. ಯಡಿಯೂರಪ್ಪ:— ಜನರಿಗೆ ಕೈ ಕೊಟ್ಟಿರುವುದು ನೀವು ರಾಜೀನಾಮೆ ಕೊಟ್ಟು ಹೋಗಬೇಕಾಗಿರುವುದು ನೀವು.

ಒಬ್ಬ ಮಾನ್ಯ ಸದಸ್ಯರು :— ನಾವು ಕೊಡುತ್ತೇವೆಂದು ಯಾವತ್ತೂ ನಮ್ಮ ಪಕ್ಷದಲ್ಲಿ ಹೇಳಿಲ್ಲ. ಘಂಟಾಘೋಷವಾಗಿ ಹೇಳುತ್ತೇವೆ ನಾವು ಅನ್ಯಾಯಕ್ಕೆ ಅವಕಾಶ ಕೊಡುವುದಿಲ್ಲ. ನಿಮ್ಮ ಹಾಗೆ ರಾಜೀನಾಮೆ ಕೊಡುತ್ತೇವೆಂದು, ಹೇಳಿಲ್ಲ.

ಶ್ರೀ ವಾಟಾಳ್ ನಾಗರಾಜ್:— ಪರಮ ಪವಿತ್ರವಾದಂತಹ ಕಾವೇರಿ ಸಮನ್ವಯ ಸಮಿತಿ ನಿರ್ಣಯ ತೆಗೆದುಕೊಂಡಿದೆ. ಅದರಲ್ಲಿ ಹಿಂದೆ ಮುಂದೆ ಹೋಗತಕ್ಕಂತಹ ಪ್ರಶ್ನೆ ಇಲ್ಲ. ರಾಜೀನಾಮೆ ಬಗ್ಗೆ ಯಾರೂ ಸಹ ಹಿಂದೆ ಮುಂದೆ ಹೋಗುವ ಹಾಗೆ ಇಲ್ಲವೇ ಇಲ್ಲ. ರಾಜೀನಾಮೆ ಕೊಟ್ಟೇ ಕೊಡುತ್ತಾರೆ, ಅದರಲ್ಲಿ ಹಿಂದೆ ಮುಂದೆ ಹೋಗುವ ಪ್ರಶ್ನೆ ಇಲ್ಲ. ಸೂಕ್ತ ಸಮಯಕ್ಕಾಗಿ ಕಾಯುತ್ತಿದ್ದೇನೆ. ಯಾವ ಸಂದರ್ಭದಲ್ಲಿ ಕೊಡಬೇಕೋ ಆಗ ಕೊಡುತ್ತೇವೆ ರಾಜೀನಾಮೆ ಕೊಡಲು ಪ್ರಾರಂಭವಾದರೆ ನಿಮ್ಮ ಸರಕಾರದ ಯಾವ ಒಂದು ದಂತ ಗೋಪುರದ ಇದೆ ಅದರ ಪ್ರತಿಯೊಂದೂ ಭಾಗವೂ ಉರುಳಿ ರಸ್ತೆಗೆ ಬರಬೇಕಾಗುತ್ತದೆ. ಅನುಮಾನಪಡುವುದಕ್ಕೆ ಹೋಗಬೇಡಿ. ನಾವೆಲ್ಲಾ ರಾಜೀನಾಮೆ ಕೊಟ್ಟ ಮೇಲೆ ನಿಮ್ಮನ್ನು ರಸ್ತೆಯಲ್ಲಿ ಜನ ಓಡಾಡುವುದಕ್ಕೆ ಬಿಡುತ್ತಾರಾ? ಎಂದೂ ಓಡಾಡುವುದಕ್ಕೆ ಬಿಡುವುದಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಾನೂ ರಾಜೀನಾಮೆ ಕೊಡುತ್ತೇನೆ. ಸಮನ್ವಯ ಸಮಿತಿಯಲ್ಲಿರುವ ಎಲ್ಲರೂ ಕೊಡುತ್ತಾರೆ. ರಾಜೀನಾಮೆಗೆ ಹಿಂದೆ ಮುಂದೆ ನೋಡುವುದಿಲ್ಲ. ಯಾವ ಕಾಲದಲ್ಲಿ ಬೇಕಾದರೂ ರಾಜೀನಾಮೆ ಕೊಡುವುದಕ್ಕೆ ತಯಾರಾಗುತ್ತೇವೆ. ಮಾದೇಗೌಡರು ಒಬ್ಬ ಧೀಮಂತ ವ್ಯಕ್ತಿಯಾಗಿರುವುದರಿಂದ ಅವರು ಯಾವುದೇ ಪಕ್ಷದಲ್ಲಿರಲಿ, ಅವರು ಸಮನ್ವಯ ಸಮಿತಿಯ ಅಧ್ಯಕ್ಷರಾಗಿರಬೇಕೆಂದು ಅವರನ್ನು ಹಾಕಿದ್ದೇವೆ. ಅವರು ಪರಿಪೂರ್ಣವಾದ ತೀರ್ಮಾನ ಮಾಡಿದ್ದಾರೆ. ಕನ್ನಡಿಗರ ಹಿತವನ್ನು ಕಾಪಾಡುವುದಕ್ಕೋಸ್ಕರ ಯಾವ ತ್ಯಾಗಕ್ಕಾದರೂ ಸಿದ್ಧವೆಂದು ಅವರು ಹೇಳಿದ್ದಾರೆ. ಅಲ್ಲಿಗೆ ಬಂದಂತಹ ಕಾಂಗ್ರೆಸ್ ಸದಸ್ಯರು ಒಕ್ಕೊರಲಿನಿಂದ ಮಂತ್ರಿಗಳ ರಾಜೀನಾಮೆ ಬಗ್ಗೆ ಹೇಳಿದ್ದಾರೆ. ಅದಕ್ಕಾಗಿ ಹೆದರಿಕೆ ಹಾಕಿದ್ದೀರಿ, ಮಂಡ್ಯದಲ್ಲಿ ಆದಂತಹ ನಿರ್ಣಯಕ್ಕೆ ನಾನು ಬದ್ಧನಲ್ಲವೆಂದು ಹೇಳುತ್ತೀರಿ. ಮಂಡ್ಯ ನಿರ್ಣಯ ಎಲ್ಲಿ ಬರುತ್ತದೋ ಎಂದು ಹೇಳಿ ಪ್ರಧಾನ ಮಂತ್ರಿಯವರ ಕೈ ಕಟ್ಟಿ ಹೇಗೋ ಸೇರಿಸಿ ಬಿಡಿ ನಮ್ಮ 4 ಜನರ ಫೋಟೋ ಬಂದರೆ ಸಾಕು ಎಂದು ಅವರಿಗೆ ಪ್ರಾರ್ಥನೆ ಸಲ್ಲಿಸಿದ್ದೀರಿ. ಪರಿಸ್ಥಿತಿ ಏನು ಇದೆ ಎಂಬುದನ್ನು ನೋಡಿ ತಿಮ್ಮಪ್ಪನವರೇ, ನಿರ್ಣಯವನು. ಈ ಸದನದಲ್ಲಿ ಮಾಡಿದ್ದಾರೆ. ಈ ನಿರ್ಣಯಕ್ಕೆ ಹೆಜ್ಜೆ ಹೆಜ್ಜೆಗೂ ವಿರುದ್ಧವಾಗಿ

ಮುಖ್ಯಮಂತ್ರಿಗಳಾದಂತಹ ಬಂಗಾರಪ್ಪನವರು ನಡೆದುಕೊಂಡಿದ್ದಾರೆ ಹಾಗೂ ಅವರು ಮಂತ್ರಿಮಂಡಲ ಹಾಗೂ ಸರಕಾರ ನಡೆದುಕೊಂಡಿದೆ. ಆದ್ದರಿಂದ ಇದನ್ನು ಹಕ್ಕುಚ್ಯುತಿ ಸಮಿತಿಗೆ ಕಳಿಸಲೇಬೇಕೆಂದು ನಾವು ಒತ್ತಾಯ ಮಾಡುತ್ತಿದ್ದೇವೆ. ಇದನ್ನು ಕಳಿಸಲಿಲ್ಲವೆಂದರೆ ಸುಮ್ಮನೆ ನಾವು ಹಕ್ಕುಚ್ಯುತಿ ನಿರ್ಣಯಗಳನ್ನು ತರುವುದರಲ್ಲಿ ಅದಕ್ಕೆ ಬೆಲೆ ಇರುವುದಿಲ್ಲ. ಆದ್ದರಿಂದ ಇದನ್ನು ಮಹತ್ತರವಾಗಿ ಎತ್ತರಕ್ಕೆ ತೆಗೆದುಕೊಂಡು ಹೋಗುತ್ತೀರೆಂದು ನಾನು ಅಂದುಕೊಂಡಿದ್ದೇನೆ. ಈ ಸದನದ ಸಂಪ್ರದಾಯವನ್ನು ಇದರ ಮಹತ್ವವನ್ನು ಕಾಪಾಡುವುದರಲ್ಲಿ ತಾವು ಮೊದಲಿಗರೆಂದು ನಾನು ಅಂದುಕೊಂಡಿದ್ದೇನೆ. ತಾವು ದಯಮಾಡಿ ಈ ಸದನದ ಸಂಪ್ರದಾಯವನ್ನು ಕಾಪಾಡಬೇಕು. ಏಕೆಂದರೆ ಈ ಸದನದ ಹಕ್ಕಿಗೆ ಮಾನ್ಯ ಮುಖ್ಯಮಂತ್ರಿಗಳು ನೇರವಾಗಿ ಚ್ಯುತಿ ಮಾಡಿದ್ದಾರೆ. ಕನ್ನಡಿಗರ ಪರವಾಗಿ ಕೈಗೊಂಡ ಈ ನಿರ್ಣಯದ ವಿರುದ್ಧವಾಗಿ ಅವರು ನಡೆದುಕೊಂಡಿರುವುದು ಬಹಳ ಅಪರಾಧವಾಗಿದೆ ಎಂದು ಹೇಳಿ ಇದನ್ನು ಹಕ್ಕುಚ್ಯುತಿ ಸಮಿತಿಗೆ ಕಳಿಸಬೇಕೆಂದು ಮತ್ತೊಮ್ಮೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಚಂದ್ರೇಗೌಡರು ಈ ವಿಷಯವಾಗಿ ಪ್ರಸ್ತಾಪ ಮಾಡಿದ್ದಾರೆ. ಕಬಿನಿ ಜಲಾಶಯ ಇರತಕ್ಕಂಥ ಕ್ಷೇತ್ರದಿಂದ ಬಂದಿರತಕ್ಕಂಥ ಶಾಸಕರು ಇಲ್ಲಿ ಇದ್ದಾರೆ. ಅವರು ಆ ನಿರ್ಣಯಕ್ಕೆ ಪಾಲುದಾರರು ಕೂಡ ಹೌದು. ದಯವಿಟ್ಟು ಅಲ್ಲಿ ಏನು ನಡೆದಿದೆ. ಎನ್ನುವುದನ್ನಾದರೂ ಅವರು ಹೇಳಲಿ.

ಶ್ರೀ ವಾಟಾಳ್ ನಾಗರಾಜ್ : ಅವರು ಬಹಳ ಗಂಭೀರವಾಗಿ ಕುಳಿತಿದ್ದಾರೆ. ಅವರನ್ನು ಈಗ ಈ ರಾಜಕೀಯಕ್ಕೆ ಎಳೆಯುವುದು ಬೇಡ. ನಾನು ಕೂಡ ಕಬಿನಿ, ಕಾವೇರಿ ಭಾಗದಿಂದ ಬಂದಿರುವವನಾಗಿದ್ದೇನೆ. ಆದಕ್ಕಾಗಿ ತಾವು ನನ್ನ ಮಾತನ್ನು ಸ್ವಲ್ಪ ಕೇಳಬೇಕು.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಯಾರು ಯಾರು ಮಾತನಾಡಬೇಕೆನ್ನುವುದಕ್ಕೆ ತಾವು ಆದೇಶವನ್ನು ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ : ತಾವು ಮಾನ್ಯ ವೆಂಕಟೇಶ್‌ರವರನ್ನು ಏತಕ್ಕೆ ತೋರಿಸುತ್ತೀರಿ.

ಶ್ರೀ ಕಾಗೋಡು ತಿಮ್ಮಪ್ಪ : ಅವರು ಅಲ್ಲಿರುವವರು, ಹೆಗ್ಗಡದೇವನಕೋಟೆ ಅವರ ಕ್ಷೇತ್ರ. ಹೆಗ್ಗಡದೇವನಕೋಟೆಯಲ್ಲಿ ಕಬಿನಿ ಇರುವುದು.

ಪ್ರೊ ಎಂ.ಡಿ. ನಂಜುಂಡಸ್ವಾಮಿ : ಸನ್ಮಾನ್ಯ ಅಧ್ಯಕ್ಷಿಣಿಯವರೇ, ಒಂದು ಮಾತನ್ನು ಅವರು ಹೇಳಿದರು. ನಾನು ಬೆಳಿಗ್ಗೆ ಇದೇ ವಿಚಾರದಲ್ಲಿ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ತಿಮ್ಮಪ್ಪನವರು ಒಂದು ಪ್ರಶ್ನೆ ಎತ್ತಿದರು. ಅದಕ್ಕೆ ನಮ್ಮ ಮಾನ್ಯ ವೆಂಕಟೇಶ್‌ರವರನ್ನು ಏತಕ್ಕೆ ಕಷ್ಟಕ್ಕೆ ಸಿಕ್ಕಿಸುತ್ತೀರೆಂದು ಮಾನ್ಯ ವಾಟಾಳ್ ನಾಗರಾಜ್ ಕೇಳಿದರು. ನಾನು ಒಪ್ಪುತ್ತೇನೆ, ಕಬಿನಿ ಜಲಾಶಯ ಅವರ ಕ್ಷೇತ್ರದಲ್ಲಿದೆ. ಅವರು ಏನು ಹೇಳಿಕೆಯನ್ನು ಕೊಡುತ್ತಾರೋ ಅದನ್ನು ಕೊಡಲಿ. ಅನಂತರ ನಾನು ಹೇಳಿಕೆಯನ್ನು ಕೊಡುತ್ತೇನೆ. ಕಬಿನಿ ಜಲಾಶಯದಿಂದ 5 ಟಿ.ಎಂ.ಸಿ. ಎಫ್.ಟಿ. ನೀರನ್ನು ತಮಿಳುನಾಡಿಗೆ ಕದ್ದುಬಿಟ್ಟಿದ್ದಾರೋ ಅಥವಾ ಇಲ್ಲವೋ ಅದನ್ನು ಆ ಕ್ಷೇತ್ರದ ಶಾಸಕರೇ ಹೇಳಲಿ. ಅನಂತರ ನಾನು ದಾಖಲೆಗಳನ್ನು ನಿಮ್ಮ ಮುಂದೆ ಇಡುತ್ತೇನೆ.

ಉಪಾಧ್ಯಕ್ಷಿಣಿಯವರು : ಮಾನ್ಯ ಶಿವಾನಂದ ಕೌಜಲಗಿಯವರು. ಅವರು ಇಲ್ಲ. ಈಗ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ.

ಶ್ರೀ ಡಿ.ಬಿ. ಚಂದ್ರೇಗೌಡ : ಈಗ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳುವುದಕ್ಕೆ ಮುಂಚೆ ನನ್ನ ವಾದವನ್ನು ಹೇಳುತ್ತೇನೆ. ನಾನು ಮೊದಲು ಸರ್ಕಾರದ ಡಿ.ಓ. ಲೆಟರ್ ಬಗ್ಗೆ ರೆಫರ್ ಮಾಡಿದ್ದೆ. ಈಗ ಡಿ.ಓ. ಲೆಟರ್‌ನ ಒಂದು ಭಾಗವನ್ನು ಮಾತ್ರ ಓದುತ್ತೇನೆ. ಡಿ.ಓ. ಲೆಟರ್ ಡಿ.ಓ. ಲೆಟರ್ ನಂಬರ್ ಡಬ್ಲ್ಯೂಆರ್‌ಡಿ, ಪಿಎಸ್. ಸಿಎಯು. ಆಗಸ್ಟ್ 1992--93 ಅದು ಡಿಯರ್ ಶ್ರೀ ರಂಗಪ್ಪ, ಚೀಫ್ ಇಂಜಿನಿಯರ್, ವಾಟರ್ ರಿಸೋರ್ಸಸ್ ಡೆವೆಲಪ್‌ಮೆಂಟ್ ಅಥಾರಿಟಿ ಎಂದು ಇದೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಅದು ಆಗಸ್ಟ್ ಅಲ್ಲ ಅನಂತರ Cauvery Guaging Division ಅಂತ ಆದಿರಬೇಕು, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕ್ಲಾರಿಫಿಕೇಷನ್ ಕೊಡಬೇಕು. ಇದು ವಿಚಿತ್ರವಾದ ಒಂದು ಕಾಗದ, ಡಿ.ಓ. ನಂಬರ್ ಎಲ್ಲ ಸ್ಪಷ್ಟವಾಗಿದೆ. ಆದರೆ ತಾರೀಖು ಮಾತ್ರ ಇಲ್ಲ. ಆದ್ದರಿಂದ ಇದನ್ನು ಯಾವಾಗ ಕಳುಹಿಸಿದ್ದಾರೆನ್ನುವುದನ್ನು ತಿಳಿದುಕೊಳ್ಳಬೇಕು. ಅದಕ್ಕಾಗಿ ಕೊನೆ ಪ್ಯಾರಾ ಓದಿದೆ. ಚೀಫ್ ಎಂಜಿನೀಯರ್ ಇರಿಗೇಷನ್ ಡೆವಲಪ್‌ಮೆಂಟ್ ಅವರು ಹಾಕಿರುವ ಡಿ.ಓ. ಲೆಟರ್. ಇದು ಕಾನ್‌ಫಿಡೆನ್‌ಷಿಯಲ್ ಎಂದಮೇಲೆ, ಇದನ್ನು ಯಾರಿಗೆ ಹಾಕಿದ್ದಾರೆಂದರೆ ಶ್ರೀ ಜಿ.ಕೆ. ರಂಗಪ್ಪ, ಎಕ್ಸಿಕ್ಯುಟೀವ್ ಇಂಜಿನೀಯರ್, ಗೇಜಿಂಗ್ ಡಿವಿಜನ್, ಹಾಸನ ಹೇಮಾವತಿಗೆ ಸಂಬಂಧಪಟ್ಟಂತೆ ಹೋಗಿದೆ. ಇದನ್ನು ಯಾವಾಗ ಕಳುಹಿಸಿದ್ದಾರೆನ್ನುವುದನ್ನು ಇದರಿಂದ ತಿಳಿದುಕೊಳ್ಳಬಹುದು. ಕೊನೆ ಪ್ಯಾರಾ ನೋಡಿ. This is penultimate para.

"In terms of the tribunal order, quantities have been mentioned for releases to be effected every week. In view of the above, it should be ensured that flows at these above stations should be made available especially on the 8th, 15th, 22nd and 29th June and likewise, during the remaing months. The totall flow passing through stations during that week should be properly checked and information made available to this office. Any lapse on this account will be viewed very seriously."

ಆ ನಂತರ 8ನೇ ಜೂನ್‌ಗೆ ಮುಂಚಿತವಾಗಿ ಡಿ.ಓ. ಲೆಟರ್‌ನ್ನು ಹೇಮಾವತಿ ಇರಿಗೇಷನ್ ಗೇಜಿಂಗ್ ಡಿವಿಜನ್‌ಗೆ ಕಳುಹಿಸಿದ್ದಾರೆ. ಆ ಕಾರಣದಿಂದ ಸ್ವಲ್ಪ ಅವಕಾಶವನ್ನು ಕೊಟ್ಟರೆ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ. ನಾವು ಒಂದು ಒಪ್ಪಂದಕ್ಕಾದರೂ ಬರೋಣ ಎನ್ನುವ ತೀರ್ಮಾನಕ್ಕೆ ಬಂದಿದ್ದೇವೆ. ಏತಕ್ಕೆಂದರೆ ಸುಳ್ಳು ಹೇಳಿ ನೀರನ್ನು ಬಿಡುವಂಥ ಸಂದಿಗ್ದಕ್ಕೆ ಈ ಸರ್ಕಾರ ಸಿಕ್ಕಿತ್ತು. ಮತ್ತೆ ಸೋಮವಾರದವರೆಗೆ ಸಿಕ್ಕಿಗೆ. ಸೋಮವಾರದ ನಂತರ ಕರ್ನಾಟಕದ ಜನರಿಗೆ ಮೋಸ ಮಾಡಬೇಡಿ. ಈ ಸದನದ ತೀರ್ಮಾನಕ್ಕೆ ಅವಮಾನ ಮಾಡಬೇಡಿ ಎಂದು ನನ್ನ ವಿನಂತಿ.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಡಿ.ಬಿ. ಚಂದ್ರೇಗೌಡ : ಬೆಳಿಗ್ಗೆ ಸಭಾಧ್ಯಕ್ಷರು ನಿಮ್ಮ ಹತ್ತಿರ ಮಾಹಿತಿ ಇದ್ದರೆ ಕೊಡಿ ಎಂದು ಹೇಳಿದರು. ಅದೇ ರೆಫರೆನ್ಸ್ ಅನ್ನು ಈಗ ಅವರು ಓದಿದ್ದಾರೆ.

+ ಶ್ರೀ ಎಸ್. ಬಂಗಾರಪ್ಪ : (ಮುಖ್ಯಮಂತ್ರಿಗಳು) ಮಾನ್ಯ ಸಭಾಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಬೇರೆ ಪಕ್ಷದ ಮುಖಂಡರು ಮತ್ತು ಸದಸ್ಯರು ಮೂಲಭೂತವಾಗಿ ಹಕ್ಕುಚ್ಯುತಿ ನಿರ್ಣಯವನ್ನು ಮಂಡನೆ ಮಾಡುವುದಕ್ಕೆ ತಮ್ಮ ಅನುಮತಿಯನ್ನು ಕೇಳಿದ್ದಾರೆ. ಆದರೆ ಈ ಕಡೆಯಿಂದ ಕ್ರಿಯಾಲೋಪ ಎತ್ತಿದರೂ ಕೂಡ ನಡೆದಿರತಕ್ಕದ್ದು ಕಾವೇರಿ ಜಲವಿವಾದದ ವಿಷಯದಲ್ಲಿ ಮಧ್ಯಂತರ ಆಜ್ಞೆಯನ್ನು ಒಳಗೊಂಡಂತೆ ಅದರ ಚರಿತ್ರೆಯನ್ನು ಸ್ಥೂಲವಾಗಿ ಪ್ರಸ್ತಾಪ ಮಾಡುವುದರಿಂದ ಹಿಡಿದು ಅನೇಕ ವಿಚಾರಗಳು ಪ್ರಸ್ತಾಪಕ್ಕೆ ಬಂದವು. ಬಂತು ಎಂದಲ್ಲ, ತಾವು ಸರ್ಕಾರ ನಡೆಸತಕ್ಕ ಸಂದರ್ಭದಲ್ಲಿ ಅಲ್ಲ ಅದಕ್ಕೂ ಮೊದಲೇ ನಾವು ಅನೂಚಾನವಾಗಿ ಅಥವಾ ಅವಿಚ್ಛಿನ್ನವಾಗಿ ನಡೆಸಿಕೊಂಡು ಬಂದಿರತಕ್ಕದ್ದು ಒಂದೇ ಒಂದು ವಿವರರಹಿತವಾದ ಚರ್ಚೆಯನ್ನು ನಾವು ಮಾಡಬೇಕು ಅಂದರೆ ಅದು ನಾಳೆ ನಮ್ಮ ಹಿತಕ್ಕೆ ಧಕ್ಕೆ ಬಂದೀತು. ಈ ಸದನದಲ್ಲಿ ಚರ್ಚೆಗೆ ವಿವರ ಇಲ್ಲದೆ ಗ್ರಾಸ್ ಮಾಡಿದರೆ ಉದಾಹರಿಸುವುದಕ್ಕೆ ಅವು ಅವಕಾಶ ಮಾಡಿಕೊಟ್ಟಾವು ಎಂದು ಪಕ್ಷಾತೀತವಾಗಿ ನಾವು ವಿಷಯವನ್ನು ಇಟ್ಟುಕೊಂಡು ನಡೆದುಕೊಂಡು ಬಂದಿದ್ದೇವೆ. ತಾವಾದರೂ ಕೂಡ ಆ ಒಂದು ಅಭಿಪ್ರಾಯವನ್ನು ಮೀರಿ, ಬಹಳ ಮೀರಿ ಹೋಗಿದ್ದೀರಿ ಎಂದು ಹೇಳುವುದಿಲ್ಲ. ಈಗಲೂ ಕೂಡ ಆ ರೀತಿ ಹೋಗುವುದಿಲ್ಲವೆಂಬ ಭಾವನೆಯಿಂದ ಮಾತನಾಡುತ್ತಿದ್ದೇನೆ. ಮಾತನಾಡತಕ್ಕ ಸಂದರ್ಭದಲ್ಲಿ ಸಾಂದರ್ಭಿಕವಾಗಿ ಪ್ರಸ್ತಾಪಕ್ಕೆ ಬಂತು. ಕೆಲವೊಮ್ಮೆ ನಾವು ತಪ್ಪುಗಳನ್ನು ಮಾಡಿದ್ದೇವೆ. ಟ್ರಿಬ್ಯುನಲ್ ರಚನೆಯಿಂದ ಹಿಡಿದು ತಪ್ಪುಗಳು ನಡೆದಿವೆ ಎಂಬ ಅಭಿಪ್ರಾಯ ಸುಪ್ರೀಂಕೋರ್ಟ್ ಆದೇಶದ ಪ್ರಕಾರ ಇದೆ. ಆ ವಿವರಗಳಿಗೆ ಹೋಗುವುದಿಲ್ಲ. ಹಿಂದೆ

ಕೂಡ ಇದಕ್ಕೆ ಯಾರು ಕಾರಣ ಏನು ಎಂದು ಚಕಾರ ಶಬ್ದ ಎತ್ತಿಲ್ಲ, ಎತ್ತಲೂ ಬಾರದು. ಜವಾಬ್ದಾರಿ ಪ್ರಶ್ನೆ ಇದರಲ್ಲಿ ಅಡಗಿದೆ. ಈ ಮಾತು ಹೇಳುವುದಕ್ಕೆ ಕಾರಣವಿದೆ, ಇವತ್ತು ನಾವು ನೀವು ಎಲ್ಲರೂ ಸೇರಿ ಕಾವೇರಿ ಜಲವಿವಾದದ ವಿಷಯದಲ್ಲಿ ಒಗ್ಗಟ್ಟಿನಿಂದ ರಾಜ್ಯದ ಹಿತವನ್ನು ಕರ್ನಾಟಕ ರಾಜ್ಯದ ರೈತರ ಹಿತವನ್ನು ಕಾಪಾಡುವುದರಲ್ಲಿ ಒಗ್ಗಟ್ಟಿನಿಂದ ನಡೆದುಕೊಂಡು ಇರಬಹುದು, ಮೊನ್ನೆ ಸರ್ಕಾರದವರು ವಿರೋಧ ಪಕ್ಷಗಳ ಸಭೆ ಕರೆದಿರತಕ್ಕ ಸಂದರ್ಭದಲ್ಲಿ ತಾವು ಬಹಿಷ್ಕಾರ ಹಾಕಬೇಕೆಂಬ ತೀರ್ಮಾನ ಮಾಡಿದ್ದೀರಿ. ಅದರ ಬಗ್ಗೆ ವ್ಯಾಖ್ಯಾನವನ್ನು ಪತ್ರಿಕೆಗಳಲ್ಲಿ ನೋಡಿದ್ದೇನೆ. ನಾನು ನನ್ನ ಜವಾಬ್ದಾರಿ ಅರಿತು ರಾಜ್ಯದ ಹಿತವನ್ನು ಗಮನದಲ್ಲಿಟ್ಟು ಎರಡು ಮಾತನ್ನು ಪತ್ರಿಕೆಗೆ ಹೇಳಿದ್ದೇನೆ. ಒಂದು, ಅವರು ಬರಬೇಕಾಗಿತ್ತು, ಬಾರದೇ ಇರುವುದರಿಂದ ಮನಸ್ಸಿಗೆ ನೋವಾಗಿದೆ. ಎರಡನೆಯದಾಗಿ, ಮುಂದೆ ಬರುತ್ತಾರೆಂಬ ಆಸೆಯನ್ನು ಇಟ್ಟುಕೊಂಡಿದ್ದೇನೆಂಬ ಮಾತನ್ನು ಹೇಳಿ ಮುಕ್ತಾಯ ಮಾಡಿದ್ದೇನೆ. ಮತ್ತೆ ಯಾವುದೇ ಚಕಾರ ಶಬ್ದ ಆಡಿಲ್ಲ. ಕಾರಣ ಇರಬಹುದು. ಕೆಲವು ಕಾರಣಗಳ ಆಧಾರದ ಮೇಲೆ ತಾವು ಆ ಅಭಿಪ್ರಾಯಕ್ಕೆ ಬರುವುದಕ್ಕೆ, ಆ ತೀರ್ಪಿಗೆ ಬರುವುದಕ್ಕೆ, ಬಹಿಷ್ಕಾರ ಹಾಕುವುದಕ್ಕೆ ಕಾರಣಗಳು ತಮಗೆ ಇರಬಹುದು. ಏನು ಎಂಬ ವಿವರಣೆಗೆ ನಾನು ಹೋಗುವುದಿಲ್ಲ. ಅದರ ಅವಶ್ಯಕತೆ ಈಗ ಇದೆ ಎಂದು ನಾನು ಭಾವಿಸುವುದಿಲ್ಲ. ಆದರೆ ನಾನು ಈಗಲೂ ಕೂಡ ಯಾವ ಮಾತನ್ನು ಪತ್ರಿಕೆಯಲ್ಲಿ ಹೇಳಿದ್ದೇನೋ ಅದೇ ಮಾತನ್ನು ನಾನು ಇಲ್ಲಿ ಪುನಃ ಉಚ್ಚಾರ ಮಾಡುತ್ತಿದ್ದೇನೆ. ಇವತ್ತು ನಾವೇನೋ ಅಧಿಕಾರದಲ್ಲಿರಬಹುದು. ನಾಳೆ ತಾವು ಅಧಿಕಾರಕ್ಕೆ ಬರತಕ್ಕ ಸಂದರ್ಭ ಕೂಡ ಬರಬಹುದು, ಪ್ರಜಾಪ್ರಭುತ್ವದಲ್ಲಿ ಇದೆಲ್ಲಾ ಸಾಮಾನ್ಯ. ಸಹಕಾರ ಕೊಡತಕ್ಕ ಸಂದರ್ಭ ಬಂದಾಗ ತಾವು ಕೊಟ್ಟಿದ್ದೀರಿ. ನಾವು ಆ ಕಡೆ ಕುಳಿತಾಗಲೂ ತಾವು ಸರ್ಕಾರ ನಡೆಸತಕ್ಕ ಸಂದರ್ಭದಲ್ಲಿ ನಾವು ಸಹಕಾರ ಕೊಟ್ಟಿದ್ದೇವೆ. ಮುಂದೆ ಕೂಡ ಅದೇ ಸಹಕಾರವನ್ನು ನಾವು ಇಚ್ಛೇ ಮುಂದಕ್ಕೆ ಹೋಗತಕ್ಕ ಸಂದರ್ಭ, ಈ ವಿಷಯ ಅಂತಿಮವಾಗಿ ಇತ್ಯರ್ಥವಾಗುವವರೆಗೆ ಇದು ನಮ್ಮ ನಮ್ಮಲ್ಲಿ ಇರಲೇಬೇಕಾಗುತ್ತದೆ ಎಂಬ ಮೂಲಭೂತವಾದ ವಿಚಾರದ ಹಿನ್ನೆಲೆಯಲ್ಲಿ ಹಾಗೂ ಜವಾಬ್ದಾರಿಯ ಹಿನ್ನೆಲೆಯಲ್ಲಿ ನಾನು ಈ ಮಾತನ್ನು ಆಡಿದ್ದೇನೆ. ಹಾಗೂ ನಾನು ಆ ರೀತಿಯಾಗಿ ನಿರೀಕ್ಷೆ ಕೂಡ ಮಾಡುತ್ತೇನೆ. ಸರ್ಕಾರದ ವತಿಯಿಂದ ಏನಾದರೂ ತಪ್ಪುಗಳಾಗಿದ್ದರೆ ಸರಿಪಡಿಸಿಕೊಳ್ಳುವುದಕ್ಕೆ ನಾವು ಸಿದ್ಧರಾಗಿದ್ದೇವೆ. ಎನ್ನತಕ್ಕ ಮಾತನ್ನು ನಾನು ಪದೇ ಪದೇ ಹೇಳುತ್ತೇನೆ. ಎಲ್ಲಾದರೂ ತಪ್ಪುಗಳು ನೀವು ಮಾಡಿದ್ದೀರಿ ಎಂಬ ಮಾತನ್ನು ನಾನು ಆಡುತ್ತಿಲ್ಲ. ಯಾವ ಗ್ರಹಿಕೆಯಿಂದ ಬಹಿಷ್ಕಾರ ಮಾಡಿದ್ದೀರೋ ನನಗೆ ಗೊತ್ತಿಲ್ಲ. ಅಲ್ಲಿ ಕಾರಣಗಳು ಸರಿಯಾಗಿಲ್ಲ ಎಂದು ಇಂದಲ್ಲ ನಾಳೆ ತಮಗೆ ಕಂಡುಬಂದರೆ ಬಹಿಷ್ಕಾರದ ಮಾತನ್ನು ಬದಿಗೊತ್ತಿ ಸಭೆಯಲ್ಲಿ ನಾವೆಲ್ಲರೂ ಸೇರಿ ಒಟ್ಟಿಗೆ ಕಲೆತು ಅಥವಾ ಕುಳಿತು ಮಾತನಾಡತಕ್ಕ ದಿನವನ್ನು ಅತಿ ಹತ್ತಿರದಲ್ಲಿ ತಂದುಕೊಳ್ಳತಕ್ಕ ಅವಶ್ಯಕತೆ ರಾಜ್ಯದ ಹಿತದೃಷ್ಟಿಯಿಂದ ಕಾವೇರಿ ಜಲವಿವಾದದ ಹಿತವನ್ನು ಕಾಪಾಡತಕ್ಕ ದೃಷ್ಟಿ ಅಡಗಿದೆ ಎಂದು ನಾನು ಸ್ಪಷ್ಟವಾಗಿ ಭಾವಿಸುತ್ತೇನೆ. ಇದೊಂದು ವಿಚಾರ, ಸರ್ಕಾರದ ಒಂದು ಚಿಂತನೆ, ತಮ್ಮನ್ನು ಕುರಿತು. ಇದರ ಅರ್ಥ ಒಂದೇ ಒಂದು ಮಾತಿನಲ್ಲಿ ಹೇಳುವ ಹಾಗಿದ್ದರೆ ನೀವು ಇಷ್ಟಾದರೂ ಮಾತನಾಡಿ. ಹೇಳುವುದಕ್ಕೆ ಕಳಕಳಿ ಇದೆ ಎನ್ನತಕ್ಕ ಅರಿವನ್ನು ಎಲ್ಲೋ ದೂರ ಇಟ್ಟು ಮಾತನಾಡುವವನು ನಾನಲ್ಲ. ಅಂಥ ಸರ್ಕಾರ ಇದಲ್ಲ. ತಮ್ಮ ಕಳಕಳಿ ನನಗೆ ಅರ್ಥವಾಗುತ್ತದೆ. ಪದ ಪ್ರಯೋಗ, ಹೇಳತಕ್ಕ ಧಾಟಿ, ರೀತಿನೀತಿಗಳು ವ್ಯತ್ಯಾಸ ಬರತಕ್ಕದ್ದು ಸಹಜ. ಸಂಸದೀಯ ವ್ಯವಹಾರದಲ್ಲಿ ಕೆಲವೊಮ್ಮೆ ಇಂಥ ವಿಚಾರವನ್ನೂ ನಾವು ನಿರೀಕ್ಷೆ ಮಾಡಿಯೇ ನಾವು ಮುಂದಕ್ಕೆ ಹೆಜ್ಜೆ ಇಡತಕ್ಕ ಸಂದರ್ಭ ಇದೆ. ಆದರೆ ಒಂದೇ ಒಂದು ಮಾತು. ನಾವು ಇನ್ನೇನು ನಮ್ಮ ನಿಮ್ಮ ಸಂಬಂಧ ಹೋಗಿಬಿಡ್ತು ಎಂಬ ವಿಚಾರಕ್ಕೆ, ಒಂದು ಅಭಿಪ್ರಾಯಕ್ಕೆ ಬಂದುಬಿಟ್ಟರೆ ನಾಳೆ ಪೆಟ್ಟು ಬಿದ್ದೀತು ಎಂಬ ವಿಚಾರ ನನ್ನ ಮನಸ್ಸಿನಲ್ಲಿದೆ. ನಾನು ಯಾವುದೇ ಒಂದು ಅಭಿಪ್ರಾಯದಿಂದ ಹೇಳುತ್ತಿಲ್ಲ. ಯಾವ ಒಂದು ವಿಚಾರವನ್ನು ನಾವು ನೀವು ಕುಳಿತಾಗ ಗಂಟೆಗಟ್ಟಲೆ ಮಾತನಾಡಿದ್ದೇವೆ, ನೀವು ಅಂದರೆ ಎಲ್ಲ ವಿರೋಧ ಪಕ್ಷದ ಮಿತ್ರರು, ಇವತ್ತು ಈ ಸದನದಲ್ಲಿ ಅವರ ಸದಸ್ಯರು ಕೂಡ ಅಂದರೆ ಸಿ.ಪಿ.ಎಂ. ಸಿ.ಪಿ.ಐ. ಇತ್ಯಾದಿ ಇತ್ಯಾದಿ. ಇಲ್ಲಿ ಇಲ್ಲಿ ಅವರನ್ನೂ ಕೂಡ ಕುರಿತಂತೆ ನಾನು

ಮಾತನಾಡುತ್ತಿದ್ದೇನೆ. ಕೆಲವು ರಾಜಕೀಯ ಪಕ್ಷಗಳು ತಮ್ಮ ಪ್ರತಿನಿಧಿಗಳನ್ನು ಸಭೆಗಳಲ್ಲಿ ಹೊಂದಿವೆ, ಮೇಲ್ಮನೆ ಮತ್ತು ಕೆಳಮನೆಯಲ್ಲಿ ಇನ್ನೂ ಕೆಲವು ಪಕ್ಷಗಳು ಹೊಂದಿಲ್ಲ. ಅದು ಚುನಾವಣೆ ಫಲಿತಾಂಶದ ಆಧಾರದ ಮೇಲೆ ಬರತಕ್ಕ ವಿಚಾರ. ಆದರೆ ಅವರು ಅಲ್ಲಿದ್ದಾರೆ ಇಲ್ಲಿದ್ದಾರೆ ಎನ್ನತಕ್ಕದ್ದು ಅಲ್ಲ. ಮೊನ್ನೆಯ ಸಭೆಗೂ ಸಿಪಿಎಂ ಮತ್ತು ಸಿಪಿಐ.ನವರು ಬರುತ್ತಾರೆ ಎಂಬ ವಿಚಾರ ನಮಗೆ ಬಂತು. ಆದರೆ ಎಂ.ಎಸ್. ಕೃಷ್ಣನ್ ಅವರು ಇರಲಿಲ್ಲವಂತೆ, ಆದರೆ ಮಾನ್ಯ ಸಿ.ಪಿ.ಎಂ. ಮುಖಂಡರು, ಮತ್ತೊಬ್ಬರು ಏತಕ್ಕೆ ಬರಲಿಲ್ಲವೋ ನನಗೆ ಗೊತ್ತಿಲ್ಲ. ನಾನು ವಿವರಗಳಿಗೆ ಹೋಗುವುದಿಲ್ಲ. ಆದರೆ ಬಂದರೆ ಬಹಳ ಒಳ್ಳೆಯದಿತ್ತು ಎಂಬ ಆಸೆಯಿಂದ ನಾನು ನಿರೀಕ್ಷೆ ಮಾಡುತ್ತಲೇ ಇದ್ದೆ. ಅದಷ್ಟೇ ಅಲ್ಲ ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮನ್ನು ಎರಡೂ ಮನೆಯ ಬೇರೆ ಬೇರೆ ರಾಜಕೀಯ ಪಕ್ಷಗಳ ಬೇರೆ ಫ್ಲೋರ್ ಲೀಡರ್ಸ್ ಯಾರು ಯಾರನ್ನು ಕರೆದಿದ್ದೆವು. ಅವರೆಲ್ಲರನ್ನೂ ನಿರೀಕ್ಷೆ ಮಾಡಿ ಕುಳಿತು ಆಮೇಲೆ ಸಭೆಯನ್ನು ಮಾಡತಕ್ಕ ಜವಾಬ್ದಾರಿ ಹಿನ್ನೆಲೆಯಲ್ಲಿ ನಾವು ಕೂಡ ಸಭೆ ಮಾಡಿದ್ದೇವೆ. ಆದ್ದರಿಂದ ಜವಾಬ್ದಾರಿ ಸರ್ಕಾರಕ್ಕೆ ಮಾತ್ರ ಇದೆ ಎಂದು ನಾನು ಭಾವಿಸಿಕೊಂಡು ಮಾತನಾಡುತ್ತಿಲ್ಲ. ಇಲ್ಲಿ ಜವಾಬ್ದಾರಿ ಎಲ್ಲರ ತಲೆಮೇಲಿದೆ ಮನಸ್ಸಿನಲ್ಲಿದೆ. ಆ ಕಳಕಳಿಯ ಹಿನ್ನೆಲೆಯಲ್ಲಿ ಈ ಮಾತನ್ನು ನಾನು ಅಷ್ಟಕ್ಕೇ ನಿಲ್ಲಿಸುತ್ತೇನೆ. ಪುನಃ ಮಿಲನ ಎಂದು ನಾನು ಕರೆಯುವುದಕ್ಕೆ ಹೋಗುವುದಿಲ್ಲ. ಏನು ಕಡಿದು ಕಡಿದು ಪೂರ್ವ ಪಶ್ಚಿಮ ಎಂದು ಕುಳಿತಿಲ್ಲ. ಕೌರವರು ಪಾಂಡವರು ಅಲ್ಲ ಈ ವಿಚಾರದಲ್ಲಿ, ಪುನಃ ಸನಿಹಕ್ಕೆ ಬರತಕ್ಕ ಸಂದರ್ಭ ಇದೆ. ಅದು ಮಾನಸಿಕವಾಗಿ ಸನ್ನದ್ಧರಾಗಿ ನಾವು ಇಲ್ಲಿ ನಿರೀಕ್ಷೆ ಮಾಡಿಕೊಂಡೇ ಹೋಗೋಣ ಇನ್ನು..........

ಶ್ರೀ ಸಿ. ಬೈರೇಗೌಡ : ಬೇಕಿ ಬಾಯ್‌ಕಾಟ್ ಮಾಡುವುದಕ್ಕೆ ನಮಗೆ ಸೂಚನೆ ಕೊಡುತ್ತಿದ್ದೀರಿ. ಅದಕ್ಕೆ ಧನ್ಯವಾದಗಳು.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೆ, ಹಕ್ಕುಚ್ಯುತಿ ನಿರ್ಣಯ ಬರತಕ್ಕ ವಿಚಾರ. ಮಾನ್ಯ ಸದಸ್ಯರ ಕಳಕಳಿ ವಿಚಾರ. ಏಕೆಂದರೆ ಮತ್ತೊಂದು ಸಾರಿ ಚರ್ಚೆ ಬರುತ್ತದೋ ಇಲ್ಲವೋ ಎಂಬ ದೃಷ್ಟಿಯಿಂದ ಮಾತನಾಡಿದ್ದಾರೆ. ನನಗೆ ಅರ್ಥವಾಗುತ್ತದೆ. ನಾನು ತಪ್ಪು ಎಂದು ಗ್ರಹಿಸಿಲ್ಲ. ಆದರೆ ಒಂದೇ ಒಂದು ವಿಚಾರ. ಕೆಲವು ವಿಚಾರದಲ್ಲಿ ತಾವು ವಿವರಗಳಿಗೆ ಹೋಗತಕ್ಕ ಪ್ರಯತ್ನ ಮಾಡಿದ್ದೀರಿ ನನಗ ಏಕೋ ಮನಸ್ಸಿನಲ್ಲಿ ಇದು ಬೇಡವೇನೋ ಎಂಬ ಭಾವನೆ ಬಂತು. ಆದರೂ ಕೂಡ ಬೇಡ, ಮತ್ತೆ ನಿಮ್ಮ ಮನಸ್ಸಿನಲ್ಲಿ ಏನು ಬರುತ್ತದೋ ಎಂದು ಹೇಳುವುದಕ್ಕೆ ಹೋದವನು ನಾನು ಸಹಾಗೇ ಒಂದು ಸಂದರ್ಭದಲ್ಲಿ ಕುಳಿತುಕೊಂಡೆ ವಿವರಗಳು ಇವತ್ತು ಪ್ರಸ್ತಾಪ ಮಾಡುವುದಕ್ಕೆ ತಮ್ಮ ಅಭ್ಯಾಸದ ಹಿನ್ನೆಲೆಯಲ್ಲಿ ತಮಗೆ ಸಾಧ್ಯ ಇದೆ. ಅದೇ ರೀತಿ ಬೇರೆ ಸದಸ್ಯರಿಗೂ ಕೂಡ ಇದ್ದೇ ಇರುತ್ತದೆ. ಅದರಂತೆ ನಮಗೂ ಕೂಡ ಇದೆ. ನಾವು ಕೂಡ ನಮಗೆ ತಿಳಿದ ಹಾಗೆ ಅಲ್ಪಸ್ವಲ್ಪ ಅಭ್ಯಾಸ ಮಾಡಿಕೊಂಡೇ ಬಂದಿದ್ದೇವೆ. ಇವತ್ತಲ್ಲ, ವಿರೋಧ ಪಕ್ಷದ ನಾಯಕರಾಗಿದ್ದ ಕಾಲದಲ್ಲಿ, ಸದಸ್ಯರಾಗಿದ್ದ ಕಾಲದಲ್ಲಿ ನಮ್ಮ ಅನುಭವದ ಹಿನ್ನೆಲೆಯಲ್ಲಿ ನಾವು ಕೂಡ ಕೆಲ ಪ್ರಮಾಣದಲ್ಲಿ ವ್ಯತ್ಯಾಸ ಇದ್ದರೂ ಕೂಡ It may vary in degrees but everybody has got that experience since everybody is committed to the cause of Karnataka State as far as the Cauvery dispute is concerned. ಆ ದೃಷ್ಟಿಯಿಂದ ನಾನು ವಿವರಗಳಿಗೆ ಹೋಗತಕ್ಕ ವಿಚಾರ ಬೇಡ ಎನ್ನತಕ್ಕ ಮಾತನ್ನು ಇವತ್ತು ಒಳಗಡೆ ನಡೆದಂತಹ ಸಭೆಯಲ್ಲಿ ಹೇಳಿದ್ದೇನೆ. ಇಲ್ಲೂ ಕೂಡ ಹೇಳಿದ್ದೇನೆ. ಇಲ್ಲೂ ಕೂಡ ಇದೇ ಅಭಿಪ್ರಾಯವಿದೆ. ನಾನು ವಿವರಗಳಿಗೆ ಈ ಸಂದರ್ಭದಲ್ಲಿ ಹೋಗುತ್ತಿಲ್ಲ. ಈಗ "ರಿಲೀಸ್ ಆಫ್ ವಾಟರ್" ಬಗ್ಗೆ ನಾನು ಬರುತ್ತೇನೆ. ಅದರ ಬಗ್ಗೆ ಒಂದು ಮಾತು ಆಡಬೇಕು. ಏಕೆಂದರೆ ತಮಗೆ ಸಂಶಯ ಬರತಕ್ಕ ಎರಡೇ ಎರಡು ಕಾರಣಗಳು. ಒಂದು ಹಕ್ಕುಚ್ಯುತಿ ಬರುವುದಕ್ಕೆ ಈ ಶಾಸನಸಭೆಯಲ್ಲಿ ನಾವು ತೆಗೆದುಕೊಂಡಿರತಕ್ಕ ನಿರ್ಣಯಕ್ಕೆ ವಿರೋಧವಾಗಿದೆ ನಮ್ಮ ನಡವಳಿಕೆ ಆ ರೀತಿ ಇದೆ ಎನ್ನತಕ್ಕದ್ದು ಒಂದು ಅದರೆ, ಮತ್ತೊಂದು ನೀರು ಬಿಡತಕ್ಕ ವಿಚಾರದಲ್ಲಿ ಇದಕ್ಕೆ ಸಂಪೂರ್ಣವಾದ ಸ್ಫೂರ್ತಿ ನೆಲೆ ಸಿಕ್ಕಿರತಕ್ಕದ್ದು ಶ್ರೀಮಾನ್ ವಿ.ಸಿ.ಶುಕ್ಲರವರು ಮದ್ರಾಸಿನಲ್ಲಿ ಮಾಡಿರತಕ್ಕ ಒಂದು ಹೇಳಿಕೆ

ಪ್ರಾಮುಖ್ಯವಾಗಿ ಬಂದಿರತಕ್ಕದ್ದು. ಅನಂತರ ಒಂದು ಪತ್ರವನ್ನು ಮಾನಿಟರಿಂಗ್ ಕಮಿಟಿ ಮಾಡತಕ್ಕ ವಿಚಾರದಲ್ಲಿ ಪತ್ರವನ್ನು ಬರೆದಿದ್ದಾರೆ. ತಾವು ಆ ಸಭೆಗೆ ಬಹಿಷ್ಕಾರ ಹಾಕಿದ್ರಿ. ಆದರೆ ಅವೊತ್ತು ನಾವೊಂದು ತೀರ್ಮಾನ ಮಾಡಿದ್ದೇವೆ. "We have rejected" - - - ನಾನು ಆ ಪದ ಪ್ರಯೋಗ ಮಾಡಿದ್ದೇನೆ. ರಾಜ್ಯದ ಹಿತದೃಷ್ಟಿಯಿಂದ ತಮ್ಮ ಅಪ್ಪಣೆ ಪಡೆದು ಹೇಳುವಹಾಗೆ ಇದ್ದರೆ, ನೀವು ಮಾಡಿರತಕ್ಕ ಸಲಹೆ ಏನಿದೆ ಅದು ಸರಿಯಿದೆ. ಶುಕ್ಲರವರು ಬರೆದ ಪತ್ರದ ಬಗ್ಗೆ ಮಾನ್ಯ ಯಡಿಯೂರಪ್ಪನವರು ಕೇಳಿದ್ದಾರೆ. ಪತ್ರಿಕೆಯಲ್ಲಿ ಹೇಳಿದ್ದೇವೆ, ನಿಮಗೆ ಕೊಡುವುದಕ್ಕಾಗುವುದಿಲ್ಲವೇ? ಅದರ ಕಾಪಿಯನ್ನು ಕಳುಹಿಸಿ ಕೊಡುತ್ತೇನೆ. ಅದನ್ನು ಸಭೆಯ ಮುಂದೆ ಇಡುತ್ತೇನೆ. ಅದರಲ್ಲಿ ಮುಚ್ಚುಮರೆ ಇರತಕ್ಕದ್ದು ಏನೇನೂ ಇಲ್ಲ. ಏಕೆಂದರೆ ಅವರು ಓಪನ್ ಆಗಿ ಲೆಟರ್ ಬರೆದಿದ್ದಾರೆ. ಅದಕ್ಕೆ ನಾವು ಉತ್ತರ ಕೂಡ ಕೊಟ್ಟಿದ್ದೇವೆ. ಎರಡನ್ನೂ ತಮಗೆಲ್ಲ ಕಳುಹಿಸುತ್ತೇನೆ. ಅದರ ಬಗ್ಗೆ ತಮಗೆ ಏನೇನೂ ಚಿಂತೆ ಬೇಕಾಗಿಲ್ಲ. ಅದರಲ್ಲಿ ಮುಚ್ಚುಮರೆ ಮಾಡುವುದಕ್ಕೆ ಏನೇನೂ ಇಲ್ಲ. ಒಂದೆ ಒಂದು, ಪಾಂಡಿಚೇರಿಯ ವೈದ್ಯಲಿಂಗಂರವರ ನೇತೃತ್ವದಲ್ಲಿ ಒಂದು ಸಮಿತಿ ಮಾಡಬೇಕೆಂದು ಪತ್ರ ಬರೆದಿದ್ದಾರೆ. ಅದರ ಒಕ್ಕಣೆ ಇಷ್ಟೇ. ಅವರ ಹೇಳಿಕೆಯ ಬಗ್ಗೆ ಅನಂತರ ಹೇಳುತ್ತೇನೆ. ನಮ್ಮನ್ನು ನೀವು ಕನ್ಸಲ್ಟ್ ಮಾಡಿಲ್ಲ, ಏನಿಲ್ಲ ಯಾವ ವಿಚಾರ ಎನ್ನುವುದು ಗೊತ್ತಿಲ್ಲ, ನಮ್ಮನ್ನು ಕೇಳಿಲ್ಲ, ಒಂದೇ ಸಾರಿಗೆ ಸಮಿತಿ ಮಾಡುತ್ತೇವೆ, ಅದಕ್ಕೆ ನೀವು ಒಪ್ಪಿಗೆ ಕೊಡಿ ಅಂದರೆ ಯಾವ ರಾಜ್ಯ ಕೂಡ ಕೊಡುವುದಕ್ಕಾಗುವುದಿಲ್ಲ. ಈ ಒಂದು ಹಿನ್ನಲೆಯಲ್ಲಿ ಮಾನ್ಯ ಪ್ರಧಾನಮಂತ್ರಿಗಳು ಎಲ್ಲರನ್ನು ಕರೆಸಿ ಇದನ್ನು ಮಾತುಕತೆಯ ಮುಖಾಂತರ ಇತ್ಯರ್ಥ ಮಾಡತಕ್ಕ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. ನೆಗೋಷಿಯೇಷನ್ ಮುಖಾಂತರ ಇದಕ್ಕೆ ಅಂತಿಮ ತೆರೆಯನ್ನು ಎಳೆಯತಕ್ಕ ಅಭಿಪ್ರಾಯವನ್ನು ಮಾನ್ಯ ಪ್ರಧಾನ ಮಂತ್ರಿಗಳು ಹೇಳಿರತಕ್ಕ ಸಂದರ್ಭದಲ್ಲಿ ಮತ್ತೆ ಪದೇ ಪದೇ ಹೇಳುವುದದರಿಂದ ಇದು ಮತ್ತೂ ಉಲ್ಬಣಕ್ಕೆ ಹೋಗುತ್ತದೆನ್ನುವ ಅಭಿಪ್ರಾಯದಿಂದ, this is the word I employed in my reply. "Your proposal, we hereby reject."
ಎನ್ನತಕ್ಕ ಮಾತನ್ನು ನಾನು ಹೇಳಿದ್ದೇನೆ. ನಾವು ಹೇಳುವುದಕ್ಕೆ ಒಂದೇ ಒಂದು ಕಾರಣ, ರಾಬಿಯಸ್ ಮತ್ತೊಂದು ಏನಾಗಿದೆ.? ಹರಿಯಾಣ ಪಂಜಾಬ್ ವಿಚಾರದಲ್ಲಿ ಅದರ ಗತಿ ಏನಾಗಿದೆ? ಎಷ್ಟು ಸಾರಿ ನಾವು ನೀವು ಮಾತನಾಡಿಲ್ಲ? ಅದನ್ನು ಜಾರಿಗೆ ತರುವುದಕ್ಕೆ ಕೇಂದ್ರ ಸರ್ಕಾರ ಏಕೆ ಪ್ರಾಮಾಣಿಕ ಪ್ರಯತ್ನ ಮಾಡಲಿಲ್ಲ ? ಇದಕ್ಕೆ ಏತಕ್ಕೆ ಇಷ್ಟು ಒತ್ತಡ? ಇದನ್ನು ಮಾಡಿ ನಮ್ಮ ಹತ್ತಿರ ಬನ್ನಿಯೆಂದು ಹೇಳುವ ಕಾಲ ನಾಳೆ ಬರಬಹುದು. ಈಗಲೇ ಹೇಳಿಬಿಡಬೇಕು ಎನ್ನುವ ಮಾತನ್ನು ಮಾನ್ಯ ಬೈರೇಗೌಡರು ಸ್ಪೀಡಾಗಿ ಹೇಳಬಹುದು. ಏನೇನೂ ಆಗುವುದಿಲ್ಲ ಸ್ವಲ್ಪ ತಾಳಿ ನಾನು ಹೇಳುತ್ತೇನೆ. ಕಾಲ ಮಿಂಚಿ ಹೋಗಿಲ್ಲ. ಒಂದೇ ನಿಮಿಷದಲ್ಲಿ ಹೇಳುವಂತಹದ್ದು ಇದೆ. ಬಹಿಷ್ಕಾರದ ವಿಚಾರದಲ್ಲಿ ಕೂಡ ಅಷ್ಟ ; ಒಂದೇ ಪತ್ರ ಬರೆದಿದ್ದು ನಾವು ಉತ್ತರ ಕೊಟ್ಟಿರುವುದನ್ನು ನಾನು ಕಳುಹಿಸಿಕೊಡುತ್ತೇನೆ. This is one point. ನಾನು ತಮಗೆ ಹೇಳತಕ್ಕದ್ದು ಏನೂ ಇಲ್ಲ. ತಾವೇ ಓದಿದ್ದೀರಿ ನಾನು ಮತ್ತೆ ಹೇಳುವುದಕ್ಕೆ ಹೋಗುವುದಿಲ್ಲ. As far as the Hon'ble Union Minister for Water Resources, Sri V.C. Shuklaji's statement at Madras is concerned, I am yet to understand why Mr. Shuklaji made this statement. I cannot understand, what prompted him. I am yet to know the reason. ಏತಕ್ಕೆ ಎಂದು ನಮಗೆ ಗೊತ್ತಿಲ್ಲ. ಒಂದು ಹೇಳಿಕೆ ಕೊಟ್ಟು ಕುಳಿತುಕೊಂಡರೆ I have already drawn the attention of the Prime Minister. ಅದರ ಬಗ್ಗೆ ನಾನು ಹೇಳಿದ್ದೇನೆ. ತಮ್ಮ ಸಂಪುಟದ ಸಹೋದ್ಯೋಗಿಯೊಬ್ಬರು ನೀರು ಬಿಟ್ಟಿದ್ದಾರೆಂದು ಹೇಳಿಕೆ ಕೊಟ್ಟುಬಿಟ್ಟರೆ ಹೇಗೆ? ನಾನು ಪ್ರವಾಸದಲ್ಲಿದ್ದ ವಿಚಾರ ಗೊತ್ತಿರಲಿಲ್ಲ. ವಿಚಾರ ಗೊತ್ತಾದ ತಕ್ಷಣ ವಿಚಾರಿಸಿದಾಗ ನೀರು ಬಿಟ್ಟಿಲ್ಲವೆಂದು ಗೊತ್ತಾಯಿತು. ನಾವು ನೀರು ಬಿಟ್ಟಿಲ್ಲ. ನೀರು ಬಿಟ್ಟಿಲ್ಲವೆನ್ನತಕ್ಕ ಹೇಳಿಕೆಯನ್ನು ನಮ್ಮ ನೀರಾವರಿ ಮಂತ್ರಿಗಳು ಅವರ ಹೇಳಿಕೆಯನ್ನು ಅಲ್ಲಗಳೆದು ಒಂದು ಹೇಳಿಕೆಯನ್ನು ಕೊಟ್ಟರು. ಆದರೂ ಕೂಡ ಹೇಳಿಕೆಗಳು ಬರುವುದಕ್ಕೆ ಪ್ರಾರಂಭವಾಯಿತು. ಇಲ್ಲಾ ಇಲ್ಲ, ನೀರು ಬಿಟ್ಟಿದ್ದಾರೆ ಇದು ಸರಿಯಲ್ಲ

ಎನ್ನತಕ್ಕ ಮಾತು ಬಂದಾಗ, ನಾನೇ ಒಂದು ಹೇಳಿಕೆಯನ್ನು ಕೊಡಬಹುದಾಗಿತ್ತು. ಅದು ತಮ್ಮ ಅವಗಾಹನೆಗೆ ಕೂಡ ಬಂದಿದೆಯೆಂದು ನಾನು ಭಾವಿಸಿದ್ದೇನೆ. ನೀರು ಬಿಟ್ಟಿಲ್ಲ ಎನ್ನತಕ್ಕ ಮಾತು. ಒಂದೇ ಒಂದು ಮಾತನ್ನು ಈ ವಿಚಾರದಲ್ಲಿ ಗಮನಿಸಬೇಕು. ಮೂರು ವಿಚಾರಗಳನ್ನು ಬಿಟ್ಟು ನಾವು ನೀರು ಬಿಟ್ಟಿಲ್ಲವೆಂದು ನಾನು ಹೇಳಿದೆ. To save the standing crop of our farmers well within our State. ನಾವು ಅದನ್ನು ಉಳಿಸುವುದಕ್ಕಾಗಿ ನಿಮ್ಮ ಕೆನಾಲ್‌ನಲ್ಲಿ ನಾವು ನೀರು ಬಿಡಲೇಬೇಕು. ಆದ್ದರಿಂದ ನೀರಿನ್ನು ಬಿಟ್ಟಿದ್ದೇವೆ. ಎರಡನೆಯದು ಶಿವನಸಮುದ್ರದಲ್ಲಿ ವಿದ್ಯುಚ್ಛಕ್ತಿ ತಯಾರು ಮಾಡತಕ್ಕ ವಿಚಾರ ತಮಗೆ ಗೊತ್ತಿದೆ. ಬೇಸಿಗೆಯಲ್ಲಿ ನಾವು ಕೆಲವು ಸಾರಿ ಎರಡು ಟಿಎಂಸಿ ಚಿಲ್ಲರೆ ನೀರು ಬಿಡುತ್ತೇವೆ, ಅಷ್ಟು ನೀರು ಹೊರಟುಹೋಗುತ್ತದೆ. ಆ ನೀರು ಮೆಟ್ಟೂರು ಡ್ಯಾಮಿಗೆ ಹೋಗುತ್ತದೆ. ನೀರು ಬಿಡುವುದಿಲ್ಲವೆಂದರೆ ತಮಗೆಲ್ಲ ಗೊತ್ತಿರುವಂತೆ ವಿದ್ಯುಚ್ಛಕ್ತಿ ಉತ್ಪಾದನೆಯನ್ನು ನಿಲ್ಲಿಸಬೇಕಾಗುತ್ತದೆ. ಇದು ಎರಡನೆಯ ಕಾರಣ. Not to honour the Tribunals Order, but we will have to produce our own power. ಇದು ಅನೇಕ ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕದ್ದು. ಇನ್ನು ಮೂರನೆಯ ವಿಷಯವೆಂದರೆ ಬೆಂಗಳೂರು ನಗರಕ್ಕೆ ಕುಡಿಯುವ ನೀರು ಒದಗಿಸತಕ್ಕದ್ದು. ಅಲ್ಲಲ್ಲಿ ಸಮೀಪದಲ್ಲಿರತಕ್ಕ ಹಳ್ಳಿಗಳಲ್ಲಿ ಕುಡಿಯುವ ನೀರಿಗಾಗಿ ನೀರನ್ನು ಉಪಯೋಗ ಮಾಡುತ್ತಾರೆ. ಆ ಮೂರು ವಿಚಾರಗಳನ್ನು ಬಿಟ್ಟು ನಾವು ಟ್ರಿಬ್ಯುನಲ್ ಆರ್ಡರನ್ನು ಗೌರವ ಮಾಡಬೇಕು. ನೀರು ಕೊಡಬೇಕು ಎನ್ನತಕ್ಕ ಪ್ರಮೇಯವೇ ಇರಲಿಲ್ಲ. ನಾವು ನೀರು ಬಿಟ್ಟಿಲ್ಲ ಎನ್ನುವುದಕ್ಕೆ ಪೂರಕವಾಗಿ ಒಂದೆರಡು ವಿಚಾರಗಳನ್ನು ಹೇಳಬೇಕಾಗಿದೆ. ತಮಿಳುನಾಡಿನವರು ನಮಗೆ ನೀರು ಕಡಿಮೆಯಾಗಿದೆ, ನಮ್ಮ ಕುರುವೆ ಬೆಳೆಯನ್ನು ಉಳಿಸಿಕೊಳ್ಳುವುದಕ್ಕೋಸ್ಕರ ನೀರು ಬಿಡಿಯೆಂದು ಅವರು ಕೇಳಿರಲಿಲ್ಲ. ಯಾವ ಸಂದರ್ಭದಲ್ಲಿ ಶ್ರೀಮಾನ್ ವಿ.ಸಿ. ಶುಕ್ಲರವರು ಮದ್ರಾಸಿನಲ್ಲಿ ಹೇಳಿಕೆಯನ್ನು ಕೊಟ್ಟರೋ ಆ ಕಾಲದಲ್ಲಿ ತಮಿಳುನಾಡಿಗೆ ನೀರು ಬೇಕೆಂದು ಅವರೇ ಹೇಳಿಲ್ಲ. ಅಥವಾ ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದಿಲ್ಲ. ಆದರೆ "just like bolt from the blue" ಇಲ್ಲಾ ಇಲ್ಲ, ಕರ್ನಾಟಕದವರು ಟ್ರಿಬ್ಯುನಲ್ ಆರ್ಡರನ್ನು ಪಾಲನೆ ಮಾಡುತ್ತಿದ್ದಾರೆ, ಟ್ರಿಬ್ಯುನಲ್ ಆರ್ಡರ್ ಪ್ರಕಾರ ನೀರು ಬಿಡುತ್ತಿದ್ದಾರೆ ಎನ್ನತಕ್ಕ ಮಾತನ್ನು ಅವರೇ ಹೇಳಿಬಿಟ್ಟರೆ ತಮಿಳುನಾಡಿನವರು ನೀರು ಕೇಳದೆ, ನಾವು ನೀರು ಕೊಡದೆ ಟ್ರಿಬ್ಯುನಲ್ ಆರ್ಡರನ್ನು ಪಾಲನೆ ಮಾಡಿ ನೀರು ಬಿಡುತ್ತಿದ್ದಾರೆನ್ನುವ ಮಾತನ್ನು ಅವರು ಹೇಳಿಬಿಟ್ಟರೆ ಇದು ಅಷ್ಟಕ್ಕೆ ಕಾರಣವಾಗಿದೆ; ಎನ್ನತಕ್ಕ ಮಾತನ್ನು ತಮ್ಮ ಮುಖಾಂತರ ರಾಜ್ಯದ ಜನತೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಾನು ಒಂದೇ ಒಂದು ಮಾತು ಹೇಳುತ್ತೇನೆ, ಇನ್ನು ಮೇಲಾದರೂ ಶುಕ್ಲಾಜೀಯವರು ಹೇಳಿಕೆ ಕೊಡತಕ್ಕ ಸಂದರ್ಭದಲ್ಲಿ ಅದರಲ್ಲೂ ಮಾನ್ಯ ಪ್ರಧಾನ ಮಂತ್ರಿಗಳು ಸಂಬಂಧಪಟ್ಟಿರತಕ್ಕ ರಾಜ್ಯಗಳಾದ ಕೇರಳ, ಕರ್ನಾಟಕ, ಪಾಂಡಿಚೇರಿ, ಮದ್ರಾಸ್ ರಾಜ್ಯಗಳ ಮುಖ್ಯಮಂತ್ರಿಗಳನ್ನು ಕರೆದು ಒಂದು ಸಭೆಯನ್ನು ಮಾಡಿದ್ದಾರೆ. ಅದರ ವಿವರಣೆಯನ್ನು ಕೂಡ ತಮಗೆ ಕೊಟಿದ್ದೇನೆ. ಯಾವುದೇ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಅವರಿಗೆ ಆಗಿಲ್ಲ. ಆ ಸಬ್ಜೆಕ್ಟ್ ಯಾವರೀತಿ ಇದೆಯೆಂದು ತಮಗೂ ಕೂಡ ಅವರು ಹೇಳಿದ್ದಾರೆ. ಮೂಲಭೂತವಾಗಿ ಅವರಿಗೂ ಕೂಡ ಗೊತ್ತಿದೆ. ಸೌಹಾರ್ದ ವಾತಾವರಣವನ್ನು ಸೃಷ್ಟಿ ಮಾಡಿಕೊಂಡು, ಅನಂತರ ವಿಚಾರ ಮಾಡಿಕೊಳ್ಳೋಣವೆಂದು ಹೇಳಿ ಸಭೆ ಕರೆಯುವುದಕ್ಕೆ ಕಾಲ ಇನ್ನೂ ಬಂದಿಲ್ಲ ನಾನು ಮೊನ್ನೆ ಪ್ರಧಾನಮಂತ್ರಿಗಳಿಗೆ ಇದನ್ನು ನೆನಪು ಮಾಡಿದ್ದೇನೆ. ಆದಷ್ಟು ಶೀಘ್ರವಾಗಿ ಸಭೆಯನ್ನು ಕರೆದು ಮಾತುಕತೆಯನ್ನು ತಾವು ಮುಂದುವರಿಸಬೇಕೆಂದು ಮಾನ್ಯ ಪ್ರಧಾನಮಂತ್ರಿಗಳಿಗೆ ಅರಿಕೆ ಮುಖಾಂತರ ನಾನು ನೆನಪು ಮಾಡಿಕೊಟ್ಟಿದ್ದೇನೆ. ಇದು ನಮ್ಮ ಕರ್ತವ್ಯದ ಪ್ರಶ್ನೆ. ಅದರೆ ಸಭೆ ಕರೆಯುವವರು ಅವರೇ ವಿನಹ: ನಾನಂತೂ ಅಲ್ಲ; ಇದು ತಮಗೆ ಗೊತ್ತಿರತಕ್ಕದ್ದು. ಶುಕ್ಲಾಜೀಯವರು ಏನು ಹೇಳಿಕೆ ಕೊಟ್ಟಿದ್ದಾರೆ ಅದರಿಂದ ನಾವೇನು ನೆಗೋಷಿಯೇಷನ್ ಸೆಟಲ್‌ಮೆಂಟ್ ಮುಖಾಂತರ ಒಂದು ಪರಿಹಾರ ಕಂಡುಕೊಳ್ಳಬೇಕೆನ್ನುವ ಏನೊಂದು ಆಸೆಯನ್ನು ಇಟ್ಟುಕೊಂಡಿದ್ದೇವೆ ಅದಕ್ಕೆ ಪೂರಕವಾಗಿ ಬರತಕ್ಕ

ಹೇಳಿಕೆ ಇದು ಆಗಲಾರದು. I must be very very frank to express my views on the statement made by the Hon'ble union Minister for Water Resources, Mr. V.C.Shuklaji. ಇದನ್ನು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಅವರಲ್ಲಿ ನಾನು ಈಗಲೂ ಕೂಡ ವಿನಂತಿ ಮಾಡುತ್ತೇನೆ, ಇವತ್ತಲ್ಲ ನಾಳೆ ಎಲ್ಲ ರಾಜ್ಯಗಳವರ ಜೊತೆಗೆ ಈ ವಿಚಾರ ಇಟ್ಟು ಅದನ್ನು ಯಾವ ರೀತಿ ಮಾಡಬೇಕೆನ್ನುವ ಬಗ್ಗೆ ಹೇಳಿಕೆಯನ್ನು ಕೊಡಲಿ. ಸುಮ್ಮ ಸುಮ್ಮನೆ ನಾವು ನೀರು ಕೊಡದಿದ್ದರೂ ಕೂಡ ನೀರು ಕೊಟ್ಟಿದ್ದಾರೆ ಟ್ರಿಬ್ಯುನಲ್ ಆರ್ಡರ್ ಪಾಲನೆ ಮಾಡುತ್ತಿದ್ದಾರೆಂದು ಹೇಳುವುದು ಸರಿಯೆ? ಆಮೇಲೆ ತಮಿಳುನಾಡಿನಲ್ಲಿ ಮತ್ತೊಂದು ಹೇಳಿಕೆ ಕೊಡುವುದು ಒಳ್ಳೆಯದಲ್ಲ. ಏನಾದರೂ ಮಾಡಿ ಇದನ್ನು ಸರಿಯಾದ ರೀತಿಯಲ್ಲಿ ತೀರ್ಮಾನ ಮಾಡಿ ಇದಕ್ಕೆ ಒಂದು ಅಂತಿಮವಾದ ತೀರ್ಮಾನ ಮಾಡಬೇಕು. ವಿಧಾನಸಭೆಯ ನಿರ್ಣಯ ಅದು ಕೂಡ ಒಂದು ಭಾಗ ಇದೆ. ಅದಕ್ಕನುಗುಣವಾಗಿ ವಿಚಾರವನ್ನು ಕೂಡ ನಾವು ಇಟ್ಟಿದ್ದೇವೆ. ನಾನು ಈಗಲೂ ಕೂಡ ಶುಕ್ಲಾಜೀಯವರಲ್ಲಿ ವಿನಂತಿ ಮಾಡುತ್ತೇನೆ, ಏನೆಂದರೆ ಇನ್ನುಮೇಲೆ ಯಾವುದೇ ಹೇಳಿಕೆಯನ್ನು ಕೊಟ್ಟರೂ ಕೂಡ ಅದು ಶಾಂತಿಯುತವಾಗಿ ಉಭಯ ನಾಲ್ಕು ರಾಜ್ಯಗಳು ಕೂಡಿ ವಿಷಯ ಇತ್ಯರ್ಥ ಮಾಡಲಿಕ್ಕೆ ಪೂರಕವಾಗಿರತಕ್ಕ ಹೇಳಿಕೆಗಳನ್ನು ಕೊಡತಕ್ಕದ್ದು ಬಹಳ ಒಳ್ಳೆಯದು ಎಂದು ಅದರಲ್ಲಿ ಔಚಿತ್ಯ ಅಡಗಿದೆ ಎನ್ನತಕ್ಕ ಮಾತನ್ನು ಸ್ಪಷ್ಟಪಡಿಸುತ್ತೇನೆ. ಇದು ಸ್ಪಷ್ಟವಾಗಿರತಕ್ಕ ಅಭಿಪ್ರಾಯವಾಗಿದೆ. ಇನ್ನೂ ನೀರು ಬಿಟ್ಟರೆ ತಕ್ಕ ವಿಚಾರದಲ್ಲಿ ನಾನು ತಮಗೆ ಸ್ಪಷ್ಟಪಡಿಸುತ್ತೇನೆ. ತಮಗೆಲ್ಲ ಗೊತ್ತಿರುವಂತೆ ಹಿಂದಿನ ಲೋಕಸಭಾಸದಸ್ಯರಾದ ಶ್ರೀ ನಂಜೇಗೌಡರ ಹೇಳಿಕೆ ಇದೆ. ಬಿಳಿಗುಂಡ್ಲು ಬಳಿ ಅಲ್ಲಿ ಏನು ಕೇಂದ್ರದ ಗೂಟ ನಿಲ್ಲಿಸಿದ್ದಾರೆ, ಅಂದರೆ ಅಳತೆ ಮಾಪನ, ಅದಕ್ಕೂ ಮೆಟ್ಟೂರು ಡ್ಯಾಮ್ ವಿಚಾರಕ್ಕೂ ವ್ಯತ್ಯಾಸ ಇದೆ, ಹಾಗೆ ಹೀಗೆ ಎನ್ನತಕ್ಕದ್ದು ತಮಗೆಲ್ಲಾ ಗೊತ್ತಿದೆ. ಈ ಸಂದರ್ಭದಲ್ಲಿ ನಾನು ತಮ್ಮ ಗಮನಕ್ಕೆ ತರುವುದು ಇಷ್ಟೇನೆ. ಯಾವಾಗ ನೀರು ಬಿಟ್ಟಿದ್ದೇವೆ ಎಂಬ ಮಾತನ್ನು ಹೇಳಿದರು. ಆ ಕಾಲದಲ್ಲಿ 73 ಅಥವಾ 75 ಟಿ.ಎ.ಸಿ. ಯಷ್ಟು ನೀರು ಮೆಟ್ಟೂರು ಡ್ಯಾಮ್‌ನಲ್ಲಿ ಇತ್ತು. To help standing crop . . .

ಅದಕ್ಕೆ ಸಾಕಷ್ಟು ನೀರು ಇತ್ತು ಎನ್ನತಕ್ಕದ್ದು. That is why they are not bothering at all - farmers or the Tamil Nadu . . .
ಇಲ್ಲಿ ನೀರು ಬಿಡತಕ್ಕಂಥ ಪ್ರಶ್ನೆ ನಮಗೆ ಇಲ್ಲವೇ ಇಲ್ಲ. ಒಂದು ವೇಳೆ ನೀರು ಬಿಡಬೇಕು ಅಂತ ಇತ್ತು ಅಂತ ಇಟ್ಟುಕೊಳ್ಳೋಣ. ತಮಗೆಲ್ಲಾ ಗೊತ್ತಿದೆ ಫ್ಲಡ್ಸ್ ಬಂದರೆ, ಗೇಟ್ ಓಪನ್ ಮಾಡಿದರೆ there is certain definite accepted procedure and the rules relating to the irrigation department. . .
ಏನಂತ ಇದೆ? ನಾವು ನೀರು ಬಿಡುತ್ತಿದ್ದೇವೆ ಎಂದು ಅಕ್ಕಪಕ್ಕದ ಗ್ರಾಮಗಳಿಗೆ ಮುನ್ಸೂಚನೆ ಕೊಡತಕ್ಕದ್ದು, ಮೊದಲೇ ಪ್ರಕಟಣೆ ಕೊಡುವುದು ಇವೆಲ್ಲ ನಿಯಮಬದ್ಧರಾಗಿರತಕ್ಕಂಥ ವಿಚಾರಗಳು. ನಾವು ಒಂದುವೇಳೆ ನೀರು ಬಿಡುವುದಕ್ಕೆ ಹೋಗಿದ್ದರೆ ನಾವು ಕೆಳಗಿನ ಗ್ರಾಮಗಳಿಗೆ ಆ ಮಾತನ್ನು ಹೇಳಬೇಕಿತ್ತು, ಇವತ್ತು ನಾನು ತಮ್ಮನ್ನು ಒಂದೇ ಮಾತು ಕೇಳುವುದು; ಇವತ್ತು ಹೇಳಿಕೆ ಮುಖಾಂತರ ಇಷ್ಟೆಲ್ಲ ನಡೆದಿದೆ. ನಾವು ಮಂಡ್ಯ, ಆ ಕಡೆಭಾಗದಲ್ಲಿ ನೀರು ಬಿಟ್ಟಿದ್ದೇವೆ, ಏಕೆಂದರೆ ಪ್ರಜಾವಾಣಿ ಪತ್ರಿಕೆಯಲ್ಲಿ ಆ ಕಾಲದಲ್ಲಿ ಫೋಟೋ ಬಂತು. ನೀರು ಕಡಿಮೆಯಾಗಿದೆ, ಕೆ.ಆರ್.ಎಸ್. ನಲ್ಲಿ ಒಂದು ಭಾಗ ಒಣಗಿದೆ ಎಂದು. ಆದರೆ ನಮಗೆ ನಮ್ಮ ರೈತರ ಬೆಳೆಯನ್ನು ಉಳಿಸುವುದಕ್ಕೋಸ್ಕರ ಚಾನಲ್ ತಗ್ಗುಭಾಗದಲ್ಲಿರತಕ್ಕಂಥಾದ್ದು, ಅದಕ್ಕೆ ನೀರು ಬಿಡುವುದಕ್ಕೆ ನಮಗೆ ಸಾಧ್ಯತೆ ಇತ್ತು. ಉಳಿದ ಕಡೆಯಲ್ಲಿ ಗೇಟ್ ಎತ್ತಿ ಅವರು ಹೇಳಿದ ಹಾಗೆ ನೀರು ಬಿಡುವುದಕ್ಕೆ ನಮ್ಮ ಹತ್ತಿರ ನೀರು ಕೆ.ಆರ್.ಎಸ್. ನಲ್ಲಿ ಇಲ್ಲ. ಈಗ ಮೊನ್ನೆ ಮೊನ್ನೆ ಮಳೆಯಾದಮೇಲೆ, ತಾವು ಹೇಳಿದ್ದೀರಿ ಏನೋ ಮಳೆಯಾಗಿದೆ ಎಂದು. ಏನೋ ದೇವರ ಆಶೀರ್ವಾದ ಸ್ವಲ್ಪ ಇದೆಯೆಂದು ನಾನು ಭಾವಿಸಿದ್ದೇನೆ. ಅದೇನೇ ಇರಲಿ, ಮಾನ್ಯ ವಿರೋಧ ಪಕ್ಷದ ನಾಯಕರು ಈ ಕಡೆ ಗಮನ ಕೊಡಬೇಕು. ನಾವು ದೇವರಲ್ಲಿ ಪದೇಪದೇ ಮೊರೆ ಹೋಗಿದ್ದೇವೆ. ಇನ್ನೂ ಮಳೆ ಸುರಿಯಬೇಕೆಂದು ಮೊರೆ ಹೋಗಿದ್ದೇವೆ.

ಈಗಲೂ ಕೂಡ ದೇವರಲ್ಲಿ ನಾನು ಕೇಳಿಕೊಳ್ಳುತ್ತೇನೆ. ಚೆನ್ನಾಗಿ ಮಳೆ ಬಿದ್ದು ನಮ್ಮ ವಿದ್ಯುಚ್ಛಕ್ತಿ ಜಲಾಶಯಗಳು, ನೀರಾವರಿ ಜಲಾಶಯಗಳು, ಕೆರೆಕಟ್ಟೆಗಳು ಇವೆಲ್ಲ ತುಂಬಲಿ ಎನ್ನತಕ್ಕಂಥಾದ್ದು ನಮ್ಮೆಲ್ಲರ ಆಸೆ. ಕೆಲವು ಕಡೆ ಕೆರೆಕಟ್ಟೆಗಳು ತುಂಬಿರತಕ್ಕಂಥ ವರದಿಗಳು ನಮ್ಮ ಹತ್ತಿರ ಇವೆ. ಕೆಲವು ಕಡೆ ಅದು ಇಲ್ಲ. ಅದು ಬರಗಾಲ, ಕುಡಿಯುವ ನೀರಿನ ವಿಚಾರ, ಗುಲ್ಬರ್ಗಾದ್ದು ಇವೆಲ್ಲ ಬಂದಂಥ ಕಾಲದಲ್ಲಿ ನಾವು ಮಾತನಾಡೋಣ. ಏನನ್ನೂ ಮುಚ್ಚಿಡುವ ಪ್ರಶ್ನೆ ಇದರಲ್ಲಿ ನನಗೆ ಕಾಣುತ್ತಿಲ್ಲ. ಇದರಲ್ಲಿ ಒಂದೇ ಒಂದು ವಿಚಾರ ಇರತಕ್ಕದ್ದು. ನೀರನ್ನು ನಾವು ಬಿಡಬೇಕು ಎಂದರೆ ನಿಯಮಗಳನ್ನು ಪಾಲನೆ ಮಾಡಿಕೊಂಡು ಹೋಗತಕ್ಕಂಥ ವಿಚಾರ ಇರುವುದರಿಂದ, ನೀರನ್ನು ಬಿಡತಕ್ಕಂಥ ಪ್ರಮೇಯ ಕೂಡ ನಮಗೆ ಇಲ್ಲ. ಒಂದು ವೇಳೆ ನಾವು ನೀರನ್ನು ಬಿಟ್ಟಿದ್ದರೆ, ಇವತ್ತು ಏನು ಗೇಟು ಇದೆ, ಅದರ ಮೂಲಕ ಬಿಟ್ಟಾಗ ಕೆಳಗಿದ್ದವರಿಗೆ ಅದು ಕಣ್ಣಾರೆ ಕಾಣಬೇಕಲ್ಲ? ನೀರನ್ನು ಮುಚ್ಚಿಬಿಡತಕ್ಕಂಥಾದ್ದು ಏನೂ ಇಲ್ಲ. ಬಿಳಿಗುಂಡ್ಲು ದಾಟಿ ಅಥವಾ ಅದರ ಮುಖಾಂತರ ಅದೇನೂ ಮುಚ್ಚಿ ಯಾರಿಗೂ ಕೊಡಬೇಕಾದ ವಿಚಾರ ಇಲ್ಲವೇ ಇಲ್ಲ. ಇಷ್ಟು ಟಿ.ಎಂ.ಸಿ. ನೀರು ಹೋಗಿದೆ. ಹೌದು. ಮೊನ್ನೆ ಮಳೆಯಾದ ಮೇಲೆ ರಿಸರ್ವಾಯರ್ ಕೆಳಗಡೆ ತಮಗೆ ಗೊತ್ತಿರುವ ಹಾಗೆ ಮೈಸೂರು ಜಿಲ್ಲೆಯಲ್ಲಿ ಕಬಿನಿ ತುಂಬಿತ್ತು; ತಮಗೆ ಗೊತ್ತಿದೆ, ನಾವು ಯಾವಾಗಲೂ ನೀರು ತುಂಬಿ ಉಕ್ಕುವವರೆಗೆ ಇಡುವುದಿಲ್ಲ. ಡ್ಯಾಮ್ ಸೇಫಟ್ ದೃಷ್ಟಿಯಿಂದ 2–3 ಅಥವಾ 4 ಅಡಿ ಇರಬೇಕಾದರೆ ಗೇಟನ್ನು ಎತ್ತಲೇಬೇಕಾಗುತ್ತದೆ. ಕಳೆದ ವರ್ಷ ಸಿಕ್ಕಾಪಟ್ಟೆ ಮಳೆಯಾಯಿತು. All the four reservoirs became full. They were full. We have opened our gates. ಮೆಟ್ಟೂರ್ ಡ್ಯಾಂನಲ್ಲಿ ಏನಾಯಿತು? They have opened all the gates at Mettur Dam. Where water went ? it went into the sea. ಇದು ದೇವರು ಕೊಟ್ಟುಬಿಟ್ಟರೆ ಯಾರೇನೂ ಮಾಡುವುದಕ್ಕೆ ಆಗುವುದಿಲ್ಲ. ಇದು ತಮಗೆ ಗೊತ್ತಿರುವ ವಿಚಾರ. ಈಗ ಕಬಿನಿ ತುಂಬಿತ್ತು. ಹಾರಂಗಿ ಚಿಕ್ಕದು. ಅದು ತುಂಬತಕ್ಕದ್ದು ಇದೆ. ಕೆ.ಆರ್.ಎಸ್.ನಲ್ಲಿ ಇನ್ನು ಹತ್ತು ಅಡಿ ಬಂದರೆ ತುಂಬುತ್ತದೆ. ನಿನ್ನೆಯ ವರದಿ ಪ್ರಕಾರ ಅದೇರೀತಿ ಹೇಮಾವತಿ ಡ್ಯಾಂಗೆ ನೀರು ಒಳ್ಳೆಯ ರೀತಿಯಲ್ಲಿ ಬರತಕ್ಕಂಥಾದ್ದು ಇದೆ. ಕ್ಯಾಚ್‌ಮೆಂಟ್ ಏರಿಯಾದಲ್ಲಿ ಮತ್ತೆ ಮಳೆಯಾಗಿದೆ ಎಂದು ವರದಿ ಬಂದಿದೆ. ನಮಗೆ ಮೊದಲು ರಿಸರ್ವಾಯರ್ ತುಂಬಲಿ. ಆಮೇಲೆ ಟ್ರಿಬ್ಯುನಲ್ ಆರ್ಡರ್, ಮತ್ತೊಂದು, ನೀರು ಬಿಡಬೇಕೋ ಅಥವಾ ಬೇಡವೋ, ಎಂಬುದು ಅನಂತರದ ಪ್ರಶ್ನೆ. ಮೊದಲು ರೈತರ ಬೆಳೆಗಾದರೂ ಅವು ತುಂಬಬೇಕಲ್ಲ? ಅವೇ ತುಂಬದಿದ್ದರೆ ಆಮೇಲೆ ಡ್ಯಾಮ್ ಕಟ್ಟಿಕೊಂಡು ನಾವೇನು ಮಾಡಬೇಕು?

ಕಳೆದ ವರ್ಷ ತಮಗೆ ಗೊತ್ತಿರುವ ಹಾಗೆ ಮಲಪ್ರಭಾ ತುಂಬಲಿಲ್ಲ. ಕಾಳಿ ಸೂಪರ್ ಡ್ಯಾಮ್ 75–80 ಪರ್ಸೆಂಟ್ ತುಂಬಿತ್ತು, ಉಳಿದದ್ದು ತುಂಬುವುದಕ್ಕಾಗಲಿಲ್ಲ. ಆದರೆ, ಈ ವರ್ಷ ಮತ್ತೆ ಹೆಚ್ಚುಕಡಿಮೆಯಾಗುತ್ತದೆ, ಮುಂದೆ ಇನ್ನೂ ದೊಡ್ಡ ದೊಡ್ಡ ಮಳೆಗಳಿವೆ., ಕಾಲ ಇದೆ, ಕಾಲ ಇನ್ನೂ ಮಿಂಚಿಲ್ಲ ಎನ್ನತಕ್ಕ ವಿಚಾರ ಇಟ್ಟುಕೊಂಡಿದ್ದೇವೆ. ಈ ಸಂದರ್ಭದಲ್ಲಿ ನಾವು ನೀರನ್ನು ತಮಿಳುನಾಡಿಗೆ ಬಿಡತಕ್ಕ ವಿಚಾರದಲ್ಲಿ, ನಾನು ಈಗಲೂ ಸ್ಪಷ್ಟವಾಗಿ ತಿಳಿಸುತ್ತಿದ್ದೇನೆ. ನಾವು ಟ್ರಿಬ್ಯುನಲ್ ಆರ್ಡರನ್ನು ಆನರ್ ಮಾಡಬೇಕೆಂದಾಗಲೀ, ಅವರಿಗೆ ನೀರು ಬಿಡುವುದಾಗಲೀ, ನಾವು ಮಾಡಿಲ್ಲ. ಪುನ: ಈ ಮಾತನ್ನು ರಿಪೀಟ್ ಮಾಡುತ್ತಿದ್ದೇನೆ, ನಾವು ಯಾವುದೇ ಸಂದರ್ಭದಲ್ಲಿ ನೀರು ಬಿಟ್ಟಿಲ್ಲ ಒಂದುವೇಳೆ ಬಿಟ್ಟಿದ್ದರೆ, ಜನರ ಕಣ್ಣಲ್ಲಿ ಅದು ಕಾಣಬೇಕಾಗಿತ್ತು. ಆ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಅಲ್ಲಿ ಏನಾದರೂ ನೀರು ಹೋಗಿದ್ದರೆ, ಏನು ರಿಸರ್‌ವಾಯರ್ ಕಡೆ ಮಳೆಯಾಗಿದೆ, ನಾನು ಗುಂಡ್ಲುಪೇಟೆಯಿಂದ ಕಾರ್ಯಕ್ರಮಕ್ಕೆ ಹೋಗಿ ಬರಬೇಕಾದರೆ, ನೋಡುತ್ತಾ ಇದ್ದೆ. ಅನೇಕ ಕೆರೆಗಳು ಅರ್ಧಂಬರ್ಧ ತುಂಬಿರತಕ್ಕಂಥಾದ್ದು, ಕೆಲವು ಕಾಲುವೆಗಳು ತುಂಬಿರುವುದು, ಕೆಲವು ಹಳ್ಳಕೊಳ್ಳಗಳಲ್ಲಿ ನೀರು ಹರಿಯತಕ್ಕಂಥಾದ್ದು ನೋಡಿದೆ. ಆ ಸಂದರ್ಭದಲ್ಲಿ ಮಳೆಯಾಗುತ್ತಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ :— ಮಾನ್ಯ ಸಚಿವರಾದ ಮಂಜುನಾಥ್‌ರವರು ಇಲ್ಲಯೇ ಇದ್ದಾರೆ. ನಾವು ಇಲ್ಲಿ ಮಾತನಾಡಬೇಕಾದರೆ, ಪ್ರಿವಿಲೇಜ್ ವಿಷಯಕ್ಕೆ ಮಾತ್ರ ಸೀಮಿತವಾಗಿ ಮಾತನಾಡಿ ಎಂದು ಪದೇಪದೇ ಹೇಳುತ್ತಿದ್ದರು. ಆದರೆ ಈಗ ನಮ್ಮ ಮುಖ್ಯಮಂತ್ರಿಗಳು ಕಾಗೆ ಗುಬ್ಬಚ್ಚಿ ಕಥೆ

ಹೇಳುತ್ತಿದ್ದಾರೆ. ನಾವು ಕೇಳುತ್ತಿರತಕ್ಕಂಥಾದ್ದು ಏನೆಂದರೆ, ಫೆಬ್ರವರಿ 17ನೇ ತಾರೀಖು ಪ್ರಧಾನಿಗಳು ಕರೆದಂಥ ಸಭೆಯಲ್ಲಿ ಟ್ರಿಬ್ಯುನಲ್ ಪ್ರೊಸೀಡಿಂಗ್ಸನ್ನು ಮುಂದುವರಿಸಿ, ಸ್ಪೀಡಪ್ ಮಾಡಿ ಎಂದು ತಾವು ಅಗ್ರಿಮೆಂಟ್‌ಗೆ ಸಹಿ ಮಾಡಿ ಬಂದಿದ್ದೀರೋ ಇಲ್ಲವೋ ಎಂದು; ಈ ಸರ್ವಾನುಮತದ ನಿರ್ಣಯದ ವಿರುದ್ಧವಾಗಿ, ಏನು ಮರುಪರಿಶೀಲನಾ ಅರ್ಜಿ ಹಾಕಿದ್ದೀರಾ, ಇದು ಪ್ರಿವಿಲೇಜ್ ಆಗುತ್ತದೆ. ಅದಕ್ಕೆ ಸೀಮಿತವಾಗಿ ಮಾತ್ರ ನಾವು ಪ್ರಸ್ತಾಪ ಮಾಡಿದ್ದೇವೆ. ಇದಕ್ಕೆ ಉತ್ತರ ಕೊಡುತ್ತೀರಿ ಎಂದು ನಿರೀಕ್ಷೆ ಮಾಡಿ ಕುಳಿತಿದ್ದೇವೆ. ಕೊನೆಯಲ್ಲಾದರೂ ತಾವು ಸ್ಪಷ್ಟವಾಗಿ, ಅಗ್ರಿಮೆಂಟ್‌ಗೆ ಸಹಿ ಮಾಡಿ ಬಂದಿದ್ದೀರಾ ಅಥವಾ ಇಲ್ಲವೇ ಎಂಬುದನ್ನು ಹೇಳಬೇಕು. ಫೆಬ್ರವರಿ 17ನೇ ತಾರೀಖು ಪ್ರಧಾನಿಯವರು ಸಂಬಂಧಪಟ್ಟ ಮುಖ್ಯಮಂತ್ರಿಗಳ ಸಭೆಯಲ್ಲಿ ನಡೆದಿರುವ ವಿಚಾರದಲ್ಲಿ ತಾವು ದಯಮಾಡಿ ಕೊನೆಯಲ್ಲಾದರೂ ಸ್ಪಷ್ಟೀಕರಣ ಕೊಡುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ಟಿ.ಎಂ ಮಂಜುನಾಥ್ :— ಸರ್ಕಾರ ನೀರು ಬಿಟ್ಟಿದೆ ಎಂದು ತಾವು ಹೇಳಿದಿರಿ, ನೀರು ಬಿಟ್ಟಿಲ್ಲ ಎಂದು ಅಂಕಿಅಂಶಗಳ ಪ್ರಕಾರವಾಗಿ ನಡೆದಿರತಕ್ಕ ವಸ್ತುಸ್ಥಿತಿಯನ್ನು ಮುಖ್ಯಮಂತ್ರಿಗಳು ವಿವರಿಸುತ್ತಿದ್ದಾರೆ. ಯಾವ ನೀರು ಹೋಯಿತು, ಏಕೆ ಹೋಯಿತು, ಎಲ್ಲಿ ಹೋಯಿತು ಎನ್ನುವುದನ್ನು ಹೇಳುತ್ತಿದ್ದಾರೆ, ಸ್ವಲ್ಪ ಸಹನೆಯಿಂದ ಕೇಳಿ.

ಶ್ರೀ ಬಿ.ಎಸ್ ಯಡಿಯೂರಪ್ಪ :— ಈ ವಿಷಯವಾಗಿ ಕೇಂದ್ರದ ಸಂಬಂಧಪಟ್ಟ ನೀರಾವರಿ ಸಚಿವರೇ ನೀರು ಬಿಟ್ಟಿದ್ದಾರೆಂದು ಹೇಳಿರುವುದನ್ನು ನಂಬುವುದಕ್ಕೆ ನಾವು ರೆಡಿ ಇಲ್ಲ. ಇದು ಹೇಗೆ, ನೀವು ಯಾವರೀತಿ ತರ್ಕ ಮಾಡುತ್ತೀರಿ, ದಾಖಲೆಗಳೂ ಇಲ್ಲ. ಮುಖ್ಯಮಂತ್ರಿಗಳು ಕೆಲವು ಕೆಲಸಗಳನ್ನು ಬಹಳ ಬುದ್ಧಿವಂತಿಕೆಯಿಂದ ಮಾಡುತ್ತಾರೆ. ಸರ್ಕಾರ ನಡೆಸಬೇಕಾದರೆ ಸಿಕ್ಕಿಕೊಳ್ಳುತ್ತಾರೆಯೇ? ಆದರೆ, ಮಾನ್ಯ ಶುಕ್ಲಾರವರು ನಮ್ಮ ಕಣ್ಣು ತೆರೆಸಿದ್ದಾರೆ. ನೀವು ಮುಖ್ಯಮಂತ್ರಿಗಳನ್ನು ನಂಬಿಕೊಂಡಿದ್ದೀರಿ, ಆದರೆ ನೀರು ಬಿಟ್ಟಿದ್ದಾರೆ, ನಾಳೆ ನೀವು ಹಾಳು ಬಿದ್ದುಹೋಗುತ್ತೀರಿ ಎಂದು ಪರೋಕ್ಷವಾಗಿ, ಮದ್ರಾಸಿಗೆ ಹೋಗಿ ಹೇಳಿ, ನಮ್ಮನ್ನು ಎಚ್ಚರಿಸುವಂಥ ಕೆಲಸ ಮಾಡಿದ್ದಾರೆ.

ಶ್ರೀ ಎಸ್.ಬಂಗಾರಪ್ಪ :— ಒಂದೇ ಒಂದು ದೌರ್ಭಾಗ್ಯದ ವಿಚಾರ. ಇವತ್ತು ಇಷ್ಟೊಂದು ವಿವರಗಳನ್ನು ಇಟ್ಟರೂ ಕೊಡ, ಶುಕ್ಲಾರವರನ್ನು ನಂಬುವ ಪ್ರಶ್ನೆ ಅಲ್ಲ; ಅವರು ಹೇಳಿದ್ದನ್ನು ನಂಬುವುದಕ್ಕೆ ಇವರು ತಯಾರಿದ್ದಾರೆ. ಆದರೆ ನಿಮ್ಮ ರಾಜ್ಯದ ಮುಖ್ಯಮಂತ್ರಿ ಹೇಳುವುದನ್ನು ನಂಬುವುದಕ್ಕೆ ನೀವು ತಯಾರಿಲ್ಲ. ಇದು ಏಕೆ ಎಂದು ಕೇಳುತ್ತಿದ್ದೇನೆ. ಅದಕ್ಕೇ ಇದರಲ್ಲಿ ರಾಜಕೀಯ ಇಲ್ಲದೇ ಇನ್ನೇನು ಕಾರಣ ಎಂಬ ಮಾತನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ :— ನೀವು ಆ ರೀತಿ ನಡೆದುಕೊಳ್ಳಲಿಲ್ಲ. ನೀವು ವಿಶ್ವಾಸಕ್ಕೆ ಧಕ್ಕೆ ಬರುವ ರೀತಿಯಲ್ಲಿ ನಡದು, ನಿಮ್ಮ ಮನೆ ಮುಂದೆ ಬಂದಾಗ, ನಮ್ಮನ್ನು ಅರೆಸ್ಟ್ ಮಾಡಿಸಿ, ಅಪಮಾನ ಮಾಡಿಸಿ, ನಮ್ಮನ್ನು ಪೋಲೀಸ್ ಸ್ಟೇಷನ್‌ಗೆ ಕಳುಹಿಸಿಕೊಟ್ಟಿರಿ. ಇದನ್ನು ನೀವು ಬಹಳ ಹಗುರವಾಗಿ ತೆಗೆದುಕೊಳ್ಳುತ್ತೀರಾ? ನೀವು ಮಾಡುವ ಕೆಲಸ ನಾವು ಮಾಡಿದ್ದೇವೆ. ಇದು ಅಪಮಾನ ಅಲ್ಲವೇ? ಮಾನ್ಯ ಚಂದ್ರೇಗೌಡರ ಅಂಗಿ ಅಲ್ಲ, ಮುಂಡಿ ಹರೀತು.

ಶ್ರೀ ಬಿ.ಹೆಚ್. ಬನ್ನಿಕೋಡ್ : ವಿರೋಧ ಪಕ್ಷದವರು ಮಾನ್ಯ ಮುಖ್ಯಮಂತ್ರಿಗಳ ಮನೆ ಮುಂದೆ ಧರಣಿಗೆ ಹೋದ ಸಂದರ್ಭದಲ್ಲಿ ನಡೆದಂಥ ದೌರ್ಜನ್ಯ ಎಂದೂ ನಡೆದಿರಲಿಲ್ಲ. ಆ ದಿನ ಮುಖ್ಯಮಂತ್ರಿಗಳು ಬಂದು ಮಾತನಾಡಬಹುದಿತ್ತು. ಆದರೆ ನಮ್ಮನ್ನು ಅರೆಸ್ಟ್ ಮಾಡಿಸಿದರು; ಅಂದು ಪೋಲೀಸಿನವರು ನಮ್ಮ ಮೇಲೆ ಅವಾಚ್ಯ ಶಬ್ದಗಳನ್ನೂ ಉಪಯೋಗ ಮಾಡಿದ್ದಾರೆ.

ಶ್ರೀ ಬಿ.ಎಸ್ ಯಡಿಯೂರಪ್ಪ ;— ನಾವು ಧರಣಿ ಮಾಡುವುದಕ್ಕೆ ಹೋದಾಗ ತಾವು ಹೊರಗಡೆ ಬರುತ್ತೀರಾ, ಏನು ಅನ್ಯಾಯವಾಗಿದೆ ಎಂದು ಧರಣಿ ಕುಳಿತಿದ್ದೀರಿ, ಬನ್ನಿ ಮಾತನಾಡೋಣ ಎಂದು ಒಳಗಡೆ ಕರೆದು ಚರ್ಚೆ ಮಾಡುತ್ತೀರಿ ಎಂದು ತಿಳಿದಿದ್ದೆವು. ನಾವು ನಿಮ್ಮ ಮನೆ ಮುಂದೆ ಬಂದಾಗ, ನಿಜಕ್ಕೂ ತಾವು ಇದ್ದಿರಿ, ಮನೆಯೊಳಗೇ ಇದ್ದು, ಪೋಲೀಸ್ ಬಂದೋಬಸ್ತ್‌ನಲ್ಲಿ ನಮ್ಮ ಮೇಲೆ ಮಾಡಬಾರದ ಕೆಲಸಗಳನ್ನು ಮಾಡಿಸಿದ್ದೀರಿ.

ಶ್ರೀ ಎಸ್. ಬಂಗಾರಪ್ಪ :- ನಾವು ಮಾಡಬಾರದ ಕೆಲಸ ಮಾಡುವುದಕ್ಕೆ ಹೋಗಿಲ್ಲ. ನೀವು ಮಾಡಬಾರದಂತಹ ಕೆಲಸ ಮಾಡುವುದಕ್ಕೆ ಹೋಗಿ, ಈ ನಮೂನೆ ಮಾತನಾಡುತ್ತಿದ್ದೀರಿ. ನಾನು ಇಷ್ಟುಮಾತ್ರ ಹೇಳುತ್ತೇನೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ :- ಇದು ಬಹಳ ಗಂಬೀರವಾದ ವಿಚಾರ. ಮಾನ್ಯ ಕರಿಯಣ್ಣನವರು ಕಾವೇರಿ, ಬೆಂಗಳೂರಿನಲ್ಲಿರತಕ್ಕ ಕಾವೇರಿ ಬೆಂಗಳೂರಿನಲ್ಲಿನ ಕಾವೇರಿ, ಕೃಷ್ಣಾ ಒಟ್ಟಿಗೆ ಇವೆ. ಒಂದು ಮುಖ್ಯಮಂತ್ರಿಗಳ ಕಾರ್ಯಾಲಯ ಮತ್ತೊಂದು ಮುಖ್ಯಮಂತ್ರಿಗಳ ನಿವಾಸ. ನಾವು ಮಾತನಾಡುವುದು ಕಾವೇರಿ ಮತ್ತು ಕೃಷ್ಣಾ ನದಿಗಳ ವಿಚಾರ. ನೀವು ಮಾತನಾಡತಕ್ಕ ಕಾವೇರಿ ಕೃಷ್ಣಾ ಇದೆಯಲ್ಲ, ಅವು ಅಧ್ಯಕ್ಷರ ನಿವಾಸ ಮತ್ತು ಬಂಗಲೆ ಅಲ್ಲ.

ಶ್ರೀ ಎಸ್. ಬಂಗಾರಪ್ಪ :- ನಾವು ಇದ್ದ ಕಾಲದಲ್ಲೂ ಆ ಕಾವೇರಿ ಇತ್ತು, ನಾವು ಇದ್ದ ಕಾಲದಲ್ಲೂ ಅದೇ ಕಾವೇರಿ ಇದೆ.

ಶ್ರೀ ವಾಟಾಳ್ ನಾಗರಾಜ್ :-ಕಾವೇರಿ, ಕೃಷ್ಣಾ ಇದೆ, ಇದರಜೊತೆಗೆ ಶರಾವತಿ ಏಕೆ ಆಗುವುದಿಲ್ಲ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ :- ನನಗಂತೂ ಆಸೆ ಇದೆ, ತಾವು ಇನ್ನೂ ಕೂಡಾ ಬಹಳ ಕಾಲದವರೆಗೆ ಇರಬೇಕೆಂದು, ಜನರ ಆಶೀರ್ವಾದ ಮಾತ್ರ ತಮಗೆ ಇರಬೇಕಾಗುತ್ತದೆ, ಅಷ್ಟೇ ಪ್ರಶ್ನೆ.

ಶ್ರೀ ವಾಟಾಳ್ ನಾಗರಾಜ್ :- ನೀವು ನಮಗೆ ತೊಂದರೆ ಕೊಡದೇ ಹೋದರೆ ಜನರ ಆಶೀರ್ವಾದ ಇದ್ದೇ ಇರುತ್ತದೆ.

ಶ್ರೀ ಎಸ್ ಬಸವರಾಜ ರಾಯರೆಡ್ಡಿ :- ನಾಯಕರೇ, ನೀವು ಇದ್ದಷ್ಟೂ ನಮಗೆ ಬಹಳ ಒಳ್ಳೆಯದು.

ಶ್ರೀ ಎಸ್. ಬಂಗಾರಪ್ಪ :- ಮಾನ್ಯ ಸಭಾಧ್ಯಕ್ಷರೇ, ಈ ಸಂದರ್ಭದಲ್ಲಿ ನಾನು ಇಷ್ಟೇ ಹೇಳುವುದು. ಧರಣಿ ವಿಚಾರ ಹೇಳಿದರು, ನಮ್ಮನ್ನು ಕರೆದು ಮಾತನಾಡಿದಿರಾ ಎಂದು ಕೇಳಿದರು ; ಹಾಗಿದ್ದರೆ ತಾವು ಬರುತ್ತೇವೆ. ಧರಣಿ ಕುಳಿತುಕೊಳ್ಳುತ್ತೇವೆ ಎಂದು ಹೇಳಿದ್ದಿರಾ ಎಂದು ಕೇಳುತ್ತೇನೆ. ನಾವು ಬರುತ್ತೇವೆ, ಧರಣಿ ಕುಳಿತುಕೊಳ್ಳುತ್ತೇವೆ, ನೀವು ಮನೆಯಲ್ಲೇ ಇರಿ ಎಂದು ನೀವು ಹೇಳಿದ್ದಿರಾ?

ಶ್ರೀ ವಾಟಾಳ್ ನಾಗರಾಜ್ :- ನಾವು ಧರಣಿ ಕುಳಿತುಕೊಳ್ಳುವುದಕ್ಕೆ ಇವರಿಗೆ ಅರ್ಜಿ ಹಾಕಬೇಕಾಗಿತ್ತು. ಇಷ್ಟು ಹೊತ್ತಿಗೆ ಬರುತ್ತೇವೆ, ನೀವು ಅಲ್ಲೇ ಇರಿ, ನಾವು ಬಂದು ಧರಣಿ ಕುಳಿತುಕೊಳ್ಳುತ್ತೇವೆ ಎಂದು ಅರ್ಜಿ ಹಾಕಬೇಕಾಗಿತ್ತು. ಅಲ್ಲವೇ? ಇದೊಂದು ಹೊಸ ಪದ್ಧತಿ, ಧರಣಿ ಕುಳಿತುಕೊಳ್ಳಬೇಕಾದರೆ ಅರ್ಜಿ ಹಾಕಬೇಕೆಂದು ಪೋಲೀಸ್ ಕಾಯಿದೆ ಮಾಡಿಬಿಡಿ.

ಶ್ರೀ ಜಿ. ಮಾಧುಸ್ವಾಮಿ : ಹಾಗಾದರೆ ನಾವೇನೂ ಪೊಲೀಸರಿಗೆ ಅರ್ಜಿ ಹಾಕಿರಲಿಲ್ಲ. ಅವರನ್ನು ಏತಕ್ಕೆ ಕಳುಹಿಸಿದಿರಿ, ರೋಡ್‌ನಲ್ಲಿ ಹೋಗುವವರನ್ನು ತಡೆದಿದ್ದಾರೆ.

ಶ್ರೀ ಎಸ್. ಬಂಗಾರಪ್ಪ : ನಾನು ಏತಕ್ಕೆ ಹೇಳಿದೆ ಎಂದರೆ, ಯಡಿಯೂರಪ್ಪನವರು ನಮ್ಮನ್ನು ಕರೆಸಿ ಮಾತನಾಡಿದಿರಾ ಎಂದು ಕೇಳಿದರು. ಒಳ್ಳೆ ಚೆನ್ನಾಗಿ ಇದೆಯಲ್ಲ. ಕರೆಸಿ ಮಾತನಾಡಿ ಎಂದು ಹೇಳುವುದಕ್ಕೆ ಮೊದಲು, ಸ್ವಲ್ಪ ಮಾತನಾಡೋಣ ಕುಳಿತುಕೊಂಡು ಎಂದು ನೀವು ನಮಗೆ ಹೇಳಿದ್ದರೆ, ನಾವು ಯಾವಾಗಲೂ ಗೌರವ ಕೊಟ್ಟಿಲ್ಲವೇ ಮತ್ತೂ ಮಾತನಾಡುವುದಕ್ಕೆ ನಾವು ರೆಡಿ ಇದ್ದಾಗ ಇಲ್ಲ, ನಾವು ಧರಣಿ ಕುಳಿತುಕೊಳ್ಳುತ್ತೇವೆ ಅಂದಾಗ ನಾನು ಏನು ಮಾಡಬೇಕು ಅದಕ್ಕೆ? ಧರಣಿ ಕುಳಿತುಕೊಳ್ಳುವುದು ಬಿಡುವುದು ನಿಮ್ಮ ಹಕ್ಕು, ನಿಮ್ಮ ಬಗ್ಗೆ ನಮಗೆ ಗೌರವ ಇದೆ; ಅಷ್ಟು ಮಾತ್ರ ಹೇಳಿ ಅಲ್ಲಿಗೇ ನಿಲ್ಲಿಸುತ್ತೇನೆ. ಮತ್ತ ಅದರ ಬಗ್ಗೆ ಬೆಳೆಸುವುದಕ್ಕೆ ಹೋಗುವುದಿಲ್ಲ. ಮಾನ್ಯ ಸಭಾಧ್ಯಕ್ಷರೇ ಈ ಸಂದರ್ಭದಲ್ಲಿ ವಿವರಗಳಿಗೆ ಏತಕ್ಕೆ ಹೋಗುತ್ತೀರಿ ಎಂದು ಮಾತನಾಡಿದರು; ತಾವು ಮಾತನಾಡಬೇಕಾದರೆ ಕೆಲವು ವಿಚಾರಗಳ ಬಗ್ಗೆ ವಿವರಗಳನ್ನು ಕೊಟ್ಟಿದ್ದೀರಿ. ಅದಕ್ಕೂ ಅವರು ಅಬ್ಜೆಕ್ಷನ್ ತೆಗೆದರು. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಬೇರೆ ಮಾನ್ಯ ಸದಸ್ಯರುಗಳು ಇತರ ವಿಚಾರಗಳನ್ನು ಕುರಿತು ಮಾತನಾಡಿದ್ದಾರೆ. ಅದಕ್ಕೆ ನಾನು ಉತ್ತರ ಕೊಡಬೇಕು. ಏತಕ್ಕೆಂದರೆ that will go on record unchallenged.

ಅದಕೋಸ್ಕರ ನಾಳೆ ಜನಮನದಲ್ಲಿ ಅದು ಉಳಿಯಬಾರದು, ನಾಳೆ ಈ ವರದಿಯನ್ನು ಓದತಕ್ಕಂಥವರ ಮನಸ್ಸಿನಲ್ಲಿ ಇದು ಉಳಿಯಬಾರದು, ಅದಕ್ಕೋಸ್ಕರ ಪ್ರಾಮಾಣಿಕ ಪ್ರಯತ್ನ ಪಟ್ಟಿದ್ದೇನೆ, ಬೇರೆ ಏನೂ ಇಲ್ಲ. ಅದರೂ ಕೂಡ I am trying to avoid as far as possible going into the details on the matter, better I must do that because that is an accepted matter to which all parties have subscribed. ನಾನು ಆ ದೃಷ್ಟಿಯಿಂದ ಈ ಮಾತನ್ನು ಹೇಳಿದ್ದೇನೆ.

ಮಾನ್ಯ ಸಭಾಧ್ಯಕ್ಷರೇ, ಇನ್ನು ಹಕ್ಕುಚ್ಯುತಿಯ ಮೆರಿಟ್ಸ್ ಬಗ್ಗೆ ಅವರು ಹೇಳತಕ್ಕಂಥ ಸಂದರ್ಭದಲ್ಲಿ ಚೀಫ್ ಎಂಜಿನಿಯರ್ ಡಬ್ಲ್ಯು.ಆರ್.ಡಿ.ಓ. ವಿಚಾರದಲ್ಲಿ ಹೇಳಿದ್ದಾರೆ. ಅದನ್ನು ನಾನು ಕೊನೆಯಲ್ಲಿ ಹೇಳುತ್ತೇನೆ. ಅದಕ್ಕಿಂತ ಮೊದಲು ಹಕ್ಕುಚ್ಯುತಿ ಬಗ್ಗೆ ಮಾತನಾಡುವುದು ಮುಖ್ಯ. ಎರಡು ವಿಚಾರಗಳನ್ನು ಮಾನ್ಯ ಯಡಿಯೂರಪ್ಪನವರು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಪ್ರಧಾನಮಂತ್ರಿಯವರು ಕರೆದ ಒಂದು ಸಭೆಯಲ್ಲಿ ಆಗಿರತಕ್ಕಂಥ ವಿಚಾರದಲ್ಲಿ ನೀವು ಒಪ್ಪಿಕೊಂಡು ಬಂದುಬಿಟ್ಟಿದ್ದೀರಿ, ಟ್ರಿಬ್ಯುನಲ್ ಕೇಸ್ ನಾವು ನಡೆಸಿಕೊಳ್ಳುತ್ತೇವೆ, ಮತ್ತೊಂದು ಮಾಡುತ್ತೇವೆ ಎಂಬ ಬಗ್ಗೆ ಹೇಳಿದ್ದಾರೆ. ಅದು ಏನು ಹೇಳಿದ್ದೇವೆ ತಾವು ದಯವಿಟ್ಟು ಅದನ್ನು ಓದಿ ನೋಡಬೇಕು. ಅದರ ಬಗ್ಗೆ ಮುಚ್ಚುಮರೆ ಏನೂ ಇಲ್ಲ. subject to the decision of the tribunal.
ಎಂಬುದು ಅಲ್ಲಿ ಒಂದು ಅಭಿಪ್ರಾಯ. ನಾವು ಇಲಿ ನಮ್ಮ ನಿರ್ಣಯದಲ್ಲಿ ಟ್ರಿಬ್ಯುನಲ್ ಬಹಿಷ್ಕಾರ ಮಾಡಬೇಕೆನ್ನತಕ್ಕಂಥಾದ್ದು ಇಲ್ಲ.

ಶ್ರೀ ಡಿ.ಬಿ ಚಂದ್ರೇಗೌಡ :– ಅದು ನಮ್ಮ ವಾದವೂ ಅಲ್ಲ.

ಶ್ರೀ ಎಸ್. ಬಂಗಾರಪ್ಪ :– ಅದು ನಮ್ಮ ವಾದಾನೂ ಅಲ್ಲ. ಜೊತೆಗೆ ಅದು ನಿರ್ಣಯದಲ್ಲೂ ಇಲ್ಲ. ನಿರ್ಣಯವನ್ನು ದಯವಿಟ್ಟು ಓದಿ ನೋಡಿ. Though we discussed, ನಾವು ಅದನ್ನು ಹೇಳಿದ್ದೇವೆ. ಆ ಕಾಲದಲ್ಲಿ ಬಹಿಷ್ಕಾರ ಹಾಕಬೇಕೆಂದು ಯಡಿಯೂರಪ್ಪನವರು ಹೇಳಿದರು, ಆ ರೂಮಿನಲ್ಲಿ ಕುಳಿತುಕೊಂಡಾಗ ಹೇಳಿದ್ದರು; ನನಗೆ ಇನ್ನೂ ನೆನಪಿದೆ. We did not incorporate that portion into the resolution for so many obvious reasons. ನಾವು ಮಾಡಲಿಲ್ಲ. ನಾವು ಕೊನೆಯಲ್ಲಿ ಯುನಾನಿಮಸ್ ಆಗಿ ತಮ್ಮನ್ನೂ ಒಳಗೊಂಡಂತೆ ನಿರ್ಣಯ ಮಾಡಿದ್ದೇವೆ. ಅದರಲ್ಲಿ ಏನು ಹೇಳಿದ್ದೇವೆ, ಅಲ್ಲಿರತಕ್ಕಂಥ ನ್ಯಾಯ ಮಂಡಲಿಯ ತೀರ್ಪು ಏನಿದೆ, ನಾವು ಅದನ್ನು ಬಹಿಷ್ಕಾರ ಮಾಡುತ್ತೇವೆ ಅದಕ್ಕೆ ಒಪ್ಪಿಗೆ ಇಲ್ಲ, ಎಂಬ ಮಾತನ್ನು ಹೇಳಿದ್ದೇವೆ. ಇವತ್ತು ಟ್ರಿಬ್ಯುನಲ್ ಮುಂದೆ ಹೋಗುವುದನ್ನು ಬಹಿಷ್ಕಾರ ಮಾಡಿಲ್ಲ ಎಂಬ ಮಾತನ್ನು ಅಡಿದ ಮೇಲೆ ಅದಕ್ಕೆ ಅರ್ಥ ಏನು? ಟ್ರಿಬ್ಯುನಲ್ ಮುಂದೆ ನಾವು ಇನ್ನೂ ಇದ್ದೇವೆ ಎಂದು ಅದರ ಅರ್ಥ. ನಮ್ಮ ಪ್ರೊಸೀಡಿಂಗ್ಸ್‌ನಲ್ಲಿ ಏನಿದೆ ಅದಕ್ಕೆ ನಾವು ಭಾಗಿಯಾಗಿದ್ದೇವೆ ಎಂದು ಅದರ ಅರ್ಥ. I am not trying to defend. ಏನಾದರೂ ಮಾಡಿ ಮತ್ತೊಂದು ದಾರಿ ಹುಡುಕಬೇಕೆಂದು ನನ್ನ ಆಸೆ. ಕೆಲವು ಕಾರಣದಿಂದ ನಾವೂ ನೀವೂ ಎಲ್ಲಾ ಸೇರಿ ರೆಸಲ್ಯೂಷನ್ ಮಾಡತಕ್ಕ ಕಾಲದಲ್ಲಿ ನಾವು ಇದನ್ನು ಹಾಗೇ ಇಟ್ಟಿದ್ದೇವೆ. ಏನಾದರೂ ಮಾಡಿ ಮತ್ತೊಂದು ದಾರಿ ಹುಡುಕಬೇಕೆನ್ನುವುದು ನಮ್ಮ ಆಸೆ ಅಲ್ಲ. ಕೆಲವು ಕಾರಣಗಳಿಂದ ನಾವು ನೀವು ಎಲ್ಲಾ ಸೇರಿ ಈ ಒಂದು ನಿರ್ಣಯ ಮಾಡತಕ್ಕಂಥ ಕಾಲದಲ್ಲಿ ಆದನ್ನು ಹಾಗೆ ಇಟ್ಟಿದ್ದೇವೆ. ಏಕೆಂದರೆ ಮತ್ತೊಂದು ನಿರ್ಣಯ ಮಾಡುವ ಸಂದರ್ಭ ಬಂದರೆ ಅದು ಒಂದೇ ಒಂದು ನಿಮಿಷದ ಕೆಲಸ, ತಡವಾಗುವುದಿಲ್ಲ ಎನ್ನತಕ್ಕಂಥ ದೃಷ್ಟಿಯಿಂದ ನಾವು ಆ ರೀತಿಯಲ್ಲಿ ಮಾಡಿಕೊಂಡಿದ್ದೇವೆ. ಇನ್ನೊಂದು ವಿಚಾರ. ನಾವು ಬಹಿಷ್ಕಾರ ಹಾಕತಕ್ಕಂಥ ವಿಚಾರ ಅದರಲ್ಲಿ ಇಲ್ಲ. ಮತ್ತೊಂದು ತಿರಸ್ಕಾರ ಮಾಡಬೇಕು. ಅದರ ಅರ್ಥ ಒಪ್ಪಿಗೆ ಇಲ್ಲ ಎನ್ನತಕ್ಕಂಥಾದ್ದು ತಾನೆ. ನಾವು ಟ್ರಿಬ್ಯುನಲ್ ಆರ್ಡರ್ ಏನಿದೆ ಅದಕ್ಕ ನಮ್ಮ ಒಪ್ಪಿಗೆ ಇಲ್ಲ, ಎನ್ನತಕ್ಕಂಥಾದ್ದು. ಮಾನ್ಯ ಅಧ್ಯಕ್ಷರೇ, ನಮ್ಮ ನಿರ್ಣಯಕ್ಕೆ ಸರಿಯಾಗಿ ನಾವು ಇವತ್ತಿನವರೆಗೂ ನಮ್ಮ ನಡವಳಿಕೆಗಳನ್ನು ಇಟ್ಟುಕೊಂಡು ಬಂದಿದ್ದೇವೆ. ಹೋಗೆ? ಇವತ್ತು ನಾವು ಟ್ರಿಬ್ಯುನಲ್ ಮುಂದೆ

ಹಾಜರಾಗಿದ್ದೇವೆ ಏಕೆಂದರೆ ಬಹಿಷ್ಕಾರ ಮಾಡಬೇಕೆಂದು ನಾವು ನಿರ್ಣಯ ಮಾಡಿಲ್ಲ. ನಾವು ಹಾಜರಾಗಿದ್ದೇವೆ. ನಾವು ಹಾಜರಾಗಿ ಏನು ಮಾಡಿದ್ದೇವೆ, ಯಾವುದೇ ಸಂದರ್ಭದಲ್ಲೂ ಕೂಡ ನಿಮ್ಮ ಆರ್ಡರನ್ನು ನಾವು ಒಪ್ಪಿದ್ದೇವೆ ಎನ್ನತಕ್ಕಂಥ ಮಾತನ್ನು ನಾವು ಎಲ್ಲೂ ಕೂಡ ಹೇಳಲಿಲ್ಲ. You please go through the proceedings.

ಶ್ರೀ ಬಿ.ಎಸ್ ಯಡಿಯೂರಪ್ಪ :— ಮಾನ್ಯ ಮುಖ್ಯಮಂತ್ರಿಗಳೇ, ಒಬ್ಬ ಜಡ್ಜ್ ತೀರ್ಪು ಕೊಟ್ಟಮೇಲೆ ನಾನು ಒಪ್ಪಿದ್ದೇನೆ, ಒಪ್ಪಬೇಕು ಅಂತ ಇಲ್ಲ.

ಶ್ರೀ ಎಸ್. ಬಂಗಾರಪ್ಪ :— ತಾಳಿ ತಮ್ಮ ಪ್ರಕಾರ ಆಗಲಿ, ನಾವೇನು ಹೇಳಿದ್ದೇವೆ. ಇದು ಅನ್ಯಾಯವಾಗುತ್ತದೆ. ಅದನ್ನು ಸರಿ ಮಾಡಬೇಕು. ಇದು ಈಗ ಸರಿ ಇಲ್ಲ. ಅದಕ್ಕೆ ನಮ್ಮ ಒಪ್ಪಿಗೆ ಇಲ್ಲ ಎಂಬ ಇದೇ ವಾದವನ್ನು ನಮ್ಮ ನಿರ್ಣಯದಲ್ಲಿ ಹೇಳಿದ್ದೇವೆ. ನಮ್ಮ ಒಪ್ಪಿಗೆ ಇಲ್ಲ, ಎನ್ನತಕ್ಕಂಥ ಮಾತನ್ನು ಟ್ರಿಬ್ಯುನಲ್ ಆರ್ಡರ್ ಬಗ್ಗೆ ಹೇಳಿದ್ದೇವೆ. ಟ್ರಿಬ್ಯುನಲ್ ಮುಂದೆ ಕೂಡ ನಾವು ಇದೇ ವಾದವನ್ನು ಇಟ್ಟಿದ್ದೇವೆ. ಅದು ನಮಗೆ ಒಪ್ಪಿಗೆ ಇಲ್ಲ. ಆದರೂ ಕೂಡ ಅವರು ಪತ್ರ ಬರೆದಿದ್ದಾರೆ.

ಶ್ರೀ ಸಿ. ಭೈರೇಗೌಡ :— ರಿವಿಜನ್ ಪಿಟೀಶನ್ ಹಾಕಿದ್ದೀರಲ್ಲಾ.

ಶ್ರೀ ಎಸ್. ಬಂಗಾರಪ್ಪ :— ಆ ವಿಚಾರದಲ್ಲಿ ಹೇಳುವುದಾದರೆ ರಿವಿಜನ್ ಪಿಟೀಶನ್ ಹಾಕಿದಾಗ ನಾವು......

ಶ್ರೀ ಸಿ. ಭೈರೇಗೌಡ :— ಅದನ್ನು ಕನ್ಸಿಡರ್ ಮಾಡಿ ತಾನೇ ರಿವಿಜನ್ ಪಿಟೀಶನ್ ಹಾಕಿದ್ದೀರಿ.

ಶ್ರೀ ಎಸ್. ಬಂಗಾರಪ್ಪ :— ರಿವಿಜನ್ ಪಿಟಿಷನ್ ಹೇಳಿದರೆ ಅದರ ಅರ್ಥ ಏನು? ನಾವು ನಿಮ್ಮ ಆರ್ಡರ್‌ನ್ನು ಒಪ್ಪಿದ್ದೇವೆ ಅಂತ ಅಲ್ಲ. ರಿವಿಜನ್ ಪಿಟೀಶನ್ ಅನ್ನು ನಾವು ಏತಕ್ಕೆ ಹಾಕಿದ್ದೇವೆ ಅಂದರೆ ಕಾನೂನು ಪ್ರಕಾರ ನಿಮ್ಮ ಆರ್ಡರ್‌ನಿಂದ ನಮಗೆ ಅನ್ಯಾಯ ಆಗಿದೆ. ಇದು ಸರಿಯಲ್ಲ. ಎನ್ನತಕ್ಕಂಥಾದ್ದಕ್ಕೆ ರಿವಿಷನ್ ಪಿಟಿಷನ್ ಹಾಕಿರುವುದು. ನಿಮ್ಮ ಆರ್ಡರ್ ಒಪ್ಪಿದ್ದೇವೆ ಎನ್ನುವುದಕ್ಕೆ ರಿವಿಜನ್ ಪಿಟೀಶನ್ ಅಲ್ಲ. ಆರ್ಡರ್ ಒಪ್ಪಿದ್ದರೆ ರಿವಿಜನ್ ಪಿಟೀಷನ್ ಹಾಕುವ ಅವಶ್ಯಕತೆ ಇರಲಿಲ್ಲ. Therefore, we are completely in tune with the letter and spirit of the resolution adopted by the Legislative Assemply to which the Government was also a party.

ನಾನು ಇಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತಿಲ್ಲ. ಆದ್ದರಿಂದ ಇದನ್ನು ತಾವು ಗಮನಿಸಬೇಕು. ಯಾವುದೇ ಸಂದರ್ಭದಲ್ಲಿ ಆರ್ಡರ್ ಒಪ್ಪಿಗೆ ಆಗಿದೆ ಎನ್ನತಕ್ಕಂಥ ಮಾತನ್ನು ಸರ್ಕಾರ ಹೇಳಿಲ್ಲ. ನಮ್ಮ ನಿರ್ಣಯಕ್ಕೆ ಅನುಗುಣವಾಗಿ ಅಲ್ಲಿ ನಮ್ಮ ಎಲ್ಲ ವಾದವನ್ನು ಮಂಡಿಸಿದ್ದೇವೆ. ಬಹುಶಃ ಇದೇ ವಾದವನ್ನು ನಾವು ಅಲ್ಲಿ ಇಟ್ಟಿದ್ದೇವೆ. ಇನ್ನೊಂದು ವಿಚಾರ. ಇಲ್ಲಿ ಇರುವ ವಿಚಾರ ಏನೆಂದರೆ, ಮಾನ್ಯ ಅಧ್ಯಕ್ಷರೇ, ಯಾವುದೇ ಸಂದರ್ಭದಲ್ಲೂ ಈ ನಿರ್ಣಯಕ್ಕೆ ವಿರುದ್ಧವಾಗಿ ಹೋಗತಕ್ಕಂಥ ವಿಚಾರ ಇಲ್ಲ. ಅದು ನಮ್ಮ ಹಕ್ಕು ಹೌದು. ಆನವು ಅದನ್ನು ಬಹಿಷ್ಕಾರ ಮಾಡಬೇಕು ಅಂತ ಆಗಿದ್ದರೆ ನಾವು ಏನಾದರೂ ಅಲ್ಲಿ ಒಪ್ಪಿಗೆ ಕೊಟ್ಟು ಬಹಿಷ್ಕಾರ ಮಾಡುವುದು ಅಂತ ಆಗಿದ್ದು ಅದಕ್ಕೆ ನಾವು ಟ್ರಿಬ್ಯುನಲ್ ಮುಂದೆ ಹೋಗಿ ನಿಂತಿದ್ದರೆ ಅದು ಬೇರೆ. ಸ್ವಾಮಿ ನಾನು ಕೇಳುತ್ತೇನೆ, ದಯಮಾಡಿ ನಿರ್ಣಯವನ್ನು ತಾವು ಓದಿ ನೋಡಿ. ಬಹಿಷ್ಕಾರದ ಪ್ರಶ್ನೆ ಇಲ್ಲ ಅಲ್ಲಿ. ಆದ್ದರಿಂದ ಹಕ್ಕುಚ್ಯುತಿ ಈ ವಿಚಾರಕ್ಕೆ ಬರುವುದಿಲ್ಲ. ಇನ್ನೊಂದು ಟ್ರಿಬ್ಯುನಲ್ ಆರ್ಡರ್ ಏನಿದೆ ಇದು ನಮಗೆ ಒಪ್ಪಿಗೆ ಇಲ್ಲ. ತಿರಸ್ಕಾರ ಮಾಡಬೇಕೆಂದು ನಾವು ಹೇಳಿದ್ದೇವೆ. ನಾವು ಅಪೀಲ್ ಹಾಕುವಾಗ ಅದರಲ್ಲಿ 'ಬ್ಯಾಡ್ ಇನ್ ಲಾ' ಅಂತ ಇವೆಲ್ಲಾ ಬರುತ್ತದೆ ......

ಶ್ರೀ ವೈ. ಕೆ. ರಾಮಯ್ಯ :— ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಎರಡು ವಿಷಯಗಳಲ್ಲಿ ನನಗೆ ಕ್ಲಾರಿಫಿಕೇಶನ್ಸ್ ಕೊಡಬೇಕು. ಒಂದು ವಿ.ಸಿ. ಶುಕ್ಲಾರವರು ಅವರ ಹೆಸರು ನಮಗೆಲ್ಲಾ ಬಹಳ ಫೆಮಿಲಿಯರ್. ಅವರು ಈ ರಾಷ್ಟ್ರದ ಮಂತ್ರಿಗಳು. ಕೇಂದ್ರ ಸರ್ಕಾರದ ಮಂತ್ರಿಗಳು. ಅವರು ಜವಾಬ್ದಾರಿ ಸ್ಥಾನದಲ್ಲಿದ್ದಾರೆ. ಅವರು ಏನಾದರೂ ಒಂದು ಹೇಳಿಕೆ ಕೊಟ್ಟರೆ ಆ ಹೇಳಿಕೆ ಸರಿಯಾಗಿಲ್ಲ ಅಂತ ನಮ್ಮ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ನನ್ನನ್ನು ನಂಬುತ್ತೀರೇ ಅಥವಾ ಶುಕ್ಲಾರವರನ್ನು

ನಂಬುತ್ತೀರೋ ಅಂತ ನಮ್ಮನ್ನು ಅವರು ಕೇಳುತ್ತಿದ್ದಾರೆ. ಈಗ ಇವರಿಬ್ಬರಲ್ಲಿ ಯಾರಾದರೂ ಒಬ್ಬರು ಸುಳ್ಳುಗಾರರು ಇರಬೇಕು. ಇಲ್ಲಾ ಶುಕ್ಲಾರವರು ಸುಳ್ಳುಗಾರರು ಇರಬೇಕು ಇಲ್ಲಾ ಮಾನ್ಯ ಮುಖ್ಯಮಂತ್ರಿಗಳು ಸುಳ್ಳುಗಾರರು ಇರಬೇಕು. ಇವರಿಬ್ಬರಲ್ಲಿ ಯಾರಾದರೂ ಒಬ್ಬರು ಸುಳ್ಳು ಹೇಳುತ್ತಿದ್ದಾರೆ. ಅದಕ್ಕಾಗಿ ದಯಮಾಡಿ ಸದನದ ಒಂದು ಸಮಿತಿ ಮಾಡಿ ಅಲ್ಲಿ ಅದನ್ನು ಪರಿಶೀಲನೆ ಮಾಡಿದರೆ ಉತ್ತಮ. ನಾನು ಹೇಳುತ್ತೇನೆ ಅವರ ಪ್ರಕಾರ ಶುಕ್ಲಾರವರು ಹೇಳಿದ್ದು ಸರಿ ಇಲ್ಲ ಅಂತ ಅವರು ಹೇಳುತ್ತಿದ್ದಾರೆ. ಶುಕ್ಲಾರವರು ಹೇಳಿದ್ದು ಸುಳ್ಳು ಇರಬೇಕು. ನೀರು ಬಿಟ್ಟಿದ್ದೇವೆ ಎನ್ನುವುದು. ನೀರು ಬಿಟ್ಟಿಲ್ಲ ಅಂತ ನಮ್ಮ ಮುಖ್ಯಮಂತ್ರಿಗಳು ಹೇಳಿದರು. ಇದು ಸುಳ್ಳು ಇರಬೇಕು. ಒಂದು. ಎರಡನೆಯದು ನಮ್ಮ ಟ್ರಿಬ್ಯುನಲ್ ಆರ್ಡರನ್ನು ನಾವು ಎಲ್ಲೂ ಒಪ್ಪಿಕೊಂಡಿಲ್ಲ ಅಂತ ಹೇಳುತ್ತಾರೆ. ಒಂದು ವಿಷಯ ಅವರಲ್ಲಿ ನಾನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ, ಏನೆಂದರೆ ಒಂದು ಕೋರ್ಟಿನ ತೀರ್ಮಾನ either to accept or tp reject it is not the choice of the party. This is minimum knowledge.

ಬಹುಶಃ ಕನಿಷ್ಟ ಒಂದು ತಿಳುವಳಿಕೆ ಕಾನೂನಿನ ಅರಿವು ಇರುವವರು ಈ ಪರಿಸ್ಥಿತಿಯನ್ನು Either it is the judgement or order to accept or reject. It is not the choice of the party. It will be binding on all the parties.

Sri S. Bangarappa. As far as second matter is concerned at no point of time we have said that it is the party's choice.

ಆ ಪ್ರಶ್ನೆ ಬಂದಿಲ್ಲ. ಆದ್ದರಿಂದ ಈಗ ಈ ಪ್ರಶ್ನೆ ಉದ್ಭವವಾಗುವುದಿಲ್ಲ. ಮೂಲ ವಿಚಾರ ತಾವು ಏನು ಹೇಳಿದ್ದೀರಿ ವಿ.ಸಿ. ಶುಕ್ಲಾರವರ ಬಗ್ಗೆ, ಆ ಬಗ್ಗೆ ನಾನು ವಿವರಣೆ ಕೊಟ್ಟು ಮುಗಿಸಿದ್ದೇನೆ. ಮತ್ತೆ ಹೇಳುವುದಿಲ್ಲ. ನನಗೆ ಅವರ ಬಗ್ಗೆ ಅಪಾರವಾದ ಗೌರವ ಇದೆ. ಆ ಪ್ರಶ್ನೆ ಪ್ರತ್ಯೇಕ. ರಾಜ್ಯದ ಹಿತದೃಷ್ಟಿಯಿಂದ ಮುಖ್ಯಮಂತ್ರಿಯಾಗಿ ನಾನು ಏನು ಕೇಳಬೇಕೋ ಅದನ್ನು ನಾನು ಹೇಳಿದ್ದೇನೆ. ಆದರೆ ಸಾಂದರ್ಭಿಕವಾಗಿ ಆ ರೀತಿ ಹೇಳಿಕೆ ಬರಬಾರದಾಗಿತ್ತು ಎನ್ನತಕ್ಕಂಥ ವಿವರಣೆ ಕೊಡುವುದಕ್ಕೆ ಪ್ರಯತ್ನ ಮಾಡಿದ್ದೇನೆಯೇ ವಿನಃ ನಾನು ಅವರ ಮೇಲೆ ಏನೋ ಹೇಳುವುದಾಗಲೀ, ಮತ್ತೊಂದಾಗಲಿ ಇಲ್ಲ ಎನ್ನತಕ್ಕಂಥ ಅಭಿಪ್ರಾಯ ನನ್ನ ಮನಸ್ಸಿನಲ್ಲಿ ಸ್ವಲ್ಪ ಕೂಡಾ ಇಲ್ಲ. ಆ ವಿಚಾರದ ಬಗ್ಗೆ ಮತ್ತೊಂದು ಸಾರಿ ನಾನು ಹೋಗುವುದಿಲ್ಲ. ಅನಂತರ, ಈ ಸಂದರ್ಭದಲ್ಲಿ ಮಾನ್ಯ ಸಭಾಧ್ಯಕ್ಷರೆ, ನಿರ್ಣಯದ ಬಗ್ಗೆ ನಾನು ಹೇಳುತ್ತಿದ್ದೆ, ಯಾವುದೇ ಸಂದರ್ಭದಲ್ಲಿ ಕೂಡಾ ಇಲ್ಲಿ ಬಹಿಷ್ಕಾರದ ಪ್ರಶ್ನೆ ಬರುವುದಿಲ್ಲ. ಎರಡನೆಯದು I am sorry, I will have to repeat this portion. ಮತ್ತೊಂದು, ಈ ಆರ್ಡರನ್ನು ನಾವು ಒಪ್ಪಿಕೊಂಡಿದ್ದೇವೆಂದು ಎನ್ನತಕ್ಕಂಥ ಮಾತನ್ನು ನಾವು ಎಲ್ಲೂ ಹೇಳಿಲ್ಲ. ತಾವು ಏನು ಅಭಿಪ್ರಾಯ ಇಟ್ಟು ಹೇಳಿದ್ದೀರಿ, ಅದೇ ಅಭಿಪ್ರಾಯವನ್ನು ನಾವು ತಿಳಿದುಕೊಂಡು ಮುಂದೆ ಕೂಡಾ ನಾವು ಹೇಳಿದ್ದೇವೆ. Therefore, we have questioned that Order of the Tribunal. That means, we have not accepted that in addition to it all aver ment was made in our resolution which we have adopted unanimously in both the Houses of the State Legislature. ಆದ್ದರಿಂದ ಮಾನ್ಯ ಸಭಾಧ್ಯಕ್ಷರೆ, ನಾನು ಕೇಳುತ್ತಿದ್ದೇನೆ? ಎಲ್ಲಿದೆ? Where is the ground on which you can say that there is a breach of privilege either of a Hon'ble Member of the August House or the House itself? Where is the question ? ಇಲ್ಲಿ ಎಲ್ಲಿದೆ ಎನ್ನತಕ್ಕಂಥ ಮಾತನ್ನು ಸ್ಪಷ್ಟವಾಗಿ ನಾನು ನಮ್ಮ ಮುಖಾಂತರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಮತ್ತೊಂದು ವಿಚಾರ. ಇಲ್ಲ ಇಲ್ಲ, ಇನ್ನು ಮೇಲಾದರೂ ಬಹಿಷ್ಕಾರ ಹಾಕುತ್ತೇವೆಂದು ಹೇಳಿ ಎಂದು ಮಾನ್ಯ ಬೈರೇಗೌಡಾಜಿಯವರು ಒಂದು ಮಾತನ್ನು ಹೇಳುತ್ತಿದ್ದರು. ನನಗೆ ಗೊತ್ತು ನಿಮ್ಮ ಕಳಕಳಿ, ಮತ್ತೊಂದು ನಾವು ಫುಲ್ ಚರ್ಚೆ ಮಾಡಿದ್ದೇವೆ. Including the matter relating to the boycotting of the proceedings that

are pending before the Tribunal. ನಾನು ಇಲ್ಲ ಎನ್ನುವ ಮಾತನಾಡುತ್ತಿಲ್ಲ. ಆದರೆ ಒಂದೇ ಒಂದು ಸರ್ಕಾರದ ವಿಚಾರ, There are divergent views. ಇದರ ಬಗ್ಗೆ ರಾಜ್ಯದ ಹಿತ ಕಾಪಾಡತಕ್ಕಂಥ ಕಳಕಳಿ ತಮಗೆ ಏನಿದೆ ಎನ್ನತಕ್ಕಂಥಾದ್ದನ್ನು ಅರ್ಥ ಮಾಡಿಕೊಂಡ ಮೇಲೆ ಅಷ್ಟೇ ಕಳಕಳಿಯಿಂದ ಈ ಒಂದು ಅಭಿಪ್ರಾಯವನ್ನು ಸ್ವೀಕಾರ ಮಾಡಿದ್ದೀರಿ. ಎನ್ನತಕ್ಕಂಥ ದೃಷ್ಟಿಯಿಂದ ತಮ್ಮ ಮುಖೇನ ಈ ಸದನದ ಗಮನಕ್ಕೆ ಮತ್ತು ವಿರೋಧ ಪಕ್ಷದ ನಾಯಕರುಗಳ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ ಅದು ಯಾವುದೆಂದರೆ, See taking up a decision to boycot the proceedings is a matter of a minute. ಒಂದೇ ನಿಮಿಷ What has happened? ಬಚಾವತ್ ಅವಾರ್ಡ್ ವಿಚಾರದಲ್ಲಿ ತಮಗೆಲ್ಲಾ ಗೊತ್ತಿದೆ. Decision was taken up at that point of time to boycott the proceeding before the Batchawat Commission. ಆಮೇಲೇನಾಯಿತು? ವಾಕ್‌ಔಟ್ ಮಾಡಿದ್ರು. ಎಲ್ಲಾ ತಮಗೆ ಗೊತ್ತಿದೆ. Again we have to go back and then appear before the Batchawat Tribunal. ತಮ್ಮ ಅಭಿಪ್ರಾಯ ಸರಿಯಲ್ಲ ಎನ್ನತಕ್ಕಂಥ ದೃಷ್ಟಿಯಿಂದ, ಮತ್ತೊಂದು ಸರಿ ಇದೆ ಎನ್ನತಕ್ಕಂಥ ದೃಷ್ಟಿಯಿಂದ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಮುಖ್ಯಮಂತ್ರಿಗಳೇ ತಾವು ಹೇಳಿಕೆ ಕೊಡತಕ್ಕಂಥ ಸಂದರ್ಭದಲ್ಲಿ ಒಂದು ವಿಷಯವನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ನಾನು ಅನೇಕ ಸಾರಿ ಒತ್ತಾಯ ಮಾಡಿದ್ದೇವೆ. ಈಗಲೂ ಒತ್ತಾಯ ಮಾಡುತ್ತಿದ್ದೇನೆ. ಏನೆಂದರೆ, ನಮ್ಮ ರಾಜ್ಯದ 5 ಜನ ಮಾಜಿ ಮುಖ್ಯಮಂತ್ರಿಗಳು ಪ್ರಧಾನಿಗಳನ್ನು ಭೇಟಿ ಮಾಡಿ ಒಂದು ಮನವಿಯನ್ನು ಅರ್ಪಣೆ ಮಾಡಿದ್ದಾರೆ. ಇತ್ತೀಚೆಗ ನಮ್ಮ ರಾಜ್ಯದ ಅತ್ಯಂಥ ಹಿರಿಯ ಮುಖಂಡರಾಗಿರತಕ್ಕಂಥ ಮಾನ್ಯ ನಿಜಲಿಂಗಪ್ಪನವರು ಹಾಗೂ ಪ್ರಾರಂಭದ ದಿವಸದಿಂದ ಪ್ರೊಫೆಸರ್ ನಂಜುಂಡಸ್ವಾಮಿಯವರು ಏನು ಹೇಳುತ್ತಿದ್ದರೆಂದರೆ ಈ ಜಲವನ್ನು ಹಂಚುವುದರ ಬಗ್ಗೆ ಯಾವುದೇ ರೀತಿಯ ಸ್ಪಷ್ಟವಾದ ರೂಪುರೇಷೆಗಳನ್ನು ಕೇಂದ್ರದವರು ಮಾಡದೇ ಇರುವುದರಿಂದಾಗಿ ಇದು ಮಾಡಿರತಕ್ಕಂಥಾದ್ದು ಸರಿಯಲ್ಲ ಎನ್ನತಕ್ಕಂಥಾದ್ದನ್ನು ಸುಮಾರು ಒಂದು ವಾರದ ಹಿಂದೆ ಇದೆಲ್ಲವನ್ನೂ ಸಹಿತಾ ದೀರ್ಘವಾಗಿ ಅಧ್ಯಯನ ಮಾಡಿದ ನಂತರ ಒಂದು ಹೇಳಿಕೆ ಮುಖಾಂತರ ಹೇಳಿದ್ದಾರೆ. ಆದ್ದರಿಂದ ನಾನು ತಮ್ಮಲ್ಲಿ ಈ ಸಂದರ್ಭದಲ್ಲಿ ಒತ್ತಾಯ ಮಾಡುವುದೇನೆಂದರೆ, ತಾವು ಏನೇ ಹೇಳಿಕೆ ಕೊಟ್ಟರೂ ಸಹಿತಾ 5 ಜನ ಮಾಜಿ ಮುಖ್ಯಮಂತ್ರಿಗಳು ಏನು ಮನವಿಯನ್ನು ಕೊಟ್ಟು ಈ ಚೌಕಟ್ಟಿನಲ್ಲಿ ಪ್ರಧಾನಿಗಳು ಇದನ್ನು ಬಗೆಹರಿಸಬಹುದು ಎನ್ನತಕ್ಕಂಥ ಮಾತನ್ನು ಹೇಳಿದ್ದಾರ. ಅದರ ಹಿನ್ನೆಲೆಯಲ್ಲಿ ತಾವು ಹೇಳಿಕೆ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ತಮ್ಮ ಗಮನಕ್ಕೆ ತರುವ ಹಾಗಿದ್ದರೆ, even that portion is incorporated in our resolution also. ಅದರಲ್ಲಿ ಇದೆಯಲ್ಲಾ ಸ್ವಾಮಿ? ತಮಗೆ ಗೊತ್ತಿರುವ ಹಾಗೆ. ನಾವು ರಾಷ್ಟ್ರೀಯ ಜಲ ನೀತಿ ರೂಪಿಸಿ ಆಮೇಲೆ ಅದಕ್ಕೆ ಗೈಡ್‌ಲೈನ್ಸ್, ಮತ್ತೊಂದು ಹಾಕಿ ಕೊಡುವವರೆಗೂ ಈ ವಿಚಾರಕ್ಕೆ ಹೋಗಬಾರದು. ಅನಂತರ ಬೇರೆ ರೀತಿಯಲ್ಲಿ ಮಾತುಕಥೆ ಮೂಲಕ ತೀರ್ಮಾನ ಆಗಬೇಕು. ಎನ್ನತಕ್ಕಂಥಾದ್ದೇ ನಮ್ಮ ನಿರ್ಣಯದ ಮುಖ್ಯ ಸಾರಾಂಶ. ಇದೆಲ್ಲಾ ತಮಗೆ ಗೊತ್ತಿದೆ. ಆದ್ದರಿಂದ ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಅದರ ಹಿಂದೆ ಮಾನ್ಯ ವಿರೋಧ ಪಕ್ಷದ ನಾಯಕರು ಸೂಚನೆ ಮಾಡಿದ್ದಾರೆ. ನ್ಯಾಷನಲ್ ವಾಟರ್ ಪಾಲಿಸಿ ಬಗ್ಗೆ ಎಲ್ಲರೂ ಕೂಡಾ ಹೇಳಿದ್ದಾರೆ. ಇದರ ಬಗ್ಗೆ ದ್ವಂದ್ವ ಅಭಿಪ್ರಾಯವಿಲ್ಲ. ನಾವು ಕೂಡಾ ಭಾಗಿಯಾಗಿದ್ದೇವೆ. ಇದೇ ವಿಚಾರದಲ್ಲಿ ಪ್ರಧಾನಮಂತ್ರಿಗಳಿಗೆ ಹೇಳತಕ್ಕಂಥ ಕಾಲದಲ್ಲಿಯಾಗಲೀ ಅಥವಾ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳು ಸೇರತಕ್ಕಂಥ ಸಂದರ್ಭದಲ್ಲಿ ಕೂಡಾ ನಾನು ಸೂಚ್ಯವಾಗಿ ಕೂಡಾ, ನೇರವಾಗಿ ಕೂಡಾ ಪ್ರಸ್ತಾಪ ಮಾಡಿದ್ದೇನೆ. ರಾಜ್ಯದ ಪರವಾಗಿ. ಆದ್ದರಿಂದ ಮಾತುಕತೆ ವಿಚಾರದಲ್ಲಿ ನಾನು ಈ ಸಂದರ್ಭದಲ್ಲಿ ಹಿಂದಿನ ಮುಖ್ಯಮಂತ್ರಿಗಳು.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಅಧ್ಯಕ್ಷರೇ, That is why I want to ask the Hon'ble Chief Minister, where is the point in going to the Tribunal once again which does not have guidelines at all? There is no point. It is totally meaningless. ಈಗಾಗಲೇ ಎರಡು ಬ್ಲಂಡರ್ ಮಾಡಿದೆ ಈಗ ಅಂತಿಮವಾಗಿ ಬ್ಲಂಡರ್ ಅನ್ನು ಈ ನ್ಯಾಯ ಮಂಡಳಿಯವರು ಮಾಡುತ್ತಿದ್ದಾರೆ ಎನ್ನುವುದು ಗೊತ್ತಿದ್ದೂ, ಗೊತ್ತಿದ್ದು ಏಕೆ ಮುಂದುವರಿಯಬೇಕು ಎಂದು ನನಗೆ ಅರ್ಥ ಆಗುತ್ತಿಲ್ಲ. ಇದಕ್ಕೆ ನೀರು ಅಂದರೆ ಗೊತ್ತಿಲ್ಲ. ಯಾವ ಮಣ್ಣಿಗೆ ಎಷ್ಟು ನೀರು ಬೇಕು ಎನ್ನುವುದು ಗೊತ್ತಿಲ್ಲ. ಯಾವ ರಾಜ್ಯದಲ್ಲಿ ಎಷ್ಟು ನೀರು ಹರಿಯುತ್ತಿದೆ ಎಂಬುದೂ ಗೊತ್ತಿಲ್ಲ. ಏನೂ ಗೊತ್ತಿಲ್ಲದೇ ಇರುವಂತಹ ನ್ಯಾಯ ಮಂಡಲಿ, ಗೈಡ್‌ಲೈನ್ಸ್ ಇಲ್ಲದೇ ಇರುವಂತಹ ನ್ಯಾಯ ಮಂಡಲಿ, ಮುಂದೆ ವಾದ ಮಾಡುವುದರಿಂದ ಏನು ಪ್ರಯೋಜನ ಎಂದು ನನಗಂತೂ ಗೊತ್ತಾಗುವುದಿಲ್ಲ. I do not know why this Government is hesitating to take a bold decision telling all this to the Union Government and to the Tribunal itself.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಎಸ್. ನಿಜಲಿಂಗಪ್ಪನವರು ಈ ನ್ಯಾಯ ಮಂಡಳಿಯನ್ನು ಬಾಯ್‌ಕಾಟ್ ಮಾಡಿ ಎಂದು ಹೇಳಿದ್ದಾರೆ. ನಮ್ಮ ಮಾತನ್ನು ನೀವು ಕೇಳುವುದಿಲ್ಲ. ಹೋಗಲಿ, ಅವರ ಮಾತನ್ನಾದರೂ ಒಪ್ಪಿಕೊಳ್ಳಿ.

ಶ್ರೀ ಕಾಗೋಡು ತಿಮ್ಮಪ್ಪ : ಮಾಜಿ ಮುಖ್ಯಮಂತ್ರಿಗಳು ಹೇಳುವುದು ಸುಲಭ. ಈಗಿನ ಮುಖ್ಯಮಂತ್ರಿಗಳು ಹೇಳುವುದು ಕಷ್ಟ. ಹಳ್ಳಿ ಗಾದೆ ಇದೆ; ಅದನ್ನು ನಾನು ಹೇಳುವುದಿಲ್ಲ. ಆಗ ಅವರು ಇದ್ದ ಕಾಲದಲ್ಲಿ ಇದನ್ನೆಲ್ಲಾ ಶಾಸ್ತ್ರೀಯವಾಗಿ ನಿರೂಪಣೆ ಮಾಡಿದ್ದರೆ ಇಷ್ಟು ಗೊಂದಲ ಬರುತ್ತಾ ಇರಲಿಲ್ಲ. ಮಾನ್ಯ ನಿಜಲಿಂಗಪ್ಪನವರು ಒಂದು ಕಾಲದಲ್ಲಿ ಅಜರಾಮರ. ಅಂದರೆ ರಾಷ್ಟ್ರೀಯ ಮಟ್ಟದ ನಾಯಕರಾಗಿದ್ದವರು, ಅವರು ಮಾಡಬಹುದಿತ್ತು. ಏಕೆ ಮಾಡಲಿಲ್ಲ.?

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾಡಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಈಗ ಶಾಸ್ತ್ರೀಯವಾಗಿ ಹೇಳುವುದಕ್ಕೆ ಬರುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾನು ಅದರ ಬಗ್ಗೆ ವ್ಯಾಖ್ಯಾನ ಮಾಡಲು ಹೋದರೆ ಬಹಳ ವಿಚಾರ ಮಾತನಾಡಬೇಕಾಗುತ್ತದೆ. ಆದ್ದರಿಂದ ಅದನ್ನು ಮಾತನಾಡುವುದು ಬೇಡ. ನಾನು ಏಕೆ ಹೇಳಿದೆ ಅಂದರೆ ನಾಳೆ ದಿನ ನೀವು ಒಂದು ಹೇಳಿಕೆ ಕೊಡುತ್ತೀರಿ. ಇಲ್ಲಿ ಹೇಳಿಕೆ ಕೊಟ್ಟ ತಕ್ಷಣ ತಮಿಳುನಾಡಿನವರು ಏನು ಮಾಡುತ್ತಾರೆ, ಕೇಂದ್ರ ಸರ್ಕಾರದವರು ಏನು ಮಾಡುತ್ತಾರೆ. ಇದೆಲ್ಲವನ್ನೂ ಸಹ ಗಮನದಲ್ಲಿಟ್ಟುಕೊಂಡು ನಾನು ಹೇಳಬೇಕು ಎನ್ನುವ ಉದ್ದೇಶದಿಂದ ಹೇಳಿದೆನೇ ಹೊರತಾಗಿ ಬೇರೆ ಯಾವ ಉದ್ದೇಶವೂ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಇದರಲ್ಲಿ ಇನ್ನೊಂದು ಭಾಗ ಇದೆ. ನ್ಯಾಯ ಮಂಡಳಿಯವರು ಹೇಳಿದ್ದನ್ನು ಮರೆತುಬಿಟ್ಟಿರಿ, ಅದನ್ನು ಹೇಳುತ್ತೇನೆ ಅವರು ಏನು ಹೇಳುತ್ತಿದ್ದಾರೆ ಎಂದರೆ ನ್ಯಾಯ ಮಂಡಳಿಯವರ ತೀರ್ಪನ್ನು ಬಾಯ್‌ಕಾಟ್ ಮಾಡಬೇಕು ಎಂದು ಪದೇ ಪದೇ ಒತ್ತಾಯ ಮಾಡುತ್ತಿದ್ದೀರಿ. ಏನಾದರೂ ಮಾಡಿ ಹಣ ತಂದು ಬೇಗ ಹಣ ಖರ್ಚು ಮಾಡಿ, ಈ ಯೋಜನೆಗಳನ್ನು ಪೂರ್ಣ ಮಾಡಿ ನೀರನ್ನು ನಮ್ಮ ಕರ್ನಾಟಕ ರಾಜ್ಯದ ರೈತರಿಗೆ ಕೊಡುವ ಬಗ್ಗೆ ಸರ್ಕಾರಕ್ಕೆ ಏನು ಸಹಕಾರ ಕೊಡಬೇಕೋ ಅದನ್ನು ವಿಚಾರ ಮಾಡಿ ಹೇಳಿ ಎಂದರೆ ಅದರ ಬಗ್ಗೆ ಇವರು ಕೇಳುವ ಹಾಗೆ ಇಲ್ಲ. ನ್ಯಾಯಮಂಡಳಿಯ ತೀರ್ಪನ್ನು ಬಾಯ್‌ಕಾಟ್ ಮಾಡಿ ಎಂದು ಒಂದೇ ಇವರು ಹೇಳುವುದು.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ತಿಮ್ಮಪ್ಪನವರೆ, ತಾವು ಈಗ ಏನು ಹೇಳುತ್ತಿದ್ದೀರಿ, ಈಗ ಇದನ್ನು ಮಾಡಲಿಕ್ಕೆ ಆಗಲಾರದ ಸ್ಥಿತಿಗೆ ತೀರ್ಪು ಬಂದಿದೆ. ಈಗ ನೀವು ಏನು ಹೇಳುತ್ತಿದ್ದೀರಿ, ಈಗ ಖರ್ಚು ಮಾಡುತ್ತಿರತಕ್ಕ ಹಣವೇ ವ್ಯರ್ಥ ಆಗುತ್ತದೆ. 1974ನೇ ಇಸವಿಯಿಂದ ನೀರಾವರಿ ಅಭಿವೃದ್ಧಿ ಏನು ಮಾಡಿದ್ದೀರಿ, ಅದನ್ನು ಅವರು ಮಾನ್ಯ ಮಾಡುವುದಕ್ಕೂ ತಯಾರು ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ತಾವು ಪಾರ್ಲಿಮೆಂಟ್ ಸದಸ್ಯರಾಗಿದ್ದವರು. ಈಗ ಇಲ್ಲಿ ಕಥೆ ಹೇಳುತ್ತಿದ್ದೀರಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಟ್ರೆಜರಿಯೂ ನಿಮ್ಮ ಹತ್ತಿರ ಇದೆ. ಬೀಗದ ಕೈ ಸಹ ನಿಮ್ಮ ಹತ್ತಿರ ಇದೆ, ಖರ್ಚು ಮಾಡಿ. ಏಕೆ ಖರ್ಚು ಮಾಡುತ್ತಿಲ್ಲ? ಕಳೆದ ವರ್ಷ ಮುವತ್ತು ಕೋಟಿ ರೂಪಾಯಿ ಖರ್ಚು ಮಾಡಿಲ್ಲ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ : ನೀವು ಏನಾದರೂ ಸಲಹೆ ಕೊಡಿ ಅಂದರೆ ಅದರ ಬಗ್ಗೆ ಏನೂ ವಿಚಾರವೇ ಇಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಪ್ರತಿವರ್ಷ ನೀರಾವರಿಗೆ ವೆಚ್ಚ ಮಾಡುತ್ತಿದ್ದೇವೆ ಎಂದು ಸದನದಲ್ಲಿ ಹೇಳುತ್ತೀರಿ, ಅದನ್ನು ಮರೆತಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕಾವೇರಿ ಕೃಷ್ಣ ಯೋಜನೆಗೆ ನೂರು ಕೋಟಿ ರೂಪಾಯಿ ಹೆಚ್ಚು ಖರ್ಚು ಮಾಡುತ್ತೇವೆಎಂದು ಹೇಳುತ್ತೀರಿ. ಇದುವರೆಗೆ ಮೂರು ತಿಂಗಳಿಂದ 30 ಕೋಟಿ ರೂಪಾಯಿ ಸಹ ಖರ್ಚು ಮಾಡಿಲ್ಲ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ತಿಮ್ಮಪ್ಪನವರೇ, ನಿಮ್ಮ ಮಾತು ಕೇಳಿ ಒಂದು ಮಾತು ಹೇಳಬೇಕು ಎಂದು ನಿಂತಿದ್ದೇನೆ. ನಿಮಗೆ ರಾಜಕೀಯ ಬೇಕು, ಪರಿಹಾರ ಬೇಡ ಎಂಬ ಮಾತನ್ನು ಹೇಳುತ್ತಿದ್ದೀರಿ. ಇದು ನಿಮ್ಮ ಎತ್ತರಕ್ಕೆ ಸಲ್ಲದ ಮಾತು. ಈಗ ನಾವು ಅದರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಹಣ ತರುವ ವಿಚಾರದಲ್ಲಿ ಆಗಲೀ, ಅಥವಾ ಅದನ್ನು ಖರ್ಚು ಮಾಡತಕ್ಕ ವಿಚಾರದಲ್ಲಿ ಆಗಲೀ ಸಂಪೂರ್ಣವಾದ ಸಹಕಾರ ಕೊಡುತ್ತೇವೆ. ಎಂದು ಹೇಳಿದ್ದೇವೆ. ಇದೇ ಸದನದಲ್ಲಿ ಇಲ್ಲೇ ಹೇಳಿದ್ದೇವೆ ಅದಕ್ಕಾಗಿಯೇ ನಾನು ಬೆಳಿಗ್ಗೆ ಕೋಟ್ ಮಾಡಿದೆ. ಈಗ ಇರತಕ್ಕ ಪರಿಸ್ಥಿತಿಯನ್ನು ದಯಮಾಡಿ ಅರ್ಥ ಮಾಡಿಕೊಳ್ಳಿ. According to the latest Order of the Tribunal,ನಿಮ್ಮ ರಿವ್ಯೂ ಪಿಟಿಷನ್‌ನಲ್ಲಿ ಬಂದಿರತಕ್ಕ ಆಜ್ಞೆ ಪ್ರಕಾರ 1974ನೇ ಇಸವಿಯಿಂದ ಅಭಿವೃದ್ಧಿ ಕೆಲಸ ಏನು ಮಾಡಿದ್ದೀರಿ, ಮುಂದೆ ಮಾಡುವುದಿಲ್ಲ, ಇದನ್ನು ಕೂಡ ಅವರು ಮಾನ್ಯ ಮಾಡುವುದಕ್ಕೆ ಸಿದ್ಧ ಇಲ್ಲ. They go back to between 1964 and 1974. That is the problem. ನೀವು ಮುಂದೆ ಖರ್ಚು ಮಾಡತಕ್ಕದ್ದು ಮತ್ತೊಂದನ್ನು ಮಾಡತಕ್ಕದ್ದು, ಅದರ ಬಗ್ಗೆ ಚರ್ಚೆ ಮಾಡೋಣ. ಆ ಕಾರಣಕ್ಕಾಗಿಯೇ ಈ ಟ್ರಿಬ್ಯುನಲ್ ತೀರ್ಪು ಬಹಿಷ್ಕಾರ ಮಾಡಿ ಎಂದು ಹೇಳುತ್ತಿದ್ದೇವೆ.

ಶ್ರೀ ಎಸ್. ಬಂಗಾರಪ್ಪ : ಬಹಿಷ್ಕಾರ ಹಾಕತಕ್ಕ ವಿಚಾರದಲ್ಲಿ ನಾನು ಹೇಳುತ್ತಿದ್ದೆ. ಈ ಸಂದರ್ಭದಲ್ಲಿ ನಾವು ಬಹಿಷ್ಕಾರ ಹಾಕತಕ್ಕಂಥ ವಿಚಾರದಲ್ಲಿ ನ್ಯಾಯಮಂಡಳಿಯ ಮುಂದೆ ಇದ್ದಂಥ ನಮ್ಮ ಕೇಸ್‌ನ ಬಗ್ಗೆ ಅಂಥ ಒಂದು ಸಂದರ್ಭ ಬಂದಾಗ ನಾವು ವಿಚಾರ ಮಾಡೋಣ—ಎನ್ನತಕ್ಕಂಥ ಮಾತನ್ನು ನಾನು ಹೇಳಿದ್ದೇನೆ. ಬಹಿಷ್ಕಾರ ಹಾಕತಕ್ಕಂಥ ಮಾತು, ಅದರ ಬಗ್ಗೆ ನಾವು ಒಂದು ನಿರ್ಣಯವನ್ನು ಒಂದು ತೀರ್ಮಾನವನ್ನು ತೆಗೆದುಕೊಳ್ಳತಕ್ಕಂಥದ್ದರ ಬಗ್ಗೆ ಈಗ ಸುಲಭವಾಗಿ ಕಾಣಬಹುದು. ಆದರೆ ಒಂದು ಸಾರಿ ಹಾಗೆ ನಿರ್ಣಯವನ್ನು ತೆಗೆದುಕೊಂಡ ಮೇಲೆ ಅದು ಗೊತ್ತಾಗುತ್ತದೆ. ಅದು ಅಂತಿಮವಾದ ತೀರ್ಮಾನ ಅಲ್ಲ. Till now pleadings are not completed for your kind information. ಈ ಮಾತನ್ನು ನಾನು ತಮಗೆ ಹೇಳಿದ್ದೇನೆ ಮತ್ತು ಸಭೆಯಲ್ಲಿಯೂ ಕೂಡ ಹೇಳಿದ್ದೇನೆ. That's why I said pleadings themselves are not completed before the Tribunal. ನಾವು ಈಗಾಗಲೇ ಬಹಿಷ್ಕಾರ ಹಾಕಿದ್ದೀರಿ ಎಂದು ಇಟ್ಟುಕೊಳ್ಳೋಣ.

It may amount to something else, I do not want to go into the legal aspect.

ಆ ಬಗ್ಗೆ ವಿವರಗಳಿಗೆ ನಾನು ಹೋಗುವುದಿಲ್ಲ. ಈಗ ಇದ್ದ ಪ್ಲೀಡಿಂಗ್ಸ್ ಕಂಪ್ಲೀಟ್ ಆದಮೇಲೆ, it may take another nature. That's why.....

ಅದಕ್ಕಾಗಿ ನಾನು ಈ ಸಂದರ್ಭ ಬೇಡ ಎಂದು ಹೇಳುತ್ತಿರುವುದು ಆದ್ದರಿಂದ ಮಾನ್ಯ ಅಧ್ಯಕ್ಷರ ಅನುಮತಿ ಪಡೆದು ಈ ವಿಚಾರವನ್ನು ಅಲ್ಲಿಗೇ ಬಿಡುತ್ತೇನೆ. ಹೆಚ್ಚಿನ ವಿವರಗಳಿಗೆ ನಾನು ಹೋಗುವುದಿಲ್ಲ. ಇಷ್ಟು ವಿಚಾರಗಳನ್ನು ನಾನು ಇಲ್ಲಿ ಹೇಳಿದಾಗ ತಾವುಗಳು ಮಾನ್ಯ ಹೆಚ್.ಡಿ. ದೇವೇಗೌಡರವರು ಹೈಕೋರ್ಟ್‌ನಲ್ಲಿ ಒಂದು ಕೇಸನ್ನು ಹಾಕಿದ್ದಾರೆ ಎಂದು ಹೇಳಿದ್ದೀರಿ. ನಾನು ಕೂಡ ಪತ್ರಿಕೆಗಳಲ್ಲಿ ಆ ವಿಚಾರವನ್ನು ನೋಡಿದ್ದೇನೆ. ಅವರ ಹತ್ತಿರ ಒಂದು ವಿಡಿಯೋ ಕ್ಯಾಸೆಟ್ ಕೂಡ ಇದೆ ಎಂದು ಹೇಳಿದ್ದಾರೆ. ನಾನು ಕೂಡ ಅದನ್ನು ನಮಗೆ ಕಳುಹಿಸಿಕೊಡುತ್ತಾರೆ ಎಂಬ ದೃಷ್ಟಿಯಿಂದ ಕಾಯುತ್ತಾ ಇದ್ದೆ. ಆದರೆ ಅದು ಇನ್ನೂ ನಮಗೆ ತಲುಪಿಲ್ಲ. ಅದರಲ್ಲಿ ಟ್ರಿಬ್ಯುನಲ್ ಸದಸ್ಯರು ತಮಿಳುನಾಡಿಗೆ ಹೋದಂಥ ಸಂದರ್ಭದಲ್ಲಿ ಅವರಿಗೆ ಯಾವರೀತಿಯಾಗಿ ಅಲ್ಲಿ ಉಪಚಾರ ಇತ್ಯಾದಿಗಳು ಯಾವರೀತಿ ನಡೆಯಿತು, ಅಲ್ಲಿ ಏನೇನು ನಡೆಯಿತು, ಏನೇನು ಕೊಟ್ಟಿದ್ದಾರೆ ಎಂಬ ಬಗ್ಗೆ ಕ್ಯಾಸೆಟ್‌ನಲ್ಲಿ ಇದೆ ಎಂಬುದನ್ನು ಪತ್ರಿಕೆಗಳಲ್ಲಿ ಓದಿ ತಿಳಿದುಕೊಂಡಿದ್ದೇನೆ. ಅಂಥ ಒಂದು ಸಂದರ್ಭ ಬಂದರೆ we may be able to accept the suggestion that is now made by the Hon'ble Member of the Lok Sabha Sri Devegowda

ಶ್ರೀ ಡಿ.ಬಿ. ಚಂದ್ರೇಗೌಡ :— ಗಾರ್ಡ್ ಆಫ್ ಆನರ್, . . .

ಶ್ರೀ ಎಸ್. ಬಂಗಾರಪ್ಪ :— ಗಾಡ್ ಆಫ್ ಆನರ್, ಪ್ರೆಸೆಂಟೇಷನ್ಸ್, ಆನರ್‌ಗಳು, ಪೂಜೆ–ಪುನಸ್ಕಾರಗಳು, ಮುಂತಾಗಿ ಎಲ್ಲಾ ವಿವರಗಳು ಅದರಲ್ಲಿ ಇದೆ ಎಂದು ಕೇಳಿದ್ದೇನೆ. ಆ ಕ್ಯಾಸೆಟ್ ಗಂಟೆಗಟ್ಟಳೆ ರನ್ ಆಗಿದೆ ಎಂದು ಕೂಡ ಕೇಳಿದ್ದೇನೆ. ತಮ್ಮ ಹತ್ತಿರ ಇದ್ದರೂ ಕೂಡ ನೋಡಿ. ನನಗೆ ಅದು ಇನ್ನೂ ನೋಡಲು ಸಿಕ್ಕಿಲ್ಲ. ಬಹುಶಃ ಅವರು ಅದನ್ನು ಗೋಪ್ಯವಾಗಿ ಇಟ್ಟಿದ್ದಾರೆ ಎಂದು ಕಾಣುತ್ತದೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಪ್ರಧಾನ ಮಂತ್ರಿಗಳಿಗೆ ಈಗಾಗಲೇ ಅದನ್ನು ತಲುಪಿಸಿದ್ದಾರೆ. ಅವರಿಗೆ ಈ ಬಗ್ಗೆ ಪತ್ರವನ್ನು ಕೂಡ ಬರೆದಿದ್ದಾರೆ. ಈ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವ ಬಗ್ಗೆ ಮನವಿಯನ್ನು ಕೂಡ ಮಾಡಿಕೊಂಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಬೇಕು ಎಂದರೆ ಅವರಿಗೂ ಕ್ಯಾಸೆಟ್ಟನ್ನು ಒದಗಿಸಿಕೊಡುವ ವ್ಯವಸ್ಥೆಯನ್ನು ಮಾಡುತ್ತೇನೆ. ಇಷ್ಟಾದರೂ ಕೂಡ ಆ ಸದಸ್ಯರಾಗಿರತಕ್ಕಂಥವರು ಜಪ್ಪಯ್ಯ ಎಂದರೂ ಕೂಡ ತಮ್ಮ ಸ್ಥಳವನ್ನು ಬಿಟ್ಟುಕೊಡಲು ಇನ್ನೂ ತಯಾರಾಗಿಲ್ಲ. ಅಲ್ಲಿಗೆ ಕೋರ್ಟ್ ನೋಟೀಸ್ ಹೋದ ಮೇಲೆಯೂ ಕೂಡ ಏನು ನಡೆಯುತ್ತದೆ ಅಂದರೆ ತಮಿಳುನಾಡಿನಲ್ಲಿ ತಮಗೆ ಬಳುವಳಿಯಾಗಿ ಬಂದಿರತಕ್ಕಂಥಾದ್ದು; ಅದನ್ನು ಯಾರ ಸ್ವಂತಕ್ಕೂ ಕೊಟ್ಟಿಲ್ಲ, ಟ್ರಿಬ್ಯುನಲ್ ಪ್ರವಾಸಕ್ಕೆ ಹೋದಾಗ ಟ್ರಿಬ್ಯುನಲ್‌ಗೆ ಅದನ್ನು ಕೊಟ್ಟಿರತಕ್ಕಂಥಾದ್ದು, ಆದ್ದರಿಂದ ನಾವು ಅದನ್ನು ಟ್ರಿಬ್ಯುನಲ್ ಕಚೇರಿಯಲ್ಲಿ ಇಟ್ಟುಬಿಡುತ್ತೇವೆ ಎಂದು ಹೇಳತಕ್ಕಂಥ ಮಾತುಗಳು ಕೇಳಿ ಬರುತ್ತಿವೆ. ಹೀಗೆ ಪಿಟಿಶನ್ ವಿಚಾರದಲ್ಲಿ ಸರ್‌ಕಂಬೆಂಟ್ ಮಾಡತಕ್ಕಂಥ ಒಂದು ಪ್ರಯತ್ನ ಕೂಡ ನಡೆದಿದೆ ಎಂದು ತಿಳಿದುಬಂದಿದೆ.

ಶ್ರೀ ಕಾಗೋಡು ತಿಮ್ಮಪ್ಪ : ನಮಗೂ ಆ ಕ್ಯಾಸೆಟ್ಟನ್ನು ತೋರಿಸಿ ಸ್ವಾಮಿ......

ಶ್ರೀ ಬೈರೇಗೌಡ : ತಾವುಗಳು ಡೆಲ್ಲಿಗೆ ಕರೆದುಕೊಂಡು ಹೋಗುವ ವ್ಯವಸ್ಥೆಯನ್ನು ಮಾಡಿಸಿ, ಬರುವುದಕ್ಕೆ ನಾವು ತಯಾರಾಗಿದ್ದೇವೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸದಸ್ಯರು ಆ ಕ್ಯಾಸೆಟ್ಟನ್ನು ಒದಗಿಸಿಕೊಡುತ್ತೇವೆ ಎಂದು ಹೇಳಿದ್ದಾರೆ. ಅದಕ್ಕಾಗಿ ಧನ್ಯವಾದಗಳು. ಅದು ಶೀಘ್ರವಾಗಿ ನಮ್ಮ ಹತ್ತಿರ ಬರುವಂತೆ ಆಗಲಿ, ಈಗ ಇದರಲ್ಲಿ ಎರಡು ವಿಚಾರಗಳು ಇವೆ. ಈಗ ಇರತಕ್ಕಂಥ ಮೆಂಬರ್‌ಗಳ ಬಗ್ಗೆ ನೀವು ಹೀಗೆ ಮಾಡಿದರೆ ಅವರು ಕಂಟಿನ್ಯೂ ಆದರೆ ಎಂಬ ವಿಷಯ ಇದೆ, ಮತ್ತು ಇರುವವರನ್ನು ತೆಗೆದು ಬೇರೆಯವರನ್ನು

ಹಾಕತಕ್ಕಾಂಥಾದ್ದು ಕೂಡ ಬರುತ್ತದೆ. ಹೀಗೆ ಇಂಥ ಹಲವಾರು ವಿಚಾರಗಳು ಬರುತ್ತವೆ. ಹಾಗಾಗಿ ಬಹಿಷ್ಕಾರ ಹಾಕುವುದು Once for all, whether these present members are continued to be there or not.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಯವರು ಇತ್ತೀಚೆಗೆ ಯಾಕೋ ಒಂದು ರೀತಿಯಾಗಿ ಇದ್ದಾರೆ. ಸರಿಯಾಗಿ ಕಾಣುತ್ತಿಲ್ಲ......

ಶ್ರೀ ಎಸ್. ಬಂಗಾರಪ್ಪ : ಈ ವಿಚಾರದ ಬಗ್ಗೆ ತಾವುಗಳು ಏನು ಅಭಿಪ್ರಾಯವನ್ನು ಪಡುತ್ತಾ ಇದ್ದೀರಿ, ಮತ್ತು ಬಹಿಷ್ಕಾರ ಮಾಡುವಂಥದ್ದರ ಬಗ್ಗೆ ಏನು ಹೇಳಿದ್ದೀರಿ ಆ ಸಂದರ್ಭ ಬಂದಾಗ ಅದರ ಬಗ್ಗೆ ನೋಡೋಣ. This is not the actual time to consider all these things to take up a decision which would amount to hasty decision. ಎನ್ನತಕ್ಕಂಥ ಇಂಥ ಒಂದು ಅಭಿಪ್ರಾಯವು ನಮ್ಮಲ್ಲಿ ಇರುವುದರಿಂದ ತಾವು ಅದನ್ನು ಸಾವಧಾನದಿಂದ ತಡೆದುಕೊಳ್ಳಬೇಕೆಂದು ಆ ಒಂದು ಭಾವನೆಯಿಂದ ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಹೇಳಬಯಸುತ್ತೇನೆ. ಪ್ರಧಾನ ಮಂತ್ರಿಗಳಿಗೆ ಕೊಟ್ಟಿದ್ದೇವೆಂದಿದ್ದಾರೆ. ಅದು ಅವರ ಬಳಿ ಇರುತ್ತದೆ. ಹಕ್ಕುಚ್ಯುತಿ ಬಗ್ಗೆ ನಾನು I think I have made out two points which are the main points that I have touched. Therefore, this notice I think notice I think is liable to be rejected. ಮತ್ತೊಂದು ವಿಚಾರ ಏನೆಂದರೆ ನೀರು ಕೊಟ್ಟಿದ್ದೇವೆ. ಅಂತ ಹೇಳ್ತಾರಲ್ಲ, ಯಡಿಯೂರಪ್ಪನವರೇ ಆ ಲೆಟರ್ ಕೊಡ್ತೀನೀಂತ ಹೇಳಿದ್ದನಲ್ಲ, ಒಂದು ಲೆಟರ್ ಕಳಿಸಿದ್ದು ವಿ.ಸಿ. ಶುಕ್ಲ ಅವರಿಗೆ ಆಮೇಲೆ ಆ ಲೆಟರ್

Sri D.B. Chandre Gowda : Why don't you lay it on the table of thed House?

Sri S. Bangarappa : "This is in continuation of my letter dated 30th June. The proposal contained in your letter obviously means an informal arrangement among the States. It would help this State to consider the proposal if it appraised of the procedures and modalities which are likely to be adopted by the CWC in order to monitor the implementation of the order at this stage during the pendency of the proceedings before the Tribunal. For instance, reference may be made to the circumstance such that the central water commission (CWC) is not maintaining any station at Mettur. ನೀವು ಸ್ಟೇಷನೇ ಇಟ್ಟಿಲ್ಲ ಎಂಬುದನ್ನು ರೈಟ್ ಮಾಡಿದ್ದೇವೆ ಅದನ್ನು There is a wide difference between the inflows as recorded at Biligondlu in CWC Gauging Station and that recorded at Mettur by the State of Tamil Nadu without sorting out all such aspects by the Government of India, the question of referring the matter to control water Commission for monitoring and implementation of the Interim order of the Tribunal is premature and hence the proposal is rejected" ಬರೀ ಆಕ್ಸೆಪ್ಟ್ ಮಾಡ್ತೀನಿ ಅಂತಾನೂ ಹೇಳಿಲ್ಲ, ನಾವು ತಿರಸ್ಕರಿಸುತ್ತೇವೆಂದಿದ್ದೇವೆ. ಆದಕ್ಕೇ ಸದನದಲ್ಲಿ ನಾನು ಮಾತಾಡುವಾಗ ಹೇಳಿದ್ದು ಇನ್ನೊಂದು ತಾವು ಡಬ್ಲ್ಯುಆರ್ ಚೀಫ್ ಇಂಜಿನಿಯರ್‌ದು ಅಂತ ಹೇಳಿದಿರಿ.

This letter is dated 10-6-92. ಪ್ರತಿವರ್ಷವೂ ಕೂಡ ಎಲ್ಲಾ ರಿಸರ್ವಾಯರ್‌ದ್ದು ನೀರು ಗೇಜ್ ಮಾಡುವ ವಿಚಾರದಲ್ಲಿ ಕಳಿಸಿಕೊಡ್ತಾರೆ. ಸೂಪರಿಂಟೆಂಡ್ ಇಂಜಿನಿಯರೋ ಎಕ್ಸಿಕ್ಯುಟೀವ್ ಇಂಜಿನೀಯರೊ, ಇದಕ್ಕೆಲ್ಲಾ ಇನ್‌ಚಾರ್ಜ್ ಕಳುಹಿಸಿಕೊಡತಕ್ಕಂಥಾದ್ದು ಇದೆ. Subject : continous gauging of Cauvery river and its Tributaries in the Cauvery basin - regarding. You are hereby directed to take appropriate action to

see that regular gaugings are carried out on the river Cauvery and its Tributaries on each day and in respect of these Gauging stations, the data so collected is sent to central office so as to reach the following day. You are also hereby directed to ensure that the gauging should be done...."

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ಹೇಳಿದ ಪತ್ರವೇ ಬೇರೆ, ಮುಖ್ಯಮಂತ್ರಿಗಳು ಓದ್ತಾ ಇರೋ ಪತ್ರಾನೇ ಬೇರೆ. ನಾವು ಹೇಳಿದ ಪತ್ರದ D.o No. WRD PS : Cauvery Gauging/92-93. This is a peculiar letter which does not have a date.

Sri S. Bangarappa : That is the point. We have got the date here.

ಅಧ್ಯಕ್ಷರು : ತಾರೀಖು ಇಲ್ಲದೇ ಇರೋದನ್ನು ಇಲ್ಲಿ ತರುತ್ತಿದ್ದೀರಿ ಸುಮ್ಮ ಸುಮ್ಮನೆ.

Prof. M.D. Nanjundaswamy : It is called peculiar becauses it is dateless.

Sri. S. Bangarappa : This is dated 10-6-92. "You are also hereby directed to ensure that the gauging should be done daily without fail...."

Sri D.B. Chandre Gowda : The First paragraph of the CM's letter ನಂಬರ್ ಬಿಟ್ಟುಬಿಟ್ಟಿದ್ದಾರ. Incorporation of the CM letter. I would like to know the number of the letter.

Mr. Speaker: If the Chief Minister can reveal the date, he certainly would also reveal the number. There is not much difference.

ಶ್ರೀ ಎಸ್. ಬಂಗಾರಪ್ಪ : ನಂಬರ್ ಗೇಜ್ ಯಾವುದಾದರೂ ಸಿಗುತ್ತದೆ.

D.O. No: WRDO/PS/Cau. Gauging/92–93.

ಬೇರೆ ಬೇರೆ ನಂಬರನ್ನು ಕೊಡುವುದಕ್ಕೆ ಬರುವ ಹಾಗೆ ಇಲ್ಲ. ನಿಮ್ಮ ಲೆಟರ್‌ಗೆ ಡೇಟ್ ಇಲ್ಲ. ಡೇಟ್ ನಮ್ಮ ಲೆಟರ್‌ಗೆ ಇದೆ. ನೀವು ಓದಿದಮೇಲೆ ಇದು ಯಾವುದು ಎಂದು ಹುಡುಕಿಸಿ ಹುಡುಕಿಸಿ ಸಾಕಾಗಿ ಹೋಯಿತು. ಆದುದರಿಂದ ಮಾನ್ಯ ಸಭಾಧ್ಯಕ್ಷರೇ ಮುಂದಿನದನ್ನು ಓದುತ್ತೇನೆ. " You are also hereby directed to ensure that the gauging should done daily without fail and there should be a continuous gauging especially throughout the rainy season. ಇದು ಪ್ರತಿ ವರ್ಷ ಹೋಗುತ್ತಿದೆ. "The receipt of this DO may please be acknowledged and action taken be intimated. With best wishes, sd/- Chief Engineer, dated 10.6...."

(ಗೊಂದಲ)

ಆದಕ್ಕೆ ನಾನು ಹೇಳುವುದು, ನೀವು ಯಾವುದೋ ಲೆಟರನ್ನು ತೆಗೆದುಕೊಂಡು ಅದಕ್ಕೆ ದೇಟ್ ಇಲ್ಲ ಏನಿಲ್ಲ, ಅದನ್ನೂ ಹಿಡಿದುಕೊಂಡು ಬಂದು ಈ ರೀತಿ ನೀರನ್ನು ಬಿಟ್ಟಿದ್ದಾರೆ. ಎಂದು ಹೇಳುತ್ತೀರಲ್ಲಾ, ದಯವಿಟ್ಟು ಮಾನ್ಯ ಸಭಾಧ್ಯಕ್ಷರೇ, ಇದು ಸರಿಯಾದಂಥದ್ದು ಅಲ್ಲ ಎಂದು ನನ್ನ ಭಾವನೆಯನ್ನು ಸ್ಪಷ್ಟವಾಗಿ ತಿಳಿಸುತ್ತಿದ್ದೇನೆ. ನಾವು ಏತಕ್ಕೆ ಟ್ರಿಬ್ಯೂನಲ್ ಮುಂದೆ ಇರತಕ್ಕಂಥ ಪ್ರೊಸೀಡಿಂಗ್ಸ್ ಮತ್ತೊಂದು ಅದು ಏನೇನೊ ಓದಿದ್ದೀರಿ, ಅದನ್ನು ನಾನು ಅಲ್ಪಸ್ವಲ್ಪ ಕೇಳಿದೆ, ನಮಗೆ ಏನು ಸಂಬಂಧ ಬರುತ್ತದೆ? ಆಫೀಸರ್ಸ್‌ಗೆ ಏನು ಸಂಬಂಧ ಬರುತ್ತದೆ? ಅದು ಏನಿದ್ದರೂ ಕೂಡ ಗೌರ್ನಮೆಂಟ್ ಲೆವೆಲ್‌ನಲ್ಲಿ ತೀರ್ಮಾನ ಮಾಡತಕ್ಕಂಥ ವಿಚಾರವೇ ವಿನಹಾ ಬೇರೆ ಯಾವುದಕ್ಕೂ ಕೂಡ ಬರತಕ್ಕಂಥ ವಿಚಾರ ಅಲ್ಲ. We are straight on record and we are true to letter and spirit. We are true to the subject. ಅದು ಹೇಗೆ ಇರಬೇಕು ಎನ್ನತಕ್ಕಂಥದ್ದಕ್ಕೆ

ನಾವು ಕರಾರುವಾಕ್ಕಾಗಿ ನಾವು ವಿಚಾರದಲ್ಲಿ ಇದ್ದೇವೆ. ಇಷ್ಟು ಮಾತ್ರ ಹೇಳುತ್ತೇನೆ. Chief Engineer, WRDO is only to maintain records. ಇದನ್ನು ಏತಕ್ಕೆ ಬರೆಯುತ್ತಾರೆ ಎಂದರೆ ಚೀಫ್ ಇಂಜಿನಿಯರ್ is only to meant to maintain these records of gauging and is not incharge of thed Reservoirs. ಅವೆಲ್ಲಾ ಇರಬೇಕು ಎನ್ನತಕ್ಕಂಥದ್ದು.

ತಾವು ಹೋದಾಗ ಏನಾಗುತ್ತದೆ, ರಿಸರ್ವಾಯರ್ಸ್ ಮತ್ತೊಂದು ನೀರು ಬಿಡುವುದು, No. WRDO ಚೀಫ್ ಇಂಜಿನಿಯರ್‌ಗೆ ಬರುವುದಿಲ್ಲ. He is only incharge of gauging work. ನೀರು ಬಿಡುವುದು ಮತ್ತೊಂದು ತೆಗೆದುಕೊಂಡು ನೀರನ್ನು ಬಿಡಬೇಕಾಗುತ್ತದೆ. ಎಂದು ಹೇಳಿದರೆ ಏನು ಸಂಬಂಧ ಬರುತ್ತದೆ? Your letter refers to all those details which are unwarranted, unfounded and baseless.

ಇಷ್ಟು ಮಾತನ್ನು ಈ ಸಂದರ್ಭದಲ್ಲಿ ಹೇಳಬಹುದು. ಮಾನ್ಯ ಸಭಾಧ್ಯಕ್ಷರೇ, ಇಷ್ಟು ವಿಚಾರವನ್ನು ಹೇಳಿದ ಮೇಲೆ ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಮಿತ್ರರು, ಮಾನ್ಯ ಸದಸ್ಯರು ವಿರೋಧ ಪಕ್ಷದಗಳ ಎಲ್ಲಾ ನಾಯಕರುಗಳು ಇದನ್ನು ಒಪ್ಪುತ್ತೀರಿ ಎಂದು ಭಾವಿಸಿದ್ದೇನೆ. ದಯವಿಟ್ಟು ಈ ವಿಚಾರವನ್ನು ನಾವು ಇಲ್ಲಿಗೆ ನಿಲ್ಲಿಸೋಣವೆಂದು ಮತ್ತೊಮ್ಮೆ ತಮ್ಮ ಮುಖಾಂತರ ನಾನು ವಿನಂತಿ ಮಾಡುತ್ತೇನೆ, ಸಭೆಯನ್ನು ಮತ್ತೆ ಕರೆಯೋಣ. ದಯವಿಟ್ಟು ಎಲ್ಲರೂ ಬರಬೇಕು. ಮತ್ತೆ ಕುಳಿತು ತಾವು ಮಾಡತನಾಡಬೇಕು. ಇದರಲ್ಲಿ ನಮ್ಮ ಹಿತವನ್ನು ಕಾಪಾಡತಕ್ಕಂಥದ್ದು ಅಡಗಿದೆ. ಯಾವುದೇ ಸಂದರ್ಭದಲ್ಲಿ ಸರ್ಕಾರ ಮಾತ್ರ ಕರ್ನಾಟಕ ರಾಜ್ಯದ ರೈತರ ಹಿತವನ್ನು, ರಾಜ್ಯದ ಹಿತವನ್ನು ಕಾಪಾಡುವುದಕ್ಕೆ ತಮ್ಮ ಹಾಗೆ ಕಳಕಳಿಯ ಹಿನ್ನಲೆಯಲ್ಲಿ ನಾವು ಯಾವುದೇ ಸಂದರ್ಭದಲ್ಲೂ ಬಿಟ್ಟುಕೊಡುವುದಿಲ್ಲ, ಕೊನೆಯವರೆಗೂ ಕಾಯುತ್ತೇವೆ ಎನ್ನತಕ್ಕಂಥ ಮಾತನ್ನು ನಾನು ತಮ್ಮ ಮುಖಾಂತರ ಸದನದ ಮುಖಾಂತರ ರಾಜ್ಯದ ಜನತೆಗೆ ನಾನು ಕೊಡುವುದಕ್ಕೆ ಇಚ್ಛಿಪಡುತ್ತೇನೆ. ಹಾಗೂ ನಾನು ತಮಗೆ ವಂದಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಇದನ್ನು ಹಕ್ಕುಬಾಧ್ಯತಾ ಸಮಿತಿಗೆ ದಯಮಾಡಿ ಕಳುಹಿಸಬೇಕು ಎಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

Sri. D.B. Chandregowda : I seek your considered ruling Mr. Speaker : If you want my decision, I can give it right now. If you want my considered ruling, I would give it on Monday. Which would you prefer ?

Sri. D.B. Chandre Gowda : Monday's consideredd Ruling.

Mr. Speaker : Yes. You have preferred Monday's considered ruling.

ಶ್ರೀ ಬಿ.ಎಸ್. ಯಡಿಯೂರಪ್ಪ : ಇನ್ನೂ ಪ್ರಮುಖವಾದ ವಿಷಯಗಳಿವೆ.

ಅಧ್ಯಕ್ಷರು : ಪ್ರಮುಖವಾದ ವಿಚಾರಗಳಿವೆ, ಬಹಳ ಇವೆ; ಆದರೆ ಈಗ ನಾವು ಸಭೆಯನ್ನು ಮುಂದೂಡಿ ಪುನಃ ಸೋಮವಾರ ಹತ್ತು ಗಂಟೆಗೆ ಸಮಾವೇಶವಾಗೋಣ.

(ಸದನವು 6—43ಕ್ಕೆ ಮುಕ್ತಾಯಗೊಂಡು ಮತ್ತೆ 13ನೇ ಜುಲೈ ಮಾಹೆ 1992ರ ಸೋಮವಾರ ಬೆಳಿಗ್ಗೆ 10 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು).

(+ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಗಳನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)